


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 12 ಸೋಮವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 26 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಭಾರತ–ಪಾಕ್ ಇಂದು ಮಾತುಕತೆ

- ಸೇನಾಪಡೆಗಳ ಮುಖ್ಯಸ್ಥರ ಜೊತೆ ಭದ್ರತಾ ಸಭೆ ನಡೆಸಿದ ಪ್ರಧಾನಿ ಮೋದಿ
- ಪಿಒಕೆ ಬಿಟ್ಟು ತೊಲಗಿ, ಉಗ್ರರ ಹಸ್ತಾಂತರಿಸಿ ಪ್ರಸ್ತಾವ ನಿರ್ಧಾರ


ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸೇನಾಪಡೆಗಳ ಮುಖ್ಯಸ್ಥರೊಂದಿಗೆ ಭದ್ರತಾ ಸಭೆ ನಡೆಸಿದರು.

ನವದೆಹಲಿ, ಮೇ 11– ಭಾರತ–ಪಾಕಿಸ್ತಾನ ನಡುವಿನ ಕದನ ವಿರಾಮ ಒಪ್ಪಂದದ ಬಳಿಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ನಿವಾಸದಲ್ಲಿ ಭಾನುವಾರ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಕದನ ವಿರಾಮ ಒಪ್ಪಂದ ಬಳಿಕದ ಗಡಿ ಪರಿಸ್ಥಿತಿ ಕುರಿತು ಈ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಈ ಉನ್ನತ ಮಟ್ಟದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಮತ್ತು ಮೂರೂ ಸೇನಾಪಡೆಗಳ ಮುಖ್ಯಸ್ಥರು ಭಾಗವಹಿಸಿದ್ದರು. ಪಾಕಿಸ್ತಾನದ ಗಡಿಯ ಬಳಿ ಶಾಂತಿ ನೆಲೆಸಿದೆ. ಯಾವುದೇ ಹೊಸ ಗುಂಡಿನ ದಾಳಿ ನಡೆದಿಲ್ಲ. ಯಾವುದೇ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಸಶಸ್ತ್ರ ಪಡೆಗಳು ಸಿದ್ಧವಾಗಿವೆ ಎಂಬುದನ್ನು ಈ ಸಭೆ ಮತ್ತೊಮ್ಮೆ ಒತ್ತಿ ಹೇಳಿದೆ.

ಗಡಿಯಲ್ಲಿ ಮೊದಲು ಗುಂಡಿನ ದಾಳಿ ನಡೆದಿದ್ದು ಪಾಕಿಸ್ತಾನದ ಕಡೆಯಿಂದ, ಹಾಗೆಯೇ ಕದನ ವಿರಾಮಕ್ಕೆ ಬದ್ಧ ಎಂದೂ ಮೊದಲು ಹೇಳಿದ್ದು ಅದೇ ರಾಷ್ಟ್ರ. ಹೀಗಾಗಿ ಸ್ವರಕ್ಷಣೆಯ ಹಕ್ಕನ್ನು ಭಾರತ ಕಾಯ್ದಿರಿಸಿದೆ ಎಂಬ ಸಂದೇಶವನ್ನು ಈ ಸಭೆಯ ಮೂಲಕ ಸಾರಲಾಯಿತು.

ಭಾರತದ ದಾಳಿಯ ನಂತರ ಪಾಕಿಸ್ತಾನವು ಶಾಂತಿ ಸ್ಥಾಪನೆಗಾಗಿ ಅಮೆರಿಕದ ಸಹಾಯ ಕೇಳಿತು. ನಂತರ ಕದನ ವಿರಾಮವನ್ನು ಘೋಷಿಸಿದ ಪಾಕಿಸ್ತಾನ, ತನ್ನ ಮಾತಿಗೆ ಬದ್ಧವಾಗಿ ನಡೆದುಕೊಳ್ಳುತ್ತಿಲ್ಲ. ಭಾರತ ಈಗ ಪಾಕಿಸ್ತಾನದ ಗುಂಡಿನ ದಾಳಿಗಳಿಗೆ ತಿರುಗೇಟು ನೀಡುತ್ತಿದ್ದು, ಪಾಕಿಸ್ತಾನ ಸದ್ಯ ಡ್ರೋನ್ ಕ್ಷಿಪಣಿಗಳನ್ನು ಭಾರತದತ್ತ ನುಗ್ಗಿಸುವುದನ್ನು ನಿಲ್ಲಿಸಿವೆ. ಜಮ್ಮು ಮತ್ತು ಕಾಶ್ಮೀರ, ಶ್ರೀನಗರ, ಗುಜರಾತ್ ಮತ್ತು ರಾಜಸ್ಥಾನದ ಬಾರ್ಮರ್‌ನಲ್ಲಿ ಕಾಣಿಸಿಕೊಂಡ ಪಾಕಿಸ್ತಾನ ಡ್ರೋನ್ ಕ್ಷಿಪಣಿಗಳನ್ನು ಭಾರತೀಯ ಸೇನೆ ಹೊಡೆದುರುಳಿಸಿವೆ. ಪಾಕಿಸ್ತಾನವು ಕದನ ವಿರಾಮ ಒಪ್ಪಂದ ಉಲ್ಲಂಘಿಸುತ್ತಿದ್ದು, ಅದಕ್ಕೆ ನಮ್ಮ ಸೈನಿಕರು ತಕ್ಕ ಉತ್ತರ ನೀಡುತ್ತಿದ್ದಾರೆ ಎಂದು ಭಾರತ ಹೇಳಿದೆ.

ಆದರೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯ ನಡುವೆ, ಪಾಕಿಸ್ತಾನದೊಂದಿಗೆ ಮಾತುಕತೆ ನಡೆದರೆ ಅದು ಪಿಒಕೆ ಬಿಟ್ಟು ತೊಲಗುವುದು, ಉಗ್ರರ ಹಸ್ತಾಂತರಕಷ್ಟೇ ಮಹತ್ವ ಎಂದು ಭಾರತ ಪಾಕಿಸ್ತಾನಕ್ಕೆ ಸ್ಪಷ್ಟಪಡಿಸಬೇಕು. ಇದನ್ನು ಹೊರತುಪಡಿಸಿ ಯಾವುದೇ ರೀತಿಯ ಮಾತುಕತೆ ಇರಬಾರದು.

ಕಾಶ್ಮೀರದ ಬಗ್ಗೆ ನಮ್ಮ ನಿಲುವು ಸ್ಪಷ್ಟವಾಗಿದೆ. ಒಂದೇ ಒಂದು ವಿಷಯ ಉಳಿದಿದೆ. ಅದು ಪಾಕ್ ಆಕ್ರಮಿತ ಕಾಶ್ಮೀರ ಹಿಂತಿರುಗಿಸುವಿಕೆ. ಇದನ್ನು ಹೊರತುಪಡಿಸಿ ಮಾತನಾಡಲು ಏನೂ ಇಲ್ಲ. ಪಾಕಿಗಳು ಭಯೋತ್ಪಾದಕರನ್ನು ಹಸ್ತಾಂತರಿಸುವ ಬಗ್ಗೆ ಮಾತನಾಡಿದರೆ ನಾವು ಮಾತನಾಡಬಹುದು. ನಮಗೆ ಬೇರೆ ಯಾವುದೇ ವಿಷಯದ ಬಗ್ಗೆ ಮಾತನಾಡುವ ಉದ್ದೇಶವಿಲ್ಲ ಎಂದು ಸರ್ಕಾರಿ ಮೂಲಗಳು ತಿಳಿಸಿವೆ.

ಇದೇ ವೇಳೆ ಪಾಕಿಸ್ತಾನದ ಪ್ರತಿಯೊಂದು ಕ್ರಿಯೆಗೂ ದೇಶದ ಪ್ರತಿಕ್ರಿಯೆ ಹೆಚ್ಚು ಬಲಶಾಲಿಯಾಗಿರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಶಸ್ತ್ರ ಪಡೆಗಳಿಗೆ ಸೂಚನೆ ನೀಡಿದ್ದಾರೆ. ಪಾಕ್‌ನಿಂದ ಬರುವ ಗುಂಡುಗಳಿಗೆ ಫಿರಂಗಿಗಳ ಮೂಲಕ ಪ್ರತಿಕ್ರಿಯಿಸಬೇಕು'(ವಾಹನ್ ಸೆ ಗೋಲಿ ಚಲೇಗಿ, ತೋ ಯಹಾನ್ ಸೆ ಗೋಲಾ ಚಲೇಗಾ) ಎಂದು ಸಶಸ್ತ್ರ ಪಡೆಗಳಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



'ಬ್ರಹ್ಮೋಸ್' ಕ್ಷಿಪಣಿ ಉತ್ಪಾದನಾ ಘಟಕ ಉದ್ಘಾಟನೆ

- 300 ಕೋಟಿ ವೆಚ್ಚ, ವಾರ್ಷಿಕ 100 ಮಿಸೈಲ್ ಉತ್ಪಾದನೆ ಗುರಿ
- ವಿಶ್ವದ ಅತ್ಯಂತ ವೇಗದ ಮತ್ತು ವಿನಾಶಕಾರಿ ಕ್ಷಿಪಣಿ


ರಾಜನಾಥ್ ಸಿಂಗ್


ಬ್ರಹ್ಮೋಸ್ ಕ್ಷಿಪಣಿ ಉತ್ಪಾದನಾ ಘಟಕವನ್ನು ರಕ್ಷಣಾ ಸಚಿವ ರಾಜನಾಥಸಿಂಗ್ ವರ್ಚುವಲ್ ಮೂಲಕ ಉದ್ಘಾಟಿಸಿದರು. ಈ ವೇಳೆ ಘಟಕದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇನ್ನಿತರರಿದ್ದರು.

ನವದೆಹಲಿ, ಮೇ 11– ಭಾರತ–ಪಾಕಿಸ್ತಾನ ನಡುವಿನ ಸಂಘರ್ಷ ತೀವ್ರಗೊಂಡಿರುವ ಹೊತ್ತಿನಲ್ಲೇ ಭಾರತ ರಕ್ಷಣಾ ವಲಯದ ಸಾಮರ್ಥ್ಯ ಬಲಪಡಿಸುವ ನಿಟ್ಟಿನಲ್ಲಿ ಬಹುದೊಡ್ಡ ಹೆಜ್ಜೆಯನ್ನಿಟ್ಟಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಭಾನುವಾರ ಉತ್ತರ ಪ್ರದೇಶದ ಲಕ್ನೋದ ಲ್ಲಿರುವ ಡಿಫೆನ್ಸ್ ಕಾರಿಡಾರ್ ನಲ್ಲಿ ನಿರ್ಮಿಸಲಾಗಿರುವ 'ಬ್ರಹ್ಮೋಸ್' ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಉತ್ಪಾದನಾ ಘಟಕವನ್ನು ವರ್ಚುವಲ್ ಮೂಲಕ ಉದ್ಘಾಟಿಸಿದರು.

ರಕ್ಷಣಾ ವಲಯದ ಸಾಮರ್ಥ್ಯ ಹೆಚ್ಚಿಸಲು ನಿರ್ಮಿಸಲಾಗಿರುವ ಈ ಘಟಕವು ವಾರ್ಷಿಕವಾಗಿ 80 ರಿಂದ 100 ಕ್ಷಿಪಣಿಗಳನ್ನು ಉತ್ಪಾದಿಸುವ ಗುರಿ ಹೊಂದಿದೆ. ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ 'ಬ್ರಹ್ಮೋಸ್' ವಿಶ್ವದ ಅತ್ಯಂತ ವೇಗದ ಮತ್ತು ವಿನಾಶ ಕಾರಿ ಕ್ಷಿಪಣಿಗಳಲ್ಲಿ ಒಂದಾಗಿದೆ ಎಂಬುದೇ ವಿಶೇಷ. ಹಾಗಾಗಿ ಕ್ಷಿಪಣಿ ಉತ್ಪಾದನಾ ಘಟಕವು ಉತ್ತರ ಪ್ರದೇಶದ ರಕ್ಷಣಾ ವಲಯಕ್ಕೆ ■9ನೇ ಪುಟಕ್ಕೆ

ಬ್ರಹ್ಮೋಸ್ ಬಗ್ಗೆ ಅನುಮಾನವಿದ್ದರೆ ಪಾಕ್‌ನವರನ್ನು ಕೇಳಿ: ಯೋಗಿ ಆದಿತ್ಯನಾಥ್


ಲಕ್ನೋ, ಮೇ 11– ರಕ್ಷಣಾ ಕೈಗಾರಿಕಾ ಕಾರಿಡಾರ್‌ನಲ್ಲಿ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ಉತ್ಪಾದನಾ ಘಟಕದ ಉದ್ಘಾಟನಾ ಸಮಾರಂಭದಲ್ಲಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಆಪರೇಷನ್ ಸಿಂಧೂರ್‌ನಲ್ಲಿ ಬ್ರಹ್ಮೋಸ್ ಕ್ಷಿಪಣಿಯ ಪಾತ್ರವನ್ನು ಖಚಿತಪಡಿಸಿದರು.

'ಆಪರೇಷನ್ ಸಿಂಧೂರ್' ಸಮಯದಲ್ಲಿ ಬ್ರಹ್ಮೋಸ್ ಕ್ಷಿಪಣಿಯ ಶಕ್ತಿ ಸ್ಪಷ್ಟವಾಗಿತ್ತು. ಇದರ ಬಗ್ಗೆ ಯಾರಿಗಾದರೂ ಅನುಮಾನವಿದ್ದರೆ ■9ನೇ ಪುಟಕ್ಕೆ

'ಆಪರೇಷನ್ ಸಿಂಧೂರ್'ನಲ್ಲಿ ಪಾಕ್ ಸೇನಾಧಿಕಾರಿಗಳು ಸೇರಿ 40 ಸೈನಿಕರು, 100ಕ್ಕೂ ಹೆಚ್ಚು ಉಗ್ರರ ಹತ್ಯೆ

ಸುದ್ದಿಗೋಷ್ಠಿಯಲ್ಲಿ ಭಾರತೀಯ ಸೇನಾಧಿಕಾರಿಗಳ ಮಾಹಿತಿ

- ಉಗ್ರರ ಪೈಕಿ ಯೂಸುಫ್ ಅಜರ್, ಅಬ್ದುಲ್ ಮಲಿಕ್ ರೌಫ್, ಮುದಸ್ಸಿರ್ ಅಹ್ಮದ್ ಹತ್ಯೆ
- ನಮ್ಮ ಗುರಿ ಪಾಕ್ ಸೈನಿಕರು ಆಗಿರಲಿಲ್ಲ, ಎಲ್‌ಒಸಿಯಲ್ಲೂ ಪಾಕಿಸ್ತಾನ ಕದನ


ಭಾರತೀಯ ಸೇನಾಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನವದೆಹಲಿ, ಮೇ 11– ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತವು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಒಂಬತ್ತು ಭಯೋತ್ಪಾದಕ ಉಡಾವಣಾ ಪ್ಯಾಡ್‌ಗಳನ್ನು ಗುರಿಯಾಗಿಸಿಕೊಂಡು 'ಆಪರೇಷನ್ ಸಿಂಧೂರ್' ಅಡಿಯಲ್ಲಿ ನಿಖರವಾದ ವಾಯು ದಾಳಿಗಳನ್ನು ನಡೆಸಿತು. ಈ ಸೇನಾ ಕಾರ್ಯಾಚರಣೆಯಲ್ಲಿ ಅನೇಕ ಉನ್ನತ ಭಯೋತ್ಪಾದಕ ಕಮಾಂಡರ್‌ಗಳು ಸೇರಿದಂತೆ 100ಕ್ಕೂ ಹೆಚ್ಚು ಭಯೋತ್ಪಾದಕರು ಸಾವನ್ನಪ್ಪಿದರು.

ಅಲ್ಲದೆ ಪ್ರತಿ ವಾಯುದಾಳಿಯಲ್ಲೂ ಪಾಕ್ ಸೇನಾಧಿಕಾರಿಗಳೂ ಸೇರಿ 40ಕ್ಕೂ ಹೆಚ್ಚು ಸೈನಿಕರು ಮೃತಪಟ್ಟಿದ್ದಾರೆ ಎಂದು ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತೀಯ ಸೇನೆಯ ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಈ ಮಾಹಿತಿಯನ್ನು ನೀಡಿದ್ದಾರೆ. ■9ನೇ ಪುಟಕ್ಕೆ

ಐವರು ಯೋಧರು ಹುತಾತ್ಮ

ನವದೆಹಲಿ, ಮೇ 11– ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಪ್ರತಿಯಾಗಿ ಉಗ್ರರ ನೆಲೆಗಳ ವಿರುದ್ಧ ಭಾರತ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯಲ್ಲಿ ಐವರು ಯೋಧರು ಹುತಾತ್ಮರಾಗಿದ್ದಾರೆ ಎಂದು ಭಾರತೀಯ ಸೇನೆ ಅಧಿಕೃತವಾಗಿ ಮಾಹಿತಿ ನೀಡಿದೆ. 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ಕುರಿತು ಭಾನುವಾರ ಸಂಜೆ ಹಿರಿಯ ಮಿಲಿಟರಿ ಅಧಿಕಾರಿಗಳು ಸುದ್ದಿಗೋಷ್ಠಿ ನಡೆಸಿದರು. ಈ ವೇಳೆ ದೇಶಕ್ಕಾಗಿ ಸೇವೆ ಸಲ್ಲಿಸಿ ಹುತಾತ್ಮರಾದ ಯೋಧರಿಗೆ ಭಾರತೀಯ ಸೇನಾಪಡೆ ಗೌರವ ಸಲ್ಲಿಸುತ್ತದೆ. ಅಲ್ಲದೇ ಅವರ ತ್ಯಾಗಗಳನ್ನು ಯಾವಾಗಲೂ ಸ್ಮರಿಸಲಾಗುವುದು ಎಂದು ತಿಳಿಸಿದರು.



ಮೈಸೂರು ಮಿತ್ರ ಸೋಮವಾರ 12 ಮೇ 2025

ರಂಗಾಯಣ ಚಿಣ್ಣರ ಮೇಳದಲ್ಲಿ ಆಕರ್ಷಿಸಿದ ಮಕ್ಕಳ ಸಂತೆ



ಮೈಸೂರಿನ ರಂಗಾಯಣದಲ್ಲಿ ಚಿಣ್ಣರ ಮೇಳದ ಮಕ್ಕಳು ವಿವಿಧ ವಸ್ತು ಮಾರಾಟದ ಸಂತೆ ನಡೆಸಿ ಗಮನ ಸೆಳೆದರು.

ಮೈಸೂರು,ಮೇ.11(ಎಂಟಿವೈ)– ಸದಾ ರಂಗ ಚಟುವಟಿಕೆಯಿಂದ ಗಮನ ಸೆಳೆಯುತ್ತಿದ್ದ ರಂಗಾಯಣದ ಆವರಣ ಭಾನುವಾರ ಸಂತೆಯಾಗಿತ್ತು. ತಾತ್ಕಾಲಿಕ ಸಂತೆಯಲ್ಲಿ ಹಣ್ಣು–ತರಕಾರಿ, ಆಟಿಕೆ, ತಿಂಡಿ–ತಿನಿಸು, ಅಲಂಕಾರಿಕ ವಸ್ತು ಸೇರಿದಂತೆ ಇನ್ನಿತರ ವಸ್ತುಗಳ ಮಾರಾಟ ಮಳಿಗೆಗಳು ತಲೆ ಎತ್ತಿ ನೋಡುಗರನ್ನು ಆಕರ್ಷಿಸುತ್ತಿದ್ದವು.

ರಂಗಾಯಣದಲ್ಲಿ ನಡೆಯುತ್ತಿರುವ ಬೇಸಿಗೆ ಶಿಬಿರ ಚಿಣ್ಣರ ಮೇಳದಲ್ಲಿ ಪಾಲ್ಗೊಂಡಿದ್ದ ಮಕ್ಕಳು ತೆರೆದಿದ್ದ ಅಂಗಡಿಗಳಲ್ಲಿ ಪೋಷಕರು, ರಂಗಾಸಕ್ತರು, ಸಾರ್ವಜನಿಕರು ಪಾಲ್ಗೊಂಡು ಸಂತೆಗೆ ಮೆರುಗು ನೀಡಿದರು. ರಂಗ ಚಟುವಟಿಕೆಯೊಂದಿಗೆ ಬದುಕುವ ಕಲೆ ಕಲಿಸುವ ಭಾಗವಾಗಿ ರಂಗಾಯಣದಲ್ಲಿ ಹೇಳಿಕೊಟ್ಟ ಪಾಠಕ್ಕೆ ಅನುಗುಣವಾಗಿ ಚಿಣ್ಣರ ಮೇಳದ ಮಕ್ಕಳು ವಿವಿಧ ಅಂಗಡಿ ತೆರೆದು ಒಂದು ದಿನದ ಸಂತೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿವಿಧ ವಸ್ತುಗಳನ್ನು ಮಾರಾಟ ಮಾಡಿದರು.

ರುಚಿಕರವಾದ ಚುರುಮುರಿ, ವಿವಿಧ ಬಗೆಯ ಸಲಾಡ್, ಫ್ರೂಟ್ ಕಟ್, ಬಾಳೆ ಹಣ್ಣು, ಕಲ್ಲಂಗಡಿ, ಹಲಸಿನ ಹಣ್ಣಿನ ತೊಳೆ, ವಿವಿಧ ಪಾನೀಯಗಳು, ಕಡಲೆ ಪುರಿ ಸೇರಿದಂತೆ ಮನೆಯಿಂದ ತಯಾರಿಸಿ ಕೊಂಡು ತಂದಿದ್ದ ವಿವಿಧ ಬಗೆಯ ತಿನಿಸನ್ನು ಮಾರಾಟ ಮಾಡುತ್ತಿದ್ದ ಚಿಣ್ಣರು, ಸಂತೆಗೆ ಬಂದವರನ್ನು ಕರೆದು ಮಾರಾಟ ಮಾಡುತ್ತಿದ್ದರು. ಚನ್ನಪಟ್ಟಣದ ಗೊಂಬೆ, ಮರದಲ್ಲಿ ತಯಾರಿಸಿರುವ ಆಟಿಕೆ, ಅಲಂಕಾರಿಕ ವಸ್ತುಗಳು, ಅಂಗಡಿಯಿಂದ ತಂದಿದ್ದ ಚಾಕಲೇಟ್, ವಿವಿಧ ಸಿಹಿ ತಿನಿಸುಗಳನ್ನು ಮಕ್ಕಳು ಮಾರಾಟ ಮಾಡಿದರು. ಮಕ್ಕಳ ಸಂತೆ ವೀಕ್ಷಿಸಲೆಂದೇ ಆಗಮಿಸಿದ್ದ ಇನ್ನಿತರ ಮಕ್ಕಳ ಪೋಷಕರು, ರಂಗಾಸಕ್ತರು, ಸಾರ್ವಜನಿಕರನ್ನು ಅಡ್ಡಹಾಕುತ್ತಿದ್ದ ಚಿಣ್ಣರು ತಮ್ಮ ಮಳಿಗೆಯಲ್ಲಿ ಏನನ್ನಾದರೂ ಖರೀದಿಸುವಂತೆ ದುಂಬಾಲು ಬೀಳುತ್ತಿದ್ದರು. ಮಕ್ಕಳ ಮಾರಾಟದ ಚಾಕಚಕ್ಯತೆಯನ್ನು ಕಂಡ ಪೋಷಕರು ಹಾಗೂ ವೀಕ್ಷಕರು ಮುಗುಳ್ನಗುತ್ತಾ ಮಕ್ಕಳ ಮನಸಿಗೆ ಬೇಸರವಾಗಬಾರದು ಎಂದು ಏನನ್ನಾದರೂ ಖರಿದಿಸಿ ಮಕ್ಕಳನ್ನು ಸಂತೋಷಪಡಿಸುತ್ತಿದ್ದ ದೃಶ್ಯ ಕಂಡು ಬಂದಿತು.

ಭಾರತೀಯ ಸೇನೆ ಬೆಂಬಲಿಸಿ ಟೀಂ ಮೈಸೂರು ಬೈಕ್ ರ‍್ಯಾಲಿ



ಭಯೋತ್ಪಾದಕರ ದಾಳಿ ಹಿಮ್ಮೆಟ್ಟಿಸುವ ಭಾರತೀಯ ಸೇನೆಗೆ ಬೆಂಬಲ ನೀಡಿ ಮೈಸೂರಲ್ಲಿ ಟೀಂ ಮೈಸೂರು ನೇತೃತ್ವದಲ್ಲಿ ತ್ರಿವರ್ಣ ಧ್ವಜ ಹಿಡಿದು ಬೈಕ್ ರ‍್ಯಾಲಿಯಲ್ಲಿ ಪಾಲ್ಗೊಂಡಿರುವ ದೇಶಭಕ್ತರು.

ಮೈಸೂರು, ಮೇ 11(ಎಂಟಿವೈ)– ಭಾರತ ಮೇಲೆ ದಾಳಿ ನಡೆಸುತ್ತಿರುವ ಪಾಕಿಸ್ತಾನದ ಸೇನೆ ಹಾಗೂ ಭಯೋತ್ಪಾದಕರ ವಿರುದ್ಧ ಸಮರ ಸಾರಿರುವ ಭಾರತೀಯ ಯೋಧರಿಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ 'ಟೀಂ ಮೈಸೂರು' ಸಂಸ್ಥೆ ಭಾನುವಾರ ಮೈಸೂರಲ್ಲಿ ಬೈಕ್ ರ‍್ಯಾಲಿ ನಡೆಸಿತು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಭಾನುವಾರ ಬೆಳಗ್ಗೆ ಟೀಂ ಮೈಸೂರು ನೇತೃತ್ವದಲ್ಲಿ ನಡೆದ ಬೈಕ್ ರ‍್ಯಾಲಿಯಲ್ಲಿ ನಿವೃತ್ತ ಯೋಧರು, ಟೀಂ ಮೈಸೂರು ಸದಸ್ಯರು, ನಾಗರಿಕರು ಪಾಲ್ಗೊಂಡು ಗಮನ ಸೆಳೆದರು. ತ್ರಿವರ್ಣ ಧ್ವಜ ಹಿಡಿದು, ಹೆಲ್ಮೆಟ್ ಧರಿಸಿ ಬೈಕ್ ರ‍್ಯಾಲಿಯಲ್ಲಿ ಪಾಲ್ಗೊಂಡು ದೇಶಭಕ್ತಿ ಪ್ರದರ್ಶಿಸಿದರು.

'ಪಾಕಿಸ್ತಾನದ ವಿರುದ್ಧ ಭಾರತೀಯ ಸೇನೆ ಗೆದ್ದು ಬರಲಿ' ಆಶಯದೊಂದಿಗೆ ನಡೆಸಿದ ಬೈಕ್ ರ‍್ಯಾಲಿಯಲ್ಲಿ ತ್ರಿವರ್ಣ ಧ್ವಜ ರಾರಾಜಿಸಿದವು. ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಿಂದ ಆರಂಭವಾದ ಬೈಕ್ ರ‍್ಯಾಲಿ ದೊಡ್ಡ ಗಡಿಯಾರ, ಮಹಾತ್ಮಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ ವೃತ್ತ, ಡಿ.ದೇವರಾಜ ಅರಸ್ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ ಮೂಲಕ ಸಾಗಿ ಅಗ್ರಹಾರ ವೃತ್ತ ತಲುಪಿ, ಕೊನೆಗೊಂಡಿತು.


ಈ ವೇಳೆ ಟೀಂ ಮೈಸೂರು ಮುಖ್ಯಸ್ಥ ಗೋಕುಲ್ ಗೋವರ್ಧನ್ ಮಾತನಾಡಿ, ಭಾರತದ ಮೇಲೆ ಪಾಕಿಸ್ತಾನ ಬೆಂಬಲಿತ ಉಗ್ರಗಾಮಿಗಳು ನಿರಂತರವಾಗಿ ದಾಳಿ ನಡೆಸಿ, ಅಮಾಯಕರನ್ನು ಬಲಿ ಪಡೆಯುತ್ತಿದ್ದಾರೆ. ಪಹಲ್ಗಾಮ್ ದಾಳಿಯಲ್ಲಿ ಅಮಾಯಕ ಹಿಂದೂ ಪ್ರವಾಸಿಗರನ್ನು ಪಾಕ್ ಭಯೋತ್ಪಾದಕರು ಹತ್ಯೆ ಮಾಡಿದ್ದಕ್ಕೆ ಭಾರತ ಭಯೋತ್ಪಾದಕರ ಅಡಗುತಾಣಗಳ ಮೇಲೆ 'ಆಪರೇಷನ್ ಸಿಂಧೂರ್' ಏರ್‌ಸ್ಟ್ರೈಕ್ ನಡೆಸಿ ತಕ್ಕ ಉತ್ತರ ನೀಡಿತ್ತು ಆದರೆ, ಪಾಕಿಸ್ತಾನ ಭಾರತದ ಮೇಲೆ ಅಪ್ರಚೋದಿತ ಗುಂಡಿನ ದಾಳಿ ನಡೆಸಿತ್ತು ಇದಕ್ಕೆ ಭಾರತದ ಸೇನೆ ದಿಟ್ಟತನದಿಂದ ಹೋರಾಟ ಮಾಡಿ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿತು. ಮುಂದಿನ ದಿನಗಳಲ್ಲೂ ಪಾಕ್ ಹಾಗೂ ಭಯೋತ್ಪಾದಕರ ವಿರುದ್ಧ ದಿಟ್ಟತನದಲ್ಲಿ ಹೋರಾಟ ಮಾಡುವ ಶಕ್ತಿ ಭಾರತದ ಸೇನೆಗೆ ಇದೆ. ಸಂಭವನೀಯ ಯುದ್ಧದಲ್ಲಿ ಭಾರತೀಯ ಸೇನೆಗೆ ಜಯವಾಗಲೆಂದು ಪ್ರಾರ್ಥಿಸಿ, ನಮ್ಮ ಸೈನಿಕರಿಗೆ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಬೈಕ್ ರ‍್ಯಾಲಿ ನಡೆಸಲಾಗುತ್ತಿದೆ ಎಂದರು.

ಬಿಜೆಪಿ ಮುಖಂಡ ಡಾ.ಸುಶ್ರೂತ್ ಗೌಡ ಮಾತನಾಡಿ, ಶತೃ ದೇಶದ ದಾಳಿಯನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ಭಾರತೀಯ ಸೈನ್ಯ ದಿಟ್ಟ ಹೋರಾಟ ನಡೆಸಿದೆ. ಸಂಕಷ್ಟದ ಸಂದರ್ಭದಲ್ಲಿ ಸೇನೆಯೊಂದಿಗೆ ನಾವಿದ್ದೇವೆ ಎಂಬ ಸಂದೇಶ ರವಾನಿಸುವುದು ಭಾರತೀಯ ಪ್ರಜೆಗಳ ಕರ್ತವ್ಯ. ಶತೃ ಪಡೆಯನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆಯಲ್ಲಿ ಪ್ರಬಲ ಹೋರಾಟ ಮಾಡಲು ಪ್ರೇರಣೆ ನೀಡುವುದಕ್ಕೆ ಎಲ್ಲರೂ ಭಾರತೀಯ ಸೇನೆಗೆ ಬೆಂಬಲ ನೀಡಬೇಕಾಗಿದೆ. ಇಂದು ನಡೆದ ಬೈಕ್ ರ‍್ಯಾಲಿಯಲ್ಲಿ ನಿವೃತ್ತ ಸೇನಾಧಿಕಾರಿಗಳು, ನಿವೃತ್ತ ಯೋಧರು, ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಭಾಗವಹಿಸುವ ಮೂಲಕ ಸೇನೆ ಮೈಸೂರಿನ ಜನತೆ ಬೆಂಬಲ ನೀಡುವ ಸಂದೇಶ ರವಾನಿಸಿದ್ದಾರೆ ಎಂದು ತಿಳಿಸಿದರು.

ಬ್ರಾಹ್ಮಣ ಮಹಾಸಭಾ ಪದಾಧಿಕಾರಿ ನೇಮಕ



ಹೆಚ್.ವಿ. ರಾಜೀವ್



ವಿಶ್ವನಾಥಯ್ಯ

ಮೈಸೂರು, ಮೇ 11– 2025– 26 ನೇ ಸಾಲಿಗೆ ರಾಜ್ಯ ಉಪಾಧ್ಯಕ್ಷರನ್ನಾಗಿ ವಿಪ್ರ ಮುಖಂಡ ಹೆಚ್.ವಿ. ರಾಜೀವ್ ಹಾಗೂ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಅಧ್ಯಕ್ಷ ವಿಶ್ವನಾಥಯ್ಯ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಗತ್ತು ಮೆಚ್ಚುವ ಮಹಾನಾಯಕ ಡಾ.ಅಂಬೇಡ್ಕರ್

ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಮೈಸೂರು ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ಮೇ 11(ಎಸ್‌ಬಿಡಿ)– ಭಾರತ ಸಂವಿಧಾನದ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ವಿಶ್ವವೇ ಮೆಚ್ಚಿನ ನಾಯಕರು ಎಂದು ಶಾಸಕ ಜಿ.ಟಿ. ದೇವೇಗೌಡರು ಹೇಳಿದರು.

ಮೈಸೂರು ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ 134ನೇ ಜನ್ಮ ಜಯಂತಿ ಹಾಗೂ ಸಂಘದ ನೂತನ ನಾಮಫಲಕ ಅನಾವರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರನ್ನು ಒಂದು ಸಮುದಾಯದ ನಾಯಕರಂತೆ ನೋಡಬಾರದು. ಅವರು ಜಗತ್ತು ಮೆಚ್ಚಿರುವ ಮಹಾನಾಯಕರಾಗಿದ್ದಾರೆ. ಸಂವಿಧಾನದ ಮೂಲಕ ಸಮಾನತೆ ಕಲ್ಪಿಸಿದ್ದರಿಂದ ಎಲ್ಲರಿಗೂ ಅವಕಾಶ ದೊರೆತಿದೆ. ರಾಜಕೀಯ ಸ್ಥಾನಮಾನವೂ ಸಿಗುವಂತಾಗಿದೆ ಎಂದರು.

ಗ್ರಾಮಸ್ಥರೆಲ್ಲಾ ಸೇರಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ಜಯಂತಿ ಸಮಾರಂಭ ಆಯೋಜಿಸಿರುವುದು ಸಂತೋಷದ ಸಂಗತಿ. ಅಪ್ರತಿಮ ನಾಯಕ, ಜಾತ್ಯಾತೀತವಾದಿ ಅಂಬೇಡ್ಕರ್ ಅವರನ್ನು ಎಷ್ಟು ಸ್ಮರಿಸಿದರೂ ಸಾಲದು. ಅಕ್ಷರವಂತರು, ವ್ಯಾಪಾರಿಗಳಿಗೆ ಮಾತ್ರ ಇದ್ದಂತಹ ಮತದಾನದ ಹಕ್ಕು ಪ್ರತಿಯೊಬ್ಬರಿಗೂ ಸಿಗಲು ಅಂಬೇಡ್ಕರ್ ಅವರೇ ಕಾರಣಕರ್ತರಾದರು. ಸಾಮಾನ್ಯನಿಂದ ರಾಷ್ಟ್ರಪತಿವರೆಗೂ ಪ್ರತಿಯೊಬ್ಬರ ಮತಕ್ಕೂ ಸಮಾನ ಮೌಲ್ಯ ಸಿಗುವಂತಾಯಿತು ಎಂದು ತಿಳಿಸಿದರು.

> ಕಾಶ್ಮೀರದಲ್ಲಿ ಅಮಾಯಕ ಪ್ರವಾಸಿಗರನ್ನು ಉಗ್ರರು ಹತ್ಯೆ ಮಾಡಿದ್ದಕ್ಕೆ ಪ್ರತೀಕಾರವಾಗಿ ಭಾರತದ ಸೇನೆ ನಡೆಸುತ್ತಿರುವ 'ಆಪರೇಷನ್ ಸಿಂಧೂರ್' ಯಶಸ್ವಿಯಾಗಲೆಂದು ಎಲ್ಲರೂ ಪ್ರಾರ್ಥಿಸಬೇಕು. ಈಗಾಗಲೇ ಧರ್ಮ, ಜಾತಿ ಬದಿಗೊತ್ತಿ ನಾವೆಲ್ಲಾ ಭಾರತೀಯರೆಂಬ ಘೋಷ ಮೊಳಗುತ್ತಿದೆ.
>
> -ಜಿ.ಟಿ.ದೇವೇಗೌಡರು

ಡಾ.ಬಿ.ಆರ್.ಅಂಬೇಡ್ಕರ್ ಭವನ ಮಂಜೂರು ಮಾಡಿಸಿದ್ದು, ಕಾಮಗಾರಿಗೆ ಶೀಘ್ರದಲ್ಲೇ ಗುದ್ದಲಿ ಪೂಜೆ ನೆರವೇರಿಸಲಾಗುವುದು. ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ವಿಳಂಬವಾಗಿದೆ. ಶೀಘ್ರದಲ್ಲೇ ಸರ್ಕಾರ ಅನುದಾನ ಬಿಡುಗಡೆ ಮಾಡುವ ವಿಶ್ವಾಸವಿದೆ ಎಂದು ಹೇಳಿದರು.

ಕಾರ್ಖಾನೆ ಆರಂಭಿಸಲು ಭೂಮಿ ನೀಡಿದ ಕುಟುಂಬದವರಿಗೆ ಉದ್ಯೋಗ ನೀಡದಿರುವ ಬಗ್ಗೆ ಶೀಘ್ರ ಸಮಾಲೋಚನೆ ನಡೆಸಲಾಗುವುದು. ಭೂಮಿ ನೀಡಿದ ರೈತ ಕುಟುಂಬಗಳಿಗೆ ಸಹಕರಿಸಲಾಗುವುದು ಎಂದು ಇದೇ ವೇಳೆ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ರೂಪಾ ಲೋಕೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವರುದ್ರಮ್ಮ, ಮಾಜಿ ಅಧ್ಯಕ್ಷ ಕೃಷ್ಣಯ್ಯ, ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷ ಚಂದ್ರಕುಮಾರ್, ಮುಖಂಡರಾದ ಮಹದೇವಯ್ಯ, ಉಮಾಪತಿ, ಮಹೇಶ್, ನಾಡಗೌಡ, ಚಂದ್ರು, ರಂಗಸ್ವಾಮಿ, ಪ್ರಸನ್ನ ಮತ್ತಿತರರು ಉಪಸ್ಥಿತರಿದ್ದರು.

ಸೆಸ್ಕ್ ಎಂಡಿಗೆ ಅಭಿನಂದನೆ



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸಿದ ಮುನಿಗೋಪಾಲ್ ರಾಜ್ ಅವರನ್ನು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಕಾರ್ಯಾಧ್ಯಕ್ಷ ಕಡಕೊಳ ಭರತ್, ಮೈಸೂರು ತಾಲೂಕು ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಮಾವಿನಹಳ್ಳಿ ನಾಗೇಶ್, ಮುಖಂಡ ಮಧು ಉಪಸ್ಥಿತರಿದ್ದರು.

ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ



ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಉಚಿತ ತಪಾಸಣಾ ಶಿಬಿರ ನಡೆಯಿತು.

ಮೈಸೂರು, ಮೇ 11(ಎಂಕೆ)– ಮೈಸೂರಿನ ದೇವೇಗೌಡ ವೃತ್ತದ ಸಮೀಪದಲ್ಲಿರುವ ಕಾವೇರಿ ಆಯುರ್ವೇದ ಆಸ್ಪತ್ರೆ ಆವರಣದಲ್ಲಿ ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಬೃಹತ್ ಶಿಬಿರ ನಡೆಯಿತು.

ಶಿಬಿರದಲ್ಲಿ ಜೀರ್ಣಕ್ರಿಯೆ ಸಮಸ್ಯೆ, ಆಮ್ಲಪಿತ್ತ, ಕೀಲುನೋವು, ಸೊಂಟ ಮತ್ತು ಬೆನ್ನು ನೋವು, ಚರ್ಮವ್ಯಾಧಿ, ಕೂದಲು ಉದುರುವಿಕೆ, ಸ್ತ್ರೀಯರ ಆರೋಗ್ಯ ಸಮಸ್ಯೆ, ಬಂಜೆತನ, ನರರೋಗ, ಮೂಲವ್ಯಾಧಿ, ಮಧುಮೇಹ ಸೇರಿದಂತೆ ಇನ್ನಿತರೆ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಲಾಯಿತು.

ಇದಕ್ಕೂ ಮುನ್ನ ಶಿಬಿರ ಉದ್ಘಾಟಿಸಿದ ಹಿರಿಯ ಪತ್ರಕರ್ತ ಎಸ್.ಟಿ.ರವಿಕುಮಾರ್, ಇಂದಿನ ದಿನಮಾನಗಳಲ್ಲಿ ಆರೋಗ್ಯ ತಪಾಸಣಾ ಖರ್ಚುಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ನಾಗರಿಕರು ಉಚಿತ ಆಯುರ್ವೇದ ತಪಾಸಣಾ ಶಿಬಿರದ ಸೌಲಭ್ಯಗಳನ್ನು ಬಳಸಿಕೊಳ್ಳಬೇಕೆಂದು ಸಾರ್ವಜನಿಕರಿಗೆ ಸಲಹೆ ನೀಡಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ. ರೇಣುಕಾದೇವಿ, ನೇಚರ್‌ಬೆಲ್ ವೆಲ್‌ನೆಸ್ ಸೆಂಟರ್ ನಿರ್ದೇಶಕ ಡಾ.ಬಿ.ಗುರುಬಸವರಾಜ, ಎಂಐಟಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ವಿ. ಕೃಷ್ಣಮೂರ್ತಿ, ಹಿರಿಯ ಆಯುರ್ವೇದ ವೈದ್ಯ ಡಾ.ಸದಾನಂದ ಪರಗೊಂಡೆ, ಡಾ.ಚಂದ್ರಶೇಖರ್ ಫೌಂಡೇಷನ್ ಮುಖ್ಯಸ್ಥ ಡಾ.ಜಿ.ಆರ್.ಚಂದ್ರಶೇಖರ್ ಮತ್ತು ಡಾ.ಸರಳ ಚಂದ್ರಶೇಖರ್, ಕಾವೇರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ನಿರ್ದೇಶಕ ಡಾ.ಎಸ್.ಕೃಷ್ಣಪ್ರಸಾದ್, ಪ್ರಾಂಶುಪಾಲ ಡಾ.ರಾಮಚಂದ್ರ ನೇಸರ್ಗಿ, ವೈದ್ಯಕೀಯ ಅಧೀಕ್ಷಕರಾದ ಡಾ.ವಿ.ಪೂರ್ಣಿಮಾ ಉಪಸ್ಥಿತರಿದ್ದರು.

ನಾಪತ್ತೆ

ಮೈಸೂರು, ಮೇ 11– ಮೈಸೂರು ತಾಲೂಕು ಡಿ.ಸಾಲುಂಡಿ ಗ್ರಾಮದ ದೊಡ್ಡತಮ್ಮ ನಾಯಕ(65) ಅವರು ಮೇ 4ರಿಂದ ಕಾಣೆಯಾಗಿದ್ದಾರೆ. ಮನೆಯಿಂದ ಹೊರಗಡೆ ಹೋದವರು ವಾಪಸ್ ಬಂದಿಲ್ಲ. ಎಲ್ಲಾ ಕಡೆ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ದೊಡ್ಡ ತಮ್ಮನಾಯಕ ಅವರ ಪುತ್ರ ಬಸವ ರಾಜು, ಜಯಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕೋಲುಮುಖ, ಸಾಧಾರಣ ಮೈಕಟ್ಟು, ಸುಮಾರು 5.5 ಅಡಿ ಎತ್ತರವಿರುವ ದೊಡ್ಡ ತಮ್ಮನಾಯಕ ಅವರು ಮನೆಯಿಂದ ಹೊರಹೋಗುವಾಗ ತುಂಬು ತೋಳಿನ ಬಿಳಿ ಶರ್ಟ್ ಧರಿಸಿದ್ದರು. ಇವರ ಬಗ್ಗೆ ಮಾಹಿತಿ ತಿಳಿದವರು ಜಯಪುರ ಪೊಲೀಸ್ ಠಾಣೆ (0821–2595781) ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.05.2025 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

* **ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ಬುದ್ಧ ಜಯಂತ್ಯೋತ್ಸವ ಸಮಿತಿ:** 2569ನೇ ಬುದ್ಧ ಪೂರ್ಣಿಮೆ, ಭಗವಾನ್ ಬುದ್ಧ ಜಯಂತಿ–2025, ಬೆಳಗ್ಗೆ 10.30ರಿಂದ, ಘನ ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತಿ: ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 8.30ಕ್ಕೆ ಪುರಭವನ ಆವರಣದಿಂದ ಮೆರವಣಿಗೆ, ಬುದ್ಧ ಗೀತೆಗಳು.
* **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ ಮತ್ತು ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.
* **ಮೈಸೂರು ವಿಶ್ವವಿದ್ಯಾನಿಲಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ:** 2569ನೇ ಬುದ್ಧ ಪೂರ್ಣಿಮೆ ಅಂಗವಾಗಿ ವಿಶೇಷ ಉಪನ್ಯಾಸ, ವಿಷಯ: ಪ್ರಬುದ್ಧ ಭಾರತ ನಿರ್ಮಾಣಕ್ಕೆ ಬುದ್ಧ, ಬೋಧಿ ಸಾನ್ನಿಧ್ಯ: ಶೆನ್ ಫೆನ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಭಂತೆ ಡಾ. ಸೋನಂಪುಂಟ್ಸಾಕ್, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಸ್ಥಳ: ಡಾ. ಬೆಟ್ರಿಕ್ಸ್ ಡಿ' ಸೌಜ ಸಭಾಂಗಣ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರ, ಮಾನಸ ಗಂಗೋತ್ರಿ 10.30ಕ್ಕೆ.
* **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್ (ಅಪೋಲೋ ಬಿಜಿಎಸ್ ಆಸ್ಪತ್ರೆ, ಮೈಸೂರು):** ಅಂತರರಾಷ್ಟ್ರೀಯ ನರ್ಸುಗಳ ದಿನಾಚರಣೆ–2025, ದಿವ್ಯ ಆಶೀರ್ವಾದ ಡಾ. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ, ಡಾ. ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸಾನ್ನಿಧ್ಯ: ಬಿಜಿಎಸ್ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸ್ಥಳ: ಬಿಜಿಎಸ್ ಮಲ್ಟಿ ಫರ್ಪಸ್ ಹಾಲ್, ಮೈಸೂರು, ಬೆಳಗ್ಗೆ 10.30ಕ್ಕೆ.
* **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ಪ್ರತಿ ಹುಣ್ಣಿಮೆಯಂದು ಜರುಗಲಿರುವ ಉಪನ್ಯಾಸ ಕಾರ್ಯಕ್ರಮ ತಿಂಗಳ ತಿಳಿವು–ಸಂಚಿಕೆ–15, ದಿವ್ಯ ಆಶೀರ್ವಾದ: ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್, ತಿಂಗಳ ಅತಿಥಿ: ಸಾಹಿತಿ ಕಿರಣ್ ಸಿಡ್ಲೇಹಳ್ಳಿ, ವಿಷಯ: ಕನ್ನಡ ಸಾಹಿತ್ಯದಲ್ಲಿ ಮುಕ್ತಕಗಳು, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣ ವೃತ್ತದ ನೆಲಮಹಡಿ, ಸಂಜೆ 6ರಿಂದ.
* **ಆದಿ ಕರ್ನಾಟಕ ಮಹಾಸಂಸ್ಥೆ, ಅಶೋಕಪುರಂ ಯುವ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ, ಎವಿಎಸ್‌ಎಸ್ ಸಂಸ್ಥೆ, ನವಯಾನ ಚಾರಿಟಬಲ್ ಟ್ರಸ್ಟ್, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಭಿಮಾನಿ–ಅನುಯಾಯಿಗಳು:** ವೈಶಾಖ ಬುದ್ಧ ಪೂರ್ಣಿಮೆ, ಭಗವಾನ್ ಬುದ್ಧರ 2569ನೇ ಜನ್ಮದಿನಾಚರಣೆ, ಬೋಧಿ ಸಾನ್ನಿಧ್ಯ ವಿಶ್ವಮೈತ್ರಿ ಬುದ್ಧ ವಿಹಾರದ ಡಾ. ಕಲ್ಯಾಣ ನಿಧಿ ಭಂತೇಜಿ, ಅಧ್ಯಕ್ಷತೆ: ಸಮಾಜ ಕಲ್ಯಾಣ ಸಚಿವ ಆಯುಷ್ಮಾನ್ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತಿ: ಸಂಸದ ಆಯುಷ್ಮಾನ್ ಸುನಿಲ್ ಬೋಸ್, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ.ಯು.ಎಂ.ರವಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 "ಆಧಾರ ಶಿಲೆ": ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಡಾ. ರಾಮದಾಸ್ ರೆಡ್ಡಿ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ – ಸಿ. ವಿಶ್ವನಾಥ್, ವ್ಯಾಖ್ಯಾನ – ಡಾ.ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 "ಭರವಸೆ ಹೊನಲು – ವೈದ್ಯರ ಕಿವಿಮಾತು" ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ. ರಸ್ತೆ, ಬೆಂಗಳೂರು, 8.30 ಯೋಗ ಕುರಿತ ವಿಶೇಷ ಸರಣಿ: "ಮಹಾಯೋಗ", ವಿಷಯ : ಯೋಗ ಮತ್ತು Osteoporosis ಅಂದರೆ ಅಸ್ಥಿರಂಧ್ರತೆ, ಭಾಗವಹಿಸುತ್ತಾರೆ: ಸಂಗೀತ ಪ್ರಸಾದ್, ನಿರ್ಮಾಣ: ನಂದನ್‌ಕುಮಾರ್ ಎಲ್.ಒ., 8.35 ಕನ್ನಡ ಚಿತ್ರಗೀತೆಗಳು, 8.50 ಕನ್ನಡ ಚಿತ್ರಗೀತೆಗಳು, 9.00 ವಿಶೇಷ ಹಿಂದಿ ವಾರ್ತೆ, 9.10 ವಿಶೇಷ ಇಂಗ್ಲೀಷ್ ವಾರ್ತೆ, 9.20 ಬುದ್ಧಪೂರ್ಣಿಮೆಯ ಸಂದರ್ಭದಲ್ಲಿ ವಿಶೇಷ ಸಂವಾದ: "ಭಗವಾನ್ ಬುದ್ಧನ ಸಂದೇಶಗಳ ಪ್ರಸ್ತುತತೆ", ಭಾಗವಹಿಸುತ್ತಾರೆ: ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರು ಹಾಗೂ ಲೇಖಕರಾದ ಡಾ. ಸಿ. ನಾಗಣ್ಣ ಮತ್ತು ಮಾನಸ ಗಂಗೋತ್ರಿಯ ಇಂಗ್ಲಿಷ್ ವಿಭಾಗದ ನಿವೃತ್ತ ಪ್ರೊಫೆಸರ್ ಹಾಗೂ ಸರ್ ಎಡ್ವಿನ್ ಅರ್ನಾಲ್ಡ್ ಅವರ 'ದ ಲೈಟ್ ಆಫ್ ಏಷ್ಯಾ' ಕೃತಿಯ ಅನುವಾದಕರಾದ ಡಾ. ಮಹದೇವ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ.ಮೈಸೂರು ಎಮ್. ಮಂಜುನಾಥ್ ಮತ್ತು ಸುಮಂತ್ ಮಂಜುನಾಥ್ – ಯುಗಳ ವೈಯೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಗೇಮ್ ಷೋ, ಪ್ರಸ್ತುತಿ : ದಿಗ್ವಿಜಯ್. ಬಿ ಮತ್ತು ಚಿನ್ಮಯಿ.ಕೆ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ. 12.35 ದೇವರನಾಮ, 12.45 ನಮ್ಮ ಆರೋಗ್ಯ: 'ವಿಶ್ವ ಅಧಿಕ ರಕ್ತದೊತ್ತಡ ಜಾಗೃತಿ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, 'ಸೈಲೆಂಟ್ ಕಿಲ್ಲರ್ ಬಿ.ಪಿ.' ಕುರಿತು ಕನ್ಸಲ್ಟಂಟ್ ಫಿಸಿಷಿಯನ್ ಮತ್ತು ಡಯಾಬಿಟಲಾಜಿಸ್ಟ್ ಡಾ.ಪಿ.ಹರಿದಾಸ್ ಉಪಾಧ್ಯ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ – ಬೇದ್ರೆ ಮಂಜುನಾಥ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ನವಯುಗದ ಮೂಲಸೌಕರ್ಯ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ವಿಶೇಷ ಹಿಂದಿ ವಾರ್ತೆಗಳು, 3.10 ವಿಶೇಷ ಇಂಗ್ಲೀಷ್ ವಾರ್ತೆಗಳು, 3.20 ಕನ್ನಡ ಚಿತ್ರಗೀತೆಗಳು.

ಸಂಜೆ: 4.00 ಮಹಿಳಾರಂಗ: 'ಅಕ್ಕಾ ಕೇಳವ್ವ': ಮಹಿಳೆಯರ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, ಪ್ರಸ್ತುತಿ – ಜಾಂಪಣ್ಣ ಆಶೀಹಾಳ್, ಸಂಕಲನ– ಕೀರ್ತನ, 4.45 ಹಿಂದಿ ಪಾಠ: ಪ್ರಸ್ತುತಿ – ಸ್ಮಿತಾ ಚಿಪ್ಳೂಣ್‌ಕರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಸಹಜ ಕೃಷಿಯ ಪ್ರಾಮುಖ್ಯತೆ ಕುರಿತು ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿ, ಬಿಂಡ ಹಳ್ಳಿಯ ಎ.ಪಿ.ಕೇಶವಮೂರ್ತಿ ಅವರೊಂದಿಗೆ ಸಂದರ್ಶನ, ಸಂದರ್ಶಕರು – ಎನ್. ಕೇಶವಮೂರ್ತಿ.

ರಾತ್ರಿ: 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಹಿಂದಿ ವಾರ್ತೆಗಳು, 8.10 ವಿಶೇಷ ಇಂಗ್ಲೀಷ್ ವಾರ್ತೆಗಳು, 8.20 ಕಾವ್ಯಾವಾಚನ: ಬುದ್ಧಪೂರ್ಣಿಮೆಯ ಸಂದರ್ಭದಲ್ಲಿ ವಿ.ಕೃ. ಗೋಕಾಕ್ ಅವರ ಸಿದ್ಧಾರ್ಥ ಮತ್ತು ದ.ರಾ. ಬೇಂದ್ರೆ ಅವರ ಬುದ್ಧ ಕಾವ್ಯ ಭಾಗಗಳನು ವಾಚಿಸುತ್ತಾರೆ ಬಿ.ಎನ್. ಪ್ರಭಾ, 8.30 ಹಿಂದಿ ಚಿತ್ರಗೀತೆಗಳು, 9.15 ವಿಶೇಷ ಸಂವಾದ ಕಾರ್ಯಕ್ರಮ, 10.00 ಸುದ್ದಿ ಅಧಾರಿತ ವಿಶೇಷ ಕಾರ್ಯಕ್ರಮ: 'ಸುಖಿಂಯೋಮೆ' ಇದರ ಧ್ವನಿ ಮುದ್ರಣ, 10.25 ಸವಿನೆನಪು: ಹಳೆಯ ಕನ್ನಡ ಚಿತ್ರಗೀತೆಗಳು.

ಹೆಚ್.ಡಿ.ಕೋಟೆಯಲ್ಲಿಂದು

* **ಮೈಸೂರು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್:** ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಮಹೋತ್ಸವ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮ, ಶಂಕುಸ್ಥಾಪನೆ ಮತ್ತು ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತಿ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್, ಅಧ್ಯಕ್ಷತೆ: ಶಾಸಕ ಅನಿಲ್‌ಕುಮಾರ್, ಸ್ಥಳ: ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನ, ಹೆಚ್.ಡಿ. ಕೋಟೆ, ಬೆಳಗ್ಗೆ 10 ಗಂಟೆಯಿಂದ. ಬೆಳಗ್ಗೆ 9 ಗಂಟೆಯಿಂದ ಡಾ. ಬಿ.ಆರ್. ಅಂಬೇಡ್ಕರ್ ಭವನದಿಂದ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ.

'ಅಮ್ಮನ ಮಡಿಲ ಕವಿತೆಗಳು' ರಾಜ್ಯಮಟ್ಟದ ಕವಿಗೋಷ್ಠಿ

ತಾಯಿ ದೇವರನ್ನು ಮರೆತವರು ಮನುಷ್ಯ ಎನಿಸಿಕೊಳ್ಳುವುದಿಲ್ಲ

ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಅಭಿಮತ

ಮೈಸೂರು,ಮೇ 11(ಎಂಟಿವೈ)– ತಾಯಿ ಎಂಬ ದೇವರನ್ನು ಮರೆತವರು ಮನುಷ್ಯರು ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಸಾಹಿತ್ಯ ಪರಿಷತ್‌ನ ಮಹಿಳಾ ಘಟಕದ ವತಿಯಿಂದ ತಾಯಂದಿರ ದಿನದ ಅಂಗವಾಗಿ ಭಾನುವಾರ ಆಯೋಜಿಸಿದ್ದ 'ಅಮ್ಮನ ಮಡಿಲ ಕವಿತೆಗಳು' ರಾಜ್ಯ ಮಟ್ಟದ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನಲ್ಲಿ ತಾಯಿಗೆ ಮಿಗಿಲಾದುದು ಯಾವುದೂ ಇಲ್ಲ. ತಾಯಿಯ ತ್ಯಾಗ, ಪ್ರೀತಿಗೆ ಸರಿಸಾಟಿಯೇ ಇಲ್ಲ. ತಾಯಿ ದೇವರ ಸೃಷ್ಟಿ. ತಾಯಿ ದೇವರ ಬಗ್ಗೆ ಯಾರೂ ಕೆಟ್ಟದಾಗಿ ಮಾತ ನಾಡುವುದಿಲ್ಲ. ತಾಯಿಯನ್ನು ದೇವತೆ ಎನ್ನುತ್ತೇವೆ. ಆದರೆ ತಂದೆಯನ್ನು ದೇವರು ಎನ್ನಲ್ಲ ತಾಯಿ ತನ್ನ ಮಕ್ಕಳನ್ನು ಸಮಾಜದ ಸತ್ಪ್ರಜೆಯಾಗಿ ರೂಪಿಸಲು ಮಾಡುವ ತ್ಯಾಗಕ್ಕೆ ಪಾರವೇ ಇಲ್ಲ. ತಾಯಿಯ ತೆಕ್ಕೆಯಲ್ಲಿ ಬೆಳೆದ ಮಕ್ಕಳು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ. ತಾಯಿ ದೇವತೆಯನ್ನು ಮರೆತರೆ ಆತ ಮನುಷ್ಯನೇ ಎನಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ತಾಯಂದಿರ ದಿನದ ಅಂಗವಾಗಿ ಭಾನುವಾರ ಆಯೋಜಿಸಿದ್ದ 'ಅಮ್ಮನ ಮಡಿಲ ಕವಿತೆಗಳು' ರಾಜ್ಯಮಟ್ಟದ ಕವಿಗೋಷ್ಠಿಯನ್ನು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಉದ್ಘಾಟಿಸಿದರು.

ತಾಯಿಯ ಪ್ರೀತಿಯ ಋಣವನ್ನು ಎಂದಿಗೂ ತೀರಿಸುವುದಕ್ಕೆ ಆಗುವುದಿಲ್ಲ. ತಾಯಿ ಇಲ್ಲದೆ ಸೃಷ್ಟಿಯೇ ಇಲ್ಲ. ತನ್ನ ಮಕ್ಕಳಿಗೆ ತೊಂದರೆ ಆದರೆ ತಾಯಿ ಎಂದಿಗೂ ಸಹಿಸುವುದಿಲ್ಲ. ಆಕೆಯ ಪ್ರೀತಿಗೆ ಮಿಗಿಲಾದ ಪ್ರೀತಿ ಯಾವುದೂ ಇಲ್ಲ. ಆಕೆ ಬದುಕಿರುವವರೆಗೂ ಪ್ರೀತಿಯಿಂದ ನೋಡಿಕೊಳ್ಳಬೇಕು. ತಾಯಿ ಇಲ್ಲದೇ ಜನಿಸಿದವರು ಯಾರಿದ್ದಾರೆ? ಆಕೆಯ ಕುರಿತು ಬರೆಯದ ಕವಿಗಳು ಯಾರಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಮಕ್ಕಳು ಪೋಷಕರನ್ನು ಕಡೆಗಣಿಸುತ್ತಿರುವುದು ಕಂಡು ಬರುತ್ತಿದೆ. ಪೋಷಕರನ್ನು ಅನಾಥರನ್ನಾಗಿ ಮಾಡುತ್ತಿದ್ದಾರೆ. ವೃದ್ಧಾಶ್ರಮ, ಅನಾಥಾಶ್ರಮದಲ್ಲಿ ಹಿರಿಯ ಜೀವಗಳು ಆಶ್ರಯ ಪಡೆದಿವೆ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತಿ ಪ್ರೊ.ಕೆ.ಆರ್.ಪ್ರೇಮಲೀಲಾ ವಹಿಸಿದ್ದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಹಿಳಾ ಘಟಕದ ಅಧ್ಯಕ್ಷೆ ರತ್ನಾ ಹಾಲಪ್ಪಗೌಡ, ಅಕ್ಕ ಮಹಾದೇವಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕಿ ಹೆಚ್.ಎಂ. ಹೇಮಲತಾ, ಗೌರವ ಕಾರ್ಯದರ್ಶಿ ಮ.ನ ಲತಾ ಮೋಹನ್, ಖಜಾಂಚಿ ಪ್ರಕಾಶ್, ಜಂಟಿ ಕಾರ್ಯದರ್ಶಿ ಕೆ.ಕೆಂಪಣ್ಣ ಪಾಲ್ಗೊಂಡಿದ್ದರು. ಸಭಾ ಕಾರ್ಯಕ್ರಮದ ಬಳಿ ನಡೆದ ರಾಜ್ಯಮಟ್ಟದ ಕವಿಗೋಷ್ಠಿಯಲ್ಲಿ ಮೈಸೂರು, ಬೆಂಗಳೂರು, ಚಾಮರಾಜನಗರ, ಶಿವಮೊಗ್ಗ, ಬಾಗಲಕೋಟೆ, ಕೊಡಗು, ಬಳ್ಳಾರಿ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಕವಿಗಳು ಅಮ್ಮನ ಕುರಿತು ರಚಿಸಿದ್ದ ಕವನಗಳನ್ನು ವಾಚಿಸಿ, ಗಮನ ಸೆಳೆದರು.

ವಿಶ್ವ ತಾಯಂದಿರ ದಿನದ ಅಂಗವಾಗಿ ಆರೋಗ್ಯ ತಪಾಸಣಾ ಶಿಬಿರ



ಮೈಸೂರಿನ ಕುಕ್ಕರಹಳ್ಳಿ ಕೆರೆ ಪ್ರವೇಶ ದ್ವಾರದಲ್ಲಿ ಮೈಸೂರಿನ ದುರ್ಗಾ ಫೌಂಡೇಷನ್ ಹಾಗೂ ಸುಯೋಗ್ ಆಸ್ಪತ್ರೆಯ ಸಹಯೋಗದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ಮಾಜಿ ಶಾಸಕ ಸಾ.ರಾ.ಮಹೇಶ್ ಚಾಲನೆ ನೀಡಿದರು.

ಮೈಸೂರು,ಮೇ 11(ಎಂಟಿವೈ)– ವಿಶ್ವ ತಾಯಂದಿರ ದಿನದ ಅಂಗವಾಗಿ ಮೈಸೂರಿನ ಕುಕ್ಕರಹಳ್ಳಿ ಕೆರೆ ಪ್ರವೇಶ ದ್ವಾರದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಹಲವು ಮಹಿಳೆಯರು ಆರೋಗ್ಯ ತಪಾಸಣೆಗೆ ಒಳಗಾಗಿ ಆರೋಗ್ಯ ಸೇವೆ ಪಡೆದುಕೊಂಡರು.

ಮೈಸೂರಿನ ದುರ್ಗಾ ಫೌಂಡೇಷನ್ ಹಾಗೂ ಸುಯೋಗ್ ಆಸ್ಪತ್ರೆಯ ಸಹಯೋಗದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಒಂಬತ್ತು ತಿಂಗಳು ಹೊತ್ತು ಹೆತ್ತು ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸಿ, ಪೋಷಿಸುವ ತಾಯಿಗೆ ಸಮಾನವಾದ ಮತ್ತೊಬ್ಬ ವ್ಯಕ್ತಿ ಜಗತ್ತಿನಲ್ಲಿ ಯಾರೂ ಇಲ್ಲ. ವರ್ಣಿಸಲು ಅಸಾಧ್ಯವಾದ ವ್ಯಕ್ತಿ ತಾಯಿಯಾಗಿದ್ದಾಳೆ. ಅವಳನ್ನು ಇಳಿ ವಯಸ್ಸಲ್ಲಿ ಸರಿಯಾಗಿ ನೋಡಿಕೊಳ್ಳದೆ ವೃದ್ಧಾಶ್ರಮಕ್ಕೆ ಸೇರಿಸುವ ಕೆಲಸ ಮಾಡಬಾರದು. ಹಿರಿಯ ಜೀವಗಳ ಮನಸ್ಸನ್ನು ನೋಯಿಸದೆ ಅವರನ್ನು ಆರೋಗ್ಯವಂತರನ್ನಾಗಿ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು ಎಂದರು.

ಸುಯೋಗ್ ಆಸ್ಪತ್ರೆಯ ಮುಖ್ಯಸ್ಥ, ತಜ್ಞವೈದ್ಯ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಎಲ್ಲರಿಗೂ ಆರೋಗ್ಯವೇ ಮಹಾ ಭಾಗ್ಯವಾಗಿದ್ದು, ತಾಯಂದಿರು ಆರೋಗ್ಯವಂತರಾಗಿದ್ದರೆ ತಮ್ಮ ಕುಟುಂಬವನ್ನೇ ಆರೋಗ್ಯವಂತ ಕುಟುಂಬವನ್ನಾಗಿ ಕಾಪಾಡಿಕೊಳ್ಳುತ್ತಾರೆ. ಅನಾರೋಗ್ಯಕ್ಕೀಡಾದಾಗ ಆಸ್ಪತ್ರೆಗೆ ಬರದೆ ಮೂಢನಂಬಿಕೆಗಳಿಗೆ ಒಳಗಾಗುವುದರಿಂದ ತೊಂದರೆಯಾಗುತ್ತದೆ ಜನರಲ್ಲಿ ಆರೋಗ್ಯದ ಬಗ್ಗೆ ಕಾಳಜಿ ಹೆಚ್ಚಾಗಬೇಕು ಎಂದು ಸಲಹೆ ನೀಡಿದರು.

ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ 200ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆಗೆ ಒಳಗಾದರು. ಈ ಸಂದರ್ಭದಲ್ಲಿ ಸ್ತ್ರೀರೋಗ ತಜ್ಞರಾದ ಡಾ. ಗೀತಾ, ಡಾ.ಅನುಷ್ಯ, ಪ್ರಿಯ, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ದುರ್ಗಾ ಫೌಂಡೇಷನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಸುಜಾತ, ಕೋಮಲ, ವನಮಾಲ, ನೀಲಾ, ಕಾಮಾಕ್ಷಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

'ಮಾತೃ ಸೇವಾ ಸಂಕಲ್ಪ ಯಾತ್ರೆ' ಮುಂದುವರೆಸಿರುವ ಕೃಷ್ಣಕುಮಾರ್



ಮೈಸೂರು,ಮೇ 11(ವಿಎನ್‌ಎಸ್, ಪಿಎಂ)– ಮೈಸೂರಿನ ನಿವಾಸಿ ಡಿ.ಕೃಷ್ಣಕುಮಾರ್ ಅವರು ತಮ್ಮ ಲಾಭದಾಯಕ ವೃತ್ತಿ ತ್ಯಜಿಸಿ 2018ರಲ್ಲಿ ತಮ್ಮ ತಾಯಿಯ ಬಯಕೆಯಂತೆ 'ಮಾತೃ ಸೇವಾ ಸಂಕಲ್ಪ ಯಾತ್ರೆ' ಶೀರ್ಷಿಕೆಯಡಿ ತೀರ್ಥಯಾತ್ರೆ ಆರಂಭಿಸಿದ್ದರು. ತಮ್ಮ ತಂದೆ ಕೊಡಿಸಿದ ಸ್ಕೂಟರ್‌ನಲ್ಲಿ ತಮ್ಮ ತಾಯಿ ಚೂಡಾರತ್ನ ಅವರೊಂದಿಗೆ ಕೃಷ್ಣಕುಮಾರ್ ಯಾತ್ರೆ ಮುಂದುವರೆಸಿದ್ದಾರೆ.

ಇಂದು ಬೆಳಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿ.ಕೃಷ್ಣಕುಮಾರ್, ಕೋವಿಡ್ 19 ಕಾರಣಕ್ಕೆ ಸ್ಥಗಿತಗೊಳಿಸಿದ್ದ ಯಾತ್ರೆಯನ್ನು ಮತ್ತೆ ಪ್ರಾರಂಭಿಸಿದ್ದೇವೆ. ಈಗ ಕೆಜಿಎಫ್‌ನಲ್ಲಿದ್ದು, ನಾಳೆ ಬೆಂಗಳೂರು ತಲುಪಿ, ಒಂದೆರಡು ದಿನಗಳ ನಂತರ ಮೈಸೂರಿಗೆ ಮರಳುವುದಾಗಿ ತಿಳಿಸಿದರು. ಕೃಷ್ಣಕುಮಾರ್, ತಮ್ಮ ತಾಯಿ ಜೊತೆಯಲ್ಲಿ ರಾಜ್ಯ ಹಾಗೂ ದೇಶದ ವಿವಿಧ ಭಾಗಗಳೂ ಮಾತ್ರವಲ್ಲದೆ, ನೇಪಾಳ, ಭೂತಾನ್, ಬಾಂಗ್ಲಾದೇಶ ಮತ್ತು ಮ್ಯಾನ್ಮರ್‌ಗೆ ಸಹ ಸ್ಕೂಟರ್‌ನಲ್ಲೇ ಭೇಟಿ ನೀಡಿದ್ದರು. ಆ ಮೂಲಕ 2020ರಲ್ಲಿ ಒಟ್ಟು 56,027 ಕಿ.ಮೀ. ದೂರವನ್ನು ಕ್ರಮಿಸಿದ್ದರು.

ಬಸವೇಶ್ವರರ ಪುತ್ಥಳಿ ಮೆರವಣಿಗೆ...



ಮೈಸೂರಿನ ಕಬೀರ ರಸ್ತೆಯ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದ ಎದುರು ಭಾನುವಾರ ಶ್ರೀ ಬಸವಣ್ಣನವರ ಜಯಂತಿ ಪ್ರಯುಕ್ತ ಅವರ ಪುತ್ಥಳಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಅಲಂಕೃತ ವಾಹನದಲ್ಲಿ ಬಸವಣ್ಣನವರ ಪುತ್ಥಳಿಯನ್ನು ವಿವಿಧ ರಸ್ತೆಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಸಂಘದ ಪದಾಧಿಕಾರಿಗಳು ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

ವಾತ್ಸಲ್ಯ ಸೇವಾ ಕೇಂದ್ರದಲ್ಲಿ ವಿಶ್ವ ತಾಯಂದಿರ ದಿನ



ಮೈಸೂರು, ಮೇ 11– ಮೈಸೂರಿನ ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯತಾಣ ವಾತ್ಸಲ್ಯ ಸೇವಾಕೇಂದ್ರದಲ್ಲಿ ಇಂದು ವಿಶ್ವತಾಯಂದಿರ ದಿನಾಚರಣೆಯನ್ನು ಹಿರಿಯ ಜೀವಿಗಳೊಂದಿಗೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಎ.ಸಿ.ರವಿಕುಮಾರ್ ಮಾತನಾಡಿ, ಇಂದು ನಾವು ವಿಶ್ವ ತಾಯಂದಿರ ದಿನವನ್ನು ಆಚರಿಸುತ್ತಿದ್ದೇವೆ. ಇದು ಅತ್ಯಂತ ಸಂತೋಷದ ಸಂಗತಿ. ತಾಯಿಯ ಋಣವನ್ನು ಎಂದಿಗೂ ತೀರಿಸಲಾಗದು, ತಾಯಿ ನಮಗೆ ಜನ್ಮ ನೀಡುವುದರ ಜೊತೆಗೆ ತಾಯಿಯೇ ಮೊದಲ ಗುರುವಾಗಿ ನಮಗೆ ಸಂಸ್ಕಾರವನ್ನು ನೀಡಿ ತ್ಯಾಗಮಯಿಯಾಗಿ ಬದುಕಲು ಪ್ರೇರಪಣೆ ನೀಡುತ್ತಾಳೆ. ಅಂತಹ ಮಾತೆಯ ದಿನವನ್ನು ನಾವು ಪ್ರತಿದಿನವೂ ನೆನೆಪಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದು ತಿಳಿಸಿದರು.

ಆಶ್ರಮದ ಗೌರವ ಕಾರ್ಯದರ್ಶಿ ಶ್ರೀಮತಿ ನಾಗರತ್ನ ಮಾತನಾಡಿ, ತಾಯಿಯೇ ದೇವರು ಒಂಬತ್ತು ತಿಂಗಳು ಹೆತ್ತು ಹೊತ್ತು ಸಾಕಿ ಸಲುಹಿ ಮಕ್ಕಳನ್ನು ಬೆಳೆಸುತ್ತಾಳೆ. ಅಂತಹ ಮಾತೆಯನ್ನು ಮುಂದಿನ ದಿನಗಳಲ್ಲಿ ಮಕ್ಕಳು ಚೆನ್ನಾಗಿ ನೋಡಿಕೊಳ್ಳುವುದು ಅವರ ಜವಾಬ್ದಾರಿಯಾಗಬೇಕು, ತಾಯಿಯ ವಾತ್ಸಲ್ಯ ಮಮತೆಗೆ ಬೆಲೆ ಕಟ್ಟಲಾಗದು. ಅಂತಹ ಜನ್ಮದಾತೆಯನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿ, ಒತ್ತಡದ ಬದುಕಿನಲ್ಲಿ ಮನೆಯ ಹಿರಿಯ ಜೀವಿಗಳನ್ನು ಗೌರವ ಕೊಟ್ಟು ನಡೆಸಿಕೊಳ್ಳುವುದು ಪ್ರಸ್ತುತ ದಿನಗಳಲ್ಲಿ ಪ್ರಮುಖವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಜೀವಿಗಳಿಗೆ ಸಿಹಿ ವಿತರಿಸಿ ಗೌರವ ಸಲ್ಲಿಸಲಾಯಿತು.

ಮೈಸೂರು ಮಿತ್ರ ವರದಿ ಫಲಶೃತಿ

ಗ್ಯಾಸ್ ಪೈಪ್ ಲೈನ್ ಅಳವಡಿಸಲು ತೆಗೆದಿದ್ದ ಹಳ್ಳ ಮುಚ್ಚಿ ಡಾಂಬರೀಕರಣ

ಮೈಸೂರು, ಮೇ 11(ಬಿಎಲ್‌ಯು)– ಮೈಸೂರಿನ ಮನೆ ಮನೆಗೆ ಗ್ಯಾಸ್ ಪೈಪ್ ಲೈನ್ ಸಂಪರ್ಕ ನೀಡಲು ರಸ್ತೆ ಅಗೆದು ಹಳ್ಳ ಮಾಡಿ ಸರಣಿ ಅಪಘಾತ ಸಂಭವಿಸಲು ಕಾರಣವಾಗಿದ್ದ ಹಳ್ಳ ಮುಚ್ಚಿ ಈಗ ಡಾಂಬರೀಕರಣ ಮಾಡಲಾಗಿದೆ.

ಮನೆ ಮನೆಗೆ ಗ್ಯಾಸ್ ಪೈಪ್ ಅಳವಡಿಸುತ್ತಿರುವ ಎಜಿ ಅಂಡ್ ಪ್ರಥಮ್ ಕಂಪನಿಯು ಮೈಸೂರಿನ ಮಾನಂದವಾಡಿ ರಸ್ತೆ ಜೆಎಲ್‌ಬಿ ರಸ್ತೆ ಸೇರಿದಂತೆ ಇತರೆಡೆ ಗ್ಯಾಸ್ ಪೈಪ್ ಅಳವಡಿಸಲು ಹಳ್ಳ ತೆಗೆದು ಸರಿಯಾಗಿ ಮುಚ್ಚಿರಲಿಲ್ಲ. ರಸ್ತೆಯಲ್ಲಿ ಬಾಯ್ತೆರೆದ ಹಳ್ಳದಿಂದ ಸರಣಿ ಅಪಘಾತವಾಗುತ್ತಿದೆ ಎಂದು ಮೇ. 3 ರಂದು 'ಮೈಸೂರು ಮಿತ್ರ' ಫೋಟೋ ಸಹಿತ ವರದಿ ಪ್ರಕಟಿಸಿತ್ತು.

'ಮೈಸೂರು ಮಿತ್ರ' ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಎಜೆ ಅಂಡ್ ಪ್ರಥಮ್ ಕಂಪನಿಯು ಹಳ್ಳ ಬಿದ್ದ ರಸ್ತೆಗೆ ಮೊದಲು ಜೆಲ್ಲಿ ಕಲ್ಲು ಸುರಿದು, ನಂತರ ಡಾಂಬರೀಕರಣ ಮಾಡಿ ಹಳ್ಳ ಮುಚ್ಚಿದೆ. ಈ ಕೆಲಸವನ್ನು ಮೊದಲೇ ಮಾಡಿದ್ದರೆ ಬಹಳಷ್ಟು ಅಪಘಾತಗಳನ್ನು ತಪ್ಪಿಸಬಹುದಿತ್ತು.

ಗ್ಯಾಸ್ ಪೈಪ್ ಲೈನ್ ಸಂಪರ್ಕ ನೀಡಲು ಎಜೆ ಅಂಡ್ ಪ್ರಥಮ್ ಕಂಪನಿ ಮೈಸೂರಿನ ಇನ್ನು ಬಹಳಷ್ಟು ರಸ್ತೆಗಳಲ್ಲಿ ಪೈಪ್ ಅಳವಡಿಸಲು ರಸ್ತೆಯಲ್ಲಿ ಹಳ್ಳ ತೆಗೆಯುತ್ತಿದೆ. ಹಳ್ಳ ಮುಚ್ಚುವಾಗ ಮಣ್ಣು ಸುರಿದು ಅದರ ಮೇಲೆ ಜೆಲ್ಲಿ ಹಾಕಿ ರೋಲರ್ ನಿಂದ ಸಮದಟ್ಟು ಮಾಡಬೇಕು. ಇದು ಬಿಟ್ಟು ಮತ್ತೆ ಕಳಪೆ ತೇಪೆ ಹಾಕಿ ಸರಣಿ ಅಪಘಾತಗಳಿಗೆ ಕಾರಣವಾಗಬಾರದು.

'ಮೈಸೂರು ಮಿತ್ರ' ವರದಿ ಫಲಶ್ರುತಿ



ಪುಲ್ವಾಮಾ ದಾಳಿ ನಮ್ಮ ತಂತ್ರಗಾರಿಕೆಯ ಅದ್ಭುತ ಪ್ರದರ್ಶನ

ಪಾಕ್ ಸೇನಾಧಿಕಾರ ಬಹಿರಂಗ ತಪ್ಪೊಪ್ಪಿಗೆ

ಇಸ್ಲಾಮಾಬಾದ್, ಮೇ 11– ಪುಲ್ವಾಮಾ ದಾಳಿ ತನ್ನ ಅದ್ಭುತ ತಂತ್ರಗಾರಿಕೆ ಪ್ರದರ್ಶನ ಎಂದು ಹೇಳುವ ಮೂಲಕ ಪಾಕಿಸ್ತಾನದ ಏರ್ ವೈಸ್ ಮಾರ್ಷಲ್ ಔರಂಗಜೇಬ್ ಅಹ್ಮದ್ ಪುಲ್ವಾಮಾ ದಾಳಿಯಲ್ಲಿ ಪಾಕಿಸ್ತಾನದ ಪಾತ್ರ ವಿದೆ ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.



ವಿದೇಶಿ ಪತ್ರಕರ್ತರ ಜೊತೆ ನಡೆದ ಪತ್ರಿಕಾಗೋಷ್ಠಿಯಲ್ಲಿ, ಪಾಕಿಸ್ತಾನದ ವಾಯುಪಡೆಯ ಸಾರ್ವಜನಿಕ ಸಂಪರ್ಕದ ಮಹಾನಿರ್ದೇಶಕರೂ ಆಗಿರುವ ಏರ್ ವೈಸ್ ಮಾರ್ಷಲ್ ಔರಂಗಜೇಬ್ ಅಹ್ಮದ್, ಪುಲ್ವಾಮಾ ದಾಳಿಯನ್ನು 'ತಂತ್ರಗಾರಿಕೆಯ ಅದ್ಭುತ ಪ್ರದರ್ಶನ' ಎಂದು ಹೊಗಳಿದ್ದಾರೆ. ಔರಂಗಜೇಬ್ ಅಹ್ಮದ್ ಅವರ ಈ ಹೇಳಿಕೆ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆಯನ್ನು ಹೆಚ್ಚಿಸಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನದ ಸೇನಾ ಪಡೆಗಳ ಉನ್ನತ ಮಟ್ಟದ ಅಧಿಕಾರಿಯೋರ್ವ ಪುಲ್ವಾಮಾ ದಾಳಿಯನ್ನು ಹೊಗಳಿ ಮಾತನಾಡಿದ್ದು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪಾಕಿಸ್ತಾನವು ಪುಲ್ವಾಮಾ ದಾಳಿಯಲ್ಲಿ ಭಾಗಿಯಾಗಿದೆ ಎಂದು ಆರೋಪಿಸಲಾಗಿದ್ದರೂ, ಆ ದೇಶವು ಈವರೆಗೂ ತನ್ನ ಪಾತ್ರವನ್ನು ನಿರಾಕರಿಸುತ್ತಲೇ ಬಂದಿದೆ. ಆದರೆ ಈಗ ಔರಂಗಜೇಬ್ ಅಹ್ಮದ್ ಅವರಿಂದ ಇಂತಹ ಹೇಳಿಕೆ ಹೊರಬಿದ್ದಿರುವುದು ಅಚ್ಚರಿ ಮೂಡಿಸಿದೆ.

ಪಾಕಿಸ್ತಾನದ ಭೂಮಿ, ಆಕಾಶ ಅಥವಾ ಜಲ ಗಡಿಗೆ ಅಪಾಯವಾದರೆ, ಯಾವುದೇ ರಾಜಿ ಮಾಡಿಕೊಳ್ಳಲಾಗುವುದಿಲ್ಲ ಪುಲ್ವಾಮಾದಲ್ಲಿ ನಮ್ಮ ತಂತ್ರಗಾರಿಕೆಯ ಅದ್ಭುತ ಪ್ರದರ್ಶನದಿಂದ ನಾವು ಇದನ್ನು ಸಾಬೀತುಪಡಿಸಿದ್ದೇವೆ ಎಂದು ಪಾಕಿಸ್ತಾನ ಏರ್ ವೈಸ್ ಮಾರ್ಷಲ್ ಬಹಿರಂಗ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ. 2019ರಲ್ಲಿ ಪುಲ್ವಾಮಾದಲ್ಲಿ ನಡೆದ ಭಯಾನಕ ದಾಳಿಯಲ್ಲಿ 40 ಭಾರತೀಯ ಅರೆಸೇನಾ ಸಿಬ್ಬಂದಿ ಸಾವನ್ನಪ್ಪಿದ್ದರು. ಪಾಕಿಸ್ತಾನ ಬೆಂಬಲಿತ ಜೈಶ್–ಎ–ಮೊಹಮ್ಮದ್ (JeM) ಸಂಘಟನೆಯ ಆತ್ಮಹತ್ಯಾ ಬಾಂಬರ್, ಸಿಆರ್‌ಪಿಎಫ್ ಬೆಂಗಾವಲು ಪಡೆಯನ್ನು ಗುರಿಯಾಗಿಸಿ ಈ ದಾಳಿ ನಡೆದಿತ್ತು.

ಇದಕ್ಕೆ ಪ್ರತಿಕ್ರಿಯೆಯಾಗಿ ಭಾರತವು ಬಾಲಾಕೋಟ್ ವೈಮಾನಿಕ ದಾಳಿಯನ್ನು ನಡೆಸಿತ್ತು ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿರುವ ಜೈಶ್ ತರಬೇತಿ ಶಿಬಿರವನ್ನು ಗುರಿಯಾಗಿಸಿ ಭಾರತವು ದಾಳಿ ಮಾಡಿತ್ತು ಭಾರತದ ಕ್ರಮವು ಪಾಕಿಸ್ತಾನದ ಜೆಟ್‌ಗಳೊಂದಿಗೆ ವೈಮಾನಿಕ ಯುದ್ಧಕ್ಕೆ ಕಾರಣವಾಯಿತು. ಈ ವೇಳೆ ಭಾರತೀಯ ಫೈಟರ್ ಪೈಲಟ್ ಅಭಿನಂದನ್ ವರ್ಧಮಾನ್ ಅವರನ್ನು ಪಾಕಿಸ್ತಾನದಲ್ಲಿ ಸೆರೆಹಿಡಿಯಲಾಗಿತ್ತು ಆದರೆ, ಉಭಯ ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಾದ ಕಾರಣ ಪಾಕಿಸ್ತಾನವು ಕೆಲವೇ ದಿನಗಳಲ್ಲಿ ಅವರನ್ನು ಬಿಡುಗಡೆ ಮಾಡಿತು.

ಏಪ್ರಿಲ್ 22 ರಂದು ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಪಾಕಿಸ್ತಾನವು ತಾನು ಭಯೋತ್ಪಾದನೆಯನ್ನು ಬೆಂಬಲಿಸುತ್ತಿಲ್ಲ ಎಂದು ಹೇಳಿಕೊಂಡಿದೆ ಆದರೆ ಇದೀಗ ಅದರದ್ದೇ ವಾಯುಪಡೆಯ ಉನ್ನತ ಮಟ್ಟದ ಅಧಿಕಾರಿಯೋರ್ವರು, ಪುಲ್ವಾಮಾ ದಾಳಿಯಲ್ಲಿ ತಮ್ಮ ಪಾತ್ರದ ಕುರಿತು ಬಹಿರಂಗ ಹೇಳಿಕೆ ನೀಡಿದ್ದಾರೆ.

ಎಂಜಿಪಿಯಲ್ಲಿ 'ಪಾರಂಪರಿಕ ಮರಗಳ ರಕ್ಷಣೆ ಮತ್ತು ವಿಧಾನ'ಗಳ ಕುರಿತು ಚರ್ಚೆ

ಮರ–ಗಿಡಗಳನ್ನು ಮಗುವಿನಂತೆ ಕಾಪಾಡಿಕೊಳ್ಳುವ ಹೊಣೆ ನಮ್ಮೆಲ್ಲರದು

ಸಸ್ಯಶಾಸ್ತ್ರ ತಜ್ಞ ಡಾ.ಎಸ್.ನಟೇಶ್ ಅಭಿಪ್ರಾಯ

ಮೈಸೂರು, ಮೇ 11(ಎಸ್‌ಪಿಎನ್)– ಈ ಭೂಮಿ ಮೇಲೆ ಪ್ರತಿಯೊಬ್ಬರು ಬದುಕಲು ಆಮ್ಲಜನಕ ಅತ್ಯವಶ್ಯಕ. ಇದನ್ನು ಉತ್ಪಾದಿಸುವ ಮರ–ಗಿಡಗಳನ್ನು ಮಗುವಿನಂತೆ ಕಾಪಾಡಿಕೊಳ್ಳುವ ಹೊಣೆ ನಮ್ಮೆಲ್ಲರದು ಎಂದು ಸಸ್ಯಶಾಸ್ತ್ರ ತಜ್ಞರೂ ಆದ ಐಕಾನಿಕ್ ಟ್ರೀಸ್ ಆಫ್ ಇಂಡಿಯಾ ಕೃತಿಯ ಲೇಖಕ ಡಾ.ಎಸ್.ನಟೇಶ್ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ ಆವರಣದಲ್ಲಿ 'ಪಾರಂಪರಿಕ ಮರಗಳ ರಕ್ಷಣೆ ಮತ್ತು ವಿಧಾನ'ಗಳ ವಿಷಯ ಕುರಿತು ಮಾತನಾಡಿದ ಅವರು, ಪ್ರತಿಯೊಂದು ಧರ್ಮ ಗ್ರಂಥದಲ್ಲೂ ಮರ–ಗಿಡಗಳ ರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು ಎಂಬ ಉಲ್ಲೇಖವಿದೆ. ಹಿಂದೂ ಧರ್ಮದ ವೇದ–ಉಪನಿಷತ್‌ಗಳಲ್ಲಿ ಆಮ್ಲಜನಕ ಉತ್ಪಾದಿಸುವ ಹಾಗೂ ಔಷಧಿಕಾರಕ ಸಸ್ಯಗಳ ಬಗ್ಗೆ ಉಲ್ಲೇಖವಿದೆ ಎಂದರು.

ಗೌತಮ ಬುದ್ಧನಿಗೆ ಬೋಧಿ ವೃಕ್ಷದಡಿ ಜ್ಞಾನೋದಯವಾಗಿದೆ ಎಂಬ ಉಲ್ಲೇಖವಿದೆ. ಹಿಂದೂ ಧರ್ಮದಲ್ಲಿ ಅರಳಿಮರಕ್ಕೆ ದೇವರ ಸ್ಥಾನ ನೀಡಲಾಗಿದೆ. ಅಲ್ಲದೆ, ಊರಿಗೊಂದು ಅರಳಮರವಿದ್ದರೆ, ಆ ಜಾಗದಲ್ಲಿ ಆಮ್ಲಜನಕ ಉತ್ಪತ್ತಿಯಾಗುತ್ತದೆ ಎಂದ ಅವರು, ಯಾವುದೇ ಧರ್ಮವಿರಲಿ, ಧರ್ಮಗುರುಗಳಾಲಿ ಮರಗಳನ್ನು ಬೆಳೆಸಲು ಪ್ರೋತ್ಸಾಹದಾಯಕವಾಗಿದ್ದ ಪ್ರಸಂಗಗಳನ್ನು ಎಳೆಎಳೆಯಾಗಿ ಬಿಡಿಸಿದರು.

ಒಂದು ತಂಡವಾಗಿ ಕೆಲಸ ಮಾಡಬೇಕು: ಜೈನ ಧರ್ಮದಲ್ಲಿ 24 ತೀರ್ಥಂಕರರಿಗೂ ಒಂದೊಂದು ಗಿಡಗಳು ಇಷ್ಟವಾಗಿದ್ದವು. ಹಾಗಾಗಿ ಮರಗಳನ್ನು ಬೆಳೆಸುವ ಬಗ್ಗೆ ಬೆಳೆದಿರುವ ಅಮೂಲ್ಯ ಮರಗಳನ್ನು ನಗರ ಪ್ರದೇಶಗಳಲ್ಲಿ ಉಳಿಸಿಕೊಳ್ಳುವ ಬಗ್ಗೆ ಪ್ರತಿಜ್ಞೆ ಮಾಡಬೇಕು. ಮೈಸೂರಿನಲ್ಲಿ 70 ವರ್ಷಕ್ಕೂ ಹೆಚ್ಚು ವಯಸ್ಸಾಗಿರುವ ಮರಗಳನ್ನು ಗುರುತಿಸಿ, ಪೋಷಿಸುವ ಕೆಲಸವಾಗಬೇಕು. ಇದಕ್ಕೆ ಎಂಜಿಪಿ ಸದಸ್ಯರು ಒಂದು ತಂಡವಾಗಿ ಪರಿಸರ ಉಳಿಸಲು ಕೆಲಸ ಮಾಡುವಂತೆ ಸಲಹೆ ನೀಡಿದರು.

ನಗರೀಕರಣ ನೆಪದಲ್ಲಿ ಕೈಗೆ ಸಿಕ್ಕ ಮರ–ಗಿಡಗಳನ್ನು ಕತ್ತರಿಸಿ, ಬಡಾವಣೆ, ಕೈಗಾರಿಕೆಗಳನ್ನು ಸ್ಥಾಪಿಸುತ್ತಿದ್ದೇವೆ. ಮುಂದೊಂದು ದಿನ ಮನುಷ್ಯ ಉಸಿರಾಡುವ ಗಾಳಿಗೂ ಹಣಕೊಡಾಗಬಹುದೇನು ಎಂದು ಅನುಮಾನ ವ್ಯಕ್ತಪಡಿಸಿದ ಅವರು, ಹಾಗಾಗಿ ಮೈಗ್ರಾಪ ಸದಸ್ಯರು ದಿನನಿತ್ಯ ತಂಡವಾಗಿ ಮರ–ಗಿಡಗಳನ್ನು ರಕ್ಷಣೆ ಮಾಡುವ ಬಗ್ಗೆ ಕಾರ್ಯಸೂಚಿ ರೂಪಿಸಿಕೊಳ್ಳುವಂತೆ ಸಲಹೆ ನೀಡಿದರು.

ಪರಿಸರ ಪ್ರಿಯರ ಪಡೆ ಕಟ್ಟುವಂತೆ ಸಲಹೆ: ನಾನು ದೇಶದ ಪ್ರತಿಯೊಂದು ರಾಜ್ಯಕ್ಕೂ ವಿವಿಧ ಕಾರಣಗಳಿಗೆ ಭೇಟಿ ನೀಡಿದ್ದೇನೆ. ಎಲ್ಲೆಲ್ಲಿ ಮರಗಳನ್ನು ಬೆಳೆಸಲು ಅವಕಾಶವಿದೆಯೋ ಅಲ್ಲಲ್ಲಿ ಮರ–ಗಿಡ ಬೆಳೆಸಲು ಪ್ರೋತ್ಸಾಹಿಸುತ್ತಿದ್ದೇನೆ. ಹಾಗಾಗಿ ಎಂಜಿಪಿ ಸದಸ್ಯರು ಮರ–ಗಿಡಗಳ ಬೆಳೆಸಲು ಮತ್ತು ಅದನ್ನು ಕಾಪಾಡಲು ಸಕ್ರಿಯರಾಗಬೇಕು. ಅಲ್ಲದೆ, ಪರಿಸರ ಬಗ್ಗೆ ಅರಿವು ಹೊಂದಿರುವ ತಜ್ಞರ ಪಡೆಯನ್ನು ಕಟ್ಟಿಕೊಂಡು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.



'ಪಾರಂಪರಿಕ ಮರಗಳ ರಕ್ಷಣೆ ಮತ್ತು ವಿಧಾನ'ಗಳ ಕುರಿತು ಮೈಗ್ರಾಪ ಸದಸ್ಯರು ಸಂವಾದ ನಡೆಸುತ್ತಿರುವುದು

ಪಾರಂಪರಿಕ ಮರಗಳ ಬಗ್ಗೆ ಪಬ್ಲಿಕ್ ಆಡಿಟ್ ಆಗಬೇಕು: ಮೈಗ್ರಾಪ ಹಿರಿಯ ಸದಸ್ಯ ಭಾಮಿ ವಿ.ಶೆಣೈ ಸಂವಾದದಲ್ಲಿ ಪಾಲ್ಗೊಂಡು, ಮೈಸೂರಿನ ಹೈದರಾಲಿ ರಸ್ತೆಯಲ್ಲಿ 40ಕ್ಕೂ ಮರಗಳನ್ನು ರಸ್ತೆ ಅಗಲೀಕರಣಕ್ಕೆ ಜಿಲ್ಲಾಡಳಿತ ಕತ್ತರಿಸಲು ಅನುಮತಿ ನೀಡಿದೆ. ಇದರ ಕುರಿತು ಪಬ್ಲಿಕ್ ಆಡಿಟ್ ಮಾಡಲು ಸಾಧ್ಯವೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಒಮ್ಮೆ ಪಶ್ಚಿಮ ಬಂಗಾಲದಲ್ಲಿ ಹೆದ್ದಾರಿ ಅಗಲೀಕರಣಕ್ಕೆಂದು ನೂರಾರು ಮರಗಳನ್ನು ಕಡಿಯಲು ಅಲ್ಲಿನ ಆಡಳಿತ ತೀರ್ಮಾನಿಸಿತು. ಆದರೆ, ಪರಿಸರ ಪ್ರಿಯರೊಬ್ಬರು ಮರಗಳನ್ನು ಕಡಿಯದಂತೆ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಈ ದೂರನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿ ತಜ್ಞರ ಸಮಿತಿ ರಚಿಸಿ, ಸಾಧಕ–ಬಾಧಕಗಳ ವಿಚಾರಣೆ ನಡೆದ ಪ್ರಸಂಗವನ್ನು ವಿವರಿಸಿದರು. ಹಾಗಾಗಿ ಮೈಸೂರಲ್ಲೂ ಪಾರಂಪರಿಕ ಮರಗಳ ಪಬ್ಲಿಕ್ ಆಡಿಟ್ ಮಾಡಿಸುವ ಬಗ್ಗೆ ಚಿಂತಿಸಬೇಕು ಎಂದರು.

ಪರಿಸರ ಜಾಗೃತಿ, ರಕ್ಷಣೆಗೆ ಸಮಿತಿ ರಚನೆ

ಪರಿಸರ ರಕ್ಷಣೆಗೆ ಪರಿಸರ ಪ್ರಿಯರ ಸಮಿತಿ ರಚನೆ. ಹಾಗೂ ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಲಾ ಕಾಲೇಜು ತೆರಳಿ ಪರಿಸರ ಸಂರಕ್ಷಣೆ ಕುರಿತು ಪ್ರತಿಯೊಬ್ಬರ ಜವಾಬ್ದಾರಿ ಕುರಿತು ತಿಳಿಸಲು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು.
- ಎಂಜಿಪಿ

ಮತ್ತೊಬ್ಬ ಸದಸ್ಯ ಭಾನುಪ್ರಶಾಂತ್, ಮರಗಳನ್ನು ಕಡಿಯುವ ಪ್ರಸಂಗ ಬಂದಾಗ ಅಂತಹ ಮರಗಳನ್ನು ಬೇರೆ ಜಾಗಕ್ಕೆ ಬುಡ ಸಮೇತ ಸ್ಥಳಾಂತರಸಿ, ಮರಗಳನ್ನು ಉಳಿಸಿಕೊಳ್ಳುವ ಬಗ್ಗೆ ಪ್ರಶ್ನಿಸಿದಾಗ, ಈ ಮಾರ್ಗದಲ್ಲೂ ಮರಗಳನ್ನು ಉಳಿಸಿಕೊಳ್ಳಬಹುದು. ಆದರೆ, ಮರಗಳ ಸ್ಥಳಾಂತರಕ್ಕೆ ತಗಲು ವೆಚ್ಚವನ್ನು ಭರಿಸುವವರು ಯಾರು? ಎಂದು ಸದಸ್ಯರಿಗೆ ಮರು ಪ್ರಶ್ನೆ ಹಾಕಿದರು.

ಸದಸ್ಯರಾದ ವಸಂತಕುಮಾರ್ ಮಠ, ಅಶ್ವಿನಿ ರಂಜನ್, ಮೇಜರ್ ಜನರಲ್ ಒಂಭತ್ಕರೆ ಪರಿಸರ ರಕ್ಷಣೆ ಕುರಿತು ಕೆಲ ಪ್ರಶ್ನೆಗಳನ್ನು ಕೇಳಿದರು. ಈ ವೇಳೆ ಸದಸ್ಯರಾದ ಶೋಭಸಾಂಬಶಿವನ್, ಪ್ರಭ ನಂದೀಶ್, ಸಾಮಾಜಿಕ ಹೋರಾಟಗಾರ್ತಿ ಗೀತಾ ವೇಲುಮಣಿ, ಎಲ್.ಆರ್. ಜಯರಾಮ್, ಜಯಲಕ್ಷ್ಮಿ, ಎಂ.ಸಿ.ರವಿಚಂದ್ರ, ವಸಂತ್ ಕುಮಾರ್ ಮೈಸೂರು ಮಠ್. ಮೀನಾ, ಎನ್.ಪ್ರಣೀತ್, ಡಾ.ನಟರಾಜ್, ಎನ್.ಟಿ.ಯದು ರಾಜು, ವಿಶ್ವನಾಥ್, ರಶೀದ್ ಅಹ್ಮದ್, ಜಿ.ಶ್ರೀಧರ್, ಲೀಲಾ ವೆಂಕಟೇಶ್, ಎಸ್.ವಿ. ಶಂಕರ್, ಹರ್‌ಪ್ರೀತ್ ಸಿಂಗ್ ಸೇರಿದಂತೆ ಅನೇಕರಿದ್ದರು.

ಇನ್ನೆಂದೂ ಪಾಕಿಸ್ತಾನಕ್ಕೆ ಬರಲ್ಲ; ಪಿಎಸ್‌ಎಲ್ ಆಡಲು ಹೋಗಿದ್ದ ವಿದೇಶಿ ಆಟಗಾರರ ಪ್ರತಿಜ್ಞೆ



ಇಸ್ಲಾಮಾಬಾದ್, ಮೇ 11– ಐಪಿಎಲ್‌ನಲ್ಲಿ ಅವಕಾಶ ಸಿಗದೇ ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಆಡಲು ಹೋಗಿದ್ದ ವಿದೇಶಿ ಕ್ರಿಕೆಟಿಗರಿಗೆ ಪಾಕಿಸ್ತಾನ್‌ದಲ್ಲಿ ಕರಾಳ ಅನುಭವ ಎದುರಾಗಿದ್ದು, ಇನ್ನೆಂದೂ ಪಾಕಿಸ್ತಾನಕ್ಕೆ ಬರಲ್ಲ ಎಂದು ಆಟಗಾರರು ಪ್ರತಿಜ್ಞೆ ಮಾಡಿದ್ದಾರೆ ಎಂದು ವರದಿಯಾಗಿದೆ.

ಪಹಲ್ಗಾಮ್ ಉಗ್ರದಾಳಿ ಬಳಿಕ ನಡೆದ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ಭುಗಿಲೆದ್ದಿದ್ದ ಸೇನಾ ಸಂಘರ್ಷ ಕೇವಲ ಉಭಯ ದೇಶಗಳ ನಾಗರಿಕರು ಮಾತ್ರವಲ್ಲದೇ ವಿದೇಶಿ ಕ್ರಿಕೆಟಿಗರನ್ನೂ ಕೂಡ ಕಾಡಿತ್ತು. ಪ್ರಮುಖವಾಗಿ ಪಿಎಸ್‌ಎಲ್ ಆಡಲು ಪಾಕಿಸ್ತಾನಕ್ಕೆ ಹೋಗಿದ್ದ ವಿದೇಶಿ ಕ್ರಿಕೆಟಿಗರು ಕರಾಳ ಅನುಭವದೊಂದಿಗೆ ತಮ್ಮ ದೇಶಕ್ಕೆ ಹಿಂದಿರುಗಿದ್ದಾರೆ.

ವಿದೇಶಿ ಆಟಗಾರರಾದ ಸ್ಯಾಮ್ ಬಿಲ್ಲಿಂಗ್ಸ್, ಡೇರಿಲ್ ಮಿಚೆಲ್, ಕುಶಾಲ್ ಪೆರೆರಾ, ಡೇವಿಡ್ ವೀಸೆ ಮತ್ತು ಟಾಮ್ ಕರನ್ ಸೇರಿದಂತೆ ಅನೇಕ ಬಹುತೇಕ ವಿದೇಶಿ ಆಟಗಾರರು ಪಾಕಿಸ್ತಾನದಿಂದ ಹೊರಡುವ ವೇಳೆ ಭಯಭೀತರಾಗಿದ್ದು ಅನೇಕ ಆಟಗಾರರು ಮರಳಿ ಪಾಕಿಸ್ತಾನಕ್ಕೆ ಬರುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ದುಬೈ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಿಷಾದ್ ಹುಸೇನ್, ವಿದೇಶಿ ಆಟಗಾರರು ಪಾಕಿಸ್ತಾನದಿಂದ ಹೊರಡುವ ವೇಳೆ ಬಹಳ ಭಯಭೀತರಾಗಿದ್ದರು ಎಂದು ತಿಳಿಸಿದ್ದರು. ಇಂಗ್ಲೆಂಡ್ ನ ಟಾಮ್ ಕರನ್ ಎಂಬ ಆಟಗಾರ ವಿಮಾನ ನಿಲ್ದಾಣ ಮುಚ್ಚಿದ್ದ ಕಾರಣ ಅತ್ತರು.

ನಕ್ಕರೆ ಅದೇ ಸ್ವರ್ಗ

ತಿಮ್ಮ : ನಿನ್ನೆ ಬರಬೇಕಾದರೆ ನನ್ನ ಹೆಂಡ್ತಿ ಕಣ್ಣಿಗೆ ಸಣ್ಣ ಕಲ್ಲೊಂದು ಬಿತ್ತು. ಅದನ್ನು ತೆಗೆಸೋಕೆ ನೂರು ರೂಪಾಯಿ ಖರ್ಚಾಯಿತು ಕಣೋ.

ಗುಂಡ : ನಿಂದೆ ಪರವಾಗಿಲ್ಲ ಬಿಡಪ್ಪ.

ತಿಮ್ಮ : ಏನಾಯಿತು ನಿಂಗೆ?

ಗುಂಡ : ನನ್ನ ಹೆಂಡ್ತಿ ಕಣ್ಣಿಗೆ ನಿನ್ನೆ ರೇಷ್ಮೆ ಸೀರೆ ಬಿತ್ತಪ್ಪ, ಐದು ಸಾವಿರ ಖರ್ಚಾಯಿತು.

ಮೈಸೂರು ಮಿತ್ರ

ಸೋಮವಾರ, 12 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ಕೆಲವೊಮ್ಮೆ ಜೀವನವು ನಮಗೆ ಬೇಕಾದ್ದನ್ನು ಕೊಡುವುದಿಲ್ಲ. ಹಾಗೆಂದ ಮಾತ್ರಕ್ಕೆ ನಮಗೆ ಅದರ ಅರ್ಹತೆಯಿಲ್ಲ ಎಂದಲ್ಲ, ಬಹುಶಃ ಅದಕ್ಕಿಂತಲೂ ಹೆಚ್ಚಿನದಕ್ಕೆ ಅರ್ಹತೆವುಳ್ಳವರಾಗಿದ್ದೇವೆ ಎಂದರ್ಥ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಾಸು ಬಿಡದ ತಿಮ್ಮಪ್ಪ, ಮಾತು ಬಿಡದ ಮಂಜಪ್ಪ'

ನಿಮ್ಮ ಪತ್ರಗಳು

ಅಣ್ವಸ್ತ್ರ ಯುದ್ಧದ ಹೊಸ್ತಿಲಲ್ಲಿ ಜಗತ್ತು

ಮಾನ್ಯರೆ,

ಪ್ರಸ್ತುತ ಜಗತ್ತು ಇಸ್ರೇಲ್–ಪ್ಯಾಲೆಸ್ಟೈನ್, ರಷ್ಯಾ–ಉಕ್ರೇನ್ ಮತ್ತು ಭಾರತ–ಪಾಕಿಸ್ತಾನದ ನಡುವಿನ ಸಂಘರ್ಷಕ್ಕೆ ಸಾಕ್ಷಿಯಾಗಿದೆ. ರಷ್ಯಾ ಇತ್ತೀಚೆಗೆ ಉಕ್ರೇನ್ ಮೇಲೆ ಅಣ್ವಸ್ತ್ರ ಬಳಸುವ ಮಾತುಗಳನ್ನಾಡಿತ್ತು ಮತ್ತು ದಕ್ಷಿಣ ಏಷ್ಯಾದ ಎರಡು ಅಣ್ವಸ್ತ್ರ ರಾಷ್ಟ್ರಗಳಾದ ಭಾರತ ಮತ್ತು ಪಾಕಿಸ್ತಾನದ ಸಂಘರ್ಷ ಆರಂಭದ ವೇಳೆ ಪಾಕ್ ಅಣ್ವಸ್ತ್ರ ಬಳಸುವ ಮಾತುಗಳನ್ನಾಡಿರುವುದು ಜಗತ್ತಿಗೆ ಎಚ್ಚರಿಕೆಯ ಸಂದೇಶವಾಗಿದೆ.

ಅಣ್ವಸ್ತ್ರ ಯುದ್ಧ ಅತ್ಯಂತ ಭಯಾನಕ. ಮಾನವ ಕುಲಕೋಟಿಗೆ ವಿನಾಶಕಾರಿ. 1945ರಲ್ಲಿ ಹಿರೋಷಿಮಾದ ಮೇಲಿನ 15 ಕೆಜಿ ತೂಕದ ಅಣ್ವಸ್ತ್ರದ ಹಾನಿ ಈಗಲೂ ಜಗತ್ತನ್ನು ಒಂದು ಕೆಟ್ಟ ಕನಸಿನಂತೆ ಕಾಡುತ್ತಿದೆ. ಅಣ್ವಸ್ತ್ರ ಬಳಕೆ ಜಗತ್ತಿನ ನಾಶಕ್ಕೆ ನಾಂದಿಯಾಗಬಹುದು.

ಅಣ್ವಸ್ತ್ರ ತಯಾರಿಕೆಯಲ್ಲಿ ಯುರೇನಿಯಂ–235ನ್ನು ಹೆಚ್ಚಾಗಿ ಬಳಸಿ ಪರಮಾಣು ಬಾಂಬ್‌ಗಳನ್ನು ತಯಾರಿಸಲಾಗುತ್ತದೆ. ಪ್ರಸ್ತುತ ಅಮೆರಿಕ, ರಷ್ಯಾ, ಚೀನಾ, ಫ್ರಾನ್ಸ್ ದೇಶಗಳು ವಿಶ್ವದಲ್ಲಿಯೇ ಅತ್ಯಧಿಕ ಪ್ರಮಾಣದ ಪರಮಾಣು ಬಾಂಬ್‌ಗಳನ್ನು ಹೊಂದಿವೆ ಹಾಗೂ 2022ರವರೆಗೂ ವಿಶ್ವದ 9 ದೇಶಗಳು ಸರಿಸುಮಾರು 12,700 ಸಿಡಿತಲೆಗಳನ್ನು ಹೊಂದಿವೆ ಎಂದೂ ತಿಳಿದು ಬಂದಿದೆ.

2022ರ ಮಾಹಿತಿಯ ಪ್ರಕಾರ ರಷ್ಯಾ– 5977, ಅಮೆರಿಕಾ–5428, ಚೀನಾ–350, ಫ್ರಾನ್ಸ್–290,ಇಂಗ್ಲೆಂಡ್–225, ಪಾಕಿಸ್ತಾನ–165, ಭಾರತ– 160, ಇಸ್ರೇಲ್–90, ಉತ್ತರ ಕೊರಿಯಾ–20 ಅಣ್ವಸ್ತ್ರಗಳನ್ನು ಹೊಂದಿದೆ ಎಂದೂ ತಿಳಿದು ಬಂದಿದೆ. 2025ರ ವರದಿಯ ಪ್ರಕಾರ ಜಗತ್ತಿನ ಅಣ್ವಸ್ತ್ರಗಳ ಸಂಖ್ಯೆ ರಷ್ಯಾ 5,449, ಯುನೈಟೆಡ್ ಸ್ಟೇಟ್ಸ್ 5,277, ಚೀನಾ 600,ಫ್ರಾನ್ಸ್ 290, ಯುನೈಟೆಡ್ ಕಿಂಗ್‌ಡಮ್ 225,ಭಾರತ 180,ಪಾಕಿಸ್ತಾನ 170, ಇಸ್ರೇಲ್ 90, ಉತ್ತರ ಕೊರಿಯಾ 50 ಒಟ್ಟು 12,331 ಇವೆ ಎಂದು ತಿಳಿದು ಬಂದಿದೆ. ಯಾವುದೇ ರಾಷ್ಟ್ರ ತನ್ನ ಅಣ್ವಸ್ತ್ರ ಸಂಖ್ಯೆಯ ಬಗ್ಗೆ ನಿಖರವಾದ ಮಾಹಿತಿ ನೀಡುವುದು ಕಡಿಮೆ.

ಅಣ್ವಸ್ತ್ರಗಳ ಬಳಕೆ ಜಗತ್ತಿಗೆ ಮಾರಕ, ಭಾರತ ತಾನು ಮೊದಲು ಅಣ್ವಸ್ತ್ರ ಬಳಸುವುದಿಲ್ಲ ಎಂದು ತಿಳಿಸಿರುವುದು ಭಾರತದ ಮಾನವತವಾದದ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ಜಗತ್ತಿನ ಎಲ್ಲಾ ಸಂಘರ್ಷಗಳು ಕೊನೆಯಾಗಿ ಜಗತ್ತಿನಲ್ಲಿ ಶಾಂತಿ ನೆಲೆಸಲೆಂದೂ ಆಶಿಸೋಣ. – ರಾಸುಮ ಭಟ್

ಉತ್ತಮ ಫಲಿತಾಂಶ ಹೇಗೆ ಸಾಧ್ಯ?

ಮಾನ್ಯರೆ,

ಹತ್ತನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಖಾಸಗಿ ಶಾಲೆಗಳಲ್ಲಿ ಪೋಷಕರ ಹಾಗೂ ಶಿಕ್ಷಕರ ಒತ್ತಡದಿಂದ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದ ಉತ್ತಮ ಫಲಿತಾಂಶ ಶಾಲೆಗಳಿಗೆ ಬರುತ್ತದೆ. ಆದರೆ ಕೆಲವು ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ಶಿಕ್ಷಕರು ಶ್ರಮಪಟ್ಟು ಮಕ್ಕಳ ಏಳ್ಗೆಯನ್ನು ಬಯಸುತ್ತಾರೆ. ಆದರೆ ಪೋಷಕರು ಹಾಗೂ ವಿದ್ಯಾರ್ಥಿಗಳು ಸಹಕಾರ ನೀಡದ ಕಾರಣ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಅನುತ್ತೀರ್ಣಗೊಳ್ಳುತ್ತಾರೆ. ಇದಕ್ಕೆ ವಿದ್ಯಾರ್ಥಿಗಳ ಬೇಜವಾಬ್ದಾರಿ ಅವಿವೇಕತನ ಅವಿದ್ಯಾವಂತ ಪೋಷಕರು ಕಾರಣರಾಗುತ್ತಾರೆ. ಮತ್ತೊಂದು ಮುಖ್ಯವಾದ ವಿಷಯ ಶಿಕ್ಷಣ ಕ್ಷೇತ್ರದಲ್ಲಿ ಒಂದರಿಂದ ಒಂಬತ್ತನೇ ತರಗತಿಯವರೆಗೂ ಅನುತ್ತೀರ್ಣಗೊಳಿಸುವ ಹಾಗಿಲ್ಲ ಎಂದು ಶಿಕ್ಷಣದ ನಿಯಮದ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಕಳುಹಿಸುತ್ತಾರೆ. ಇಂತಹ ವಿದ್ಯಾರ್ಥಿಗಳಿಂದ ಹತ್ತನೇ ತರಗತಿಯ ಉತ್ತಮ ಫಲಿತಾಂಶ ಸರ್ಕಾರಿ ಶಾಲೆಗಳಲ್ಲಿ ಹೇಗೆ ನಿರೀಕ್ಷಿಸಲು ಸಾಧ್ಯ. ಶಿಕ್ಷಣ ಕ್ಷೇತ್ರದಲ್ಲಿ ಸ್ವಲ್ಪ ಬದಲಾವಣೆಯನ್ನು ತಂದು ಅರ್ಹ ವಿದ್ಯಾರ್ಥಿಗಳಿಗೆ ಮುಂದಿನ ತರಗತಿಗೆ ಅವಕಾಶ ನೀಡಿದರೆ ಮಾತ್ರ ಹತ್ತನೇ ತರಗತಿಯಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲೂ ಹಾಗೂ ಗ್ರಾಮೀಣ ಪ್ರದೇಶದ ಶಾಲೆಗಳಲ್ಲೂ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಶಿಕ್ಷಕರಿಗೂ ನೆಮ್ಮದಿ ತರುವ ವಿಷಯವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಈ ಬದಲಾವಣೆ ಬಹಳ ಮುಖ್ಯವಾಗಿರುತ್ತದೆ. ಶಿಕ್ಷಣ ಸಚಿವರು ಈ ವಿಷಯಕ್ಕೆ ಗಮನಹರಿಸಿ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದು.

– ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ತೆಲಂಗಾಣದ ದಯನೀಯ ಪರಿಸ್ಥಿತಿ

ಮಾನ್ಯರೆ,

ಕಾಂಗ್ರೆಸ್ ಆಡಳಿತವಿರುವ ತೆಲಂಗಾಣದ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ. ಜನರಿಗೆ ಹಲವಾರು ಪುಕ್ಕಟ್ಟೆ ಯೋಜನೆಗಳನ್ನು ಹಾಗೂ ಗ್ಯಾರಂಟಿ ಸ್ಕೀಮ್‌ಗಳನ್ನು ನೀಡಿ ಇದೇ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ಕೊಟ್ಟಿರುವ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗದೇ ತಿಪ್ಪರಲಾಗ ಹಾಕುತ್ತಿದೆ. ಅಲ್ಲಿನ ಮುಖ್ಯಮಂತ್ರಿ ರೇವಂತ್ ರೆಡ್ಡಿ ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿರುವುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದು, ಪ್ರತಿ ತಿಂಗಳು ರಾಜ್ಯ ಸರ್ಕಾರದ ವೆಚ್ಚಕ್ಕೆ 22,500 ಕೋಟಿ ರೂಪಾಯಿಗಳು ಬೇಕಿದ್ದು ಪ್ರಸ್ತುತ 18,500 ಗಳಿಗಿಂತ ಒಂದು ರೂಪಾಯಿ ಕೂಡ ಹೆಚ್ಚಿಗೆ ಲಭ್ಯವಿಲ್ಲವೆಂದು ಹೇಳಿದ್ದಾರೆ. ಹೆಚ್ಚಿನ ವೇತನಕ್ಕಾಗಿ ಮುಷ್ಕರ ಹೂಡಿರುವ ರಾಜ್ಯ ಸರ್ಕಾರಿ ನೌಕರರ ಬಗ್ಗೆ ಮಾತನಾಡಿ, ತಮ್ಮನ್ನು ತುಂಡು ತುಂಡಾಗಿ ಕತ್ತರಿಸಿದರೂ ಸಹ, ಹೆಚ್ಚಿನ ಹಣದ ಲಭ್ಯತೆ ಇಲ್ಲವೆಂದು ಹೇಳಿದ್ದಾರೆ. ಅದೂ ಅಲ್ಲದೇ ತಮ್ಮ ಸರ್ಕಾರಕ್ಕೆ ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ಸಾಲ ನೀಡಲು ಸಿದ್ಧವಿಲ್ಲವೆಂಬುದನ್ನು ಸಹ ಒಪ್ಪಿಕೊಂಡಿರುವ ರೆಡ್ಡಿ, ನಮ್ಮನ್ನು ಕಳ್ಳರಂತೆ ನೋಡುತ್ತಾರೆ ಎಂಬ ಅತ್ಯಂತ ಬೇಸರದಿಂದ ಅಲವತ್ತುಕೊಂಡಿದ್ದಾರೆ. ರಾಜ್ಯದ ಮುಖ್ಯಮಂತ್ರಿಯೊಬ್ಬರು ತಮ್ಮ ರಾಜ್ಯದ ಆರ್ಥಿಕ ದುಸ್ಥಿತಿಯ ಬಗ್ಗೆ ಮುಚ್ಚುಮರೆ ಇಲ್ಲದೇ ಇದ್ದದ್ದನ್ನು ಇದ್ದ ಹಾಗೇ ಹೇಳಿಕೊಂಡಿರುವುದು ಇದೇ ಮೊದಲಾಗಿದೆ. ಆ ಕಾರಣಕ್ಕಾಗಿ ಮುಖ್ಯಮಂತ್ರಿ ರೇವಂತ್ ರೆಡ್ಡಿಯವರನ್ನು ನಾನು ಅಭಿನಂದಿಸುತ್ತೇನೆ. ಜೊತೆಗೆ ಈಗಲಾದರೂ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸುವ ಬಗ್ಗೆ ಮರು ಚಿಂತನೆ ನಡೆಸುತ್ತಾರೆಂದು ಭಾವಿಸುತ್ತೇನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ನಂಬಿಕೆ ಮತ್ತು ದ್ರೋಹ

ಮಾನ್ಯರೆ,

ನಂಬಿಕೆಗೆ ಮತ್ತೊಂದು
ಹೆಸರೇ, ತ್ರಿವರ್ಣದ
ತವರು ಭಾರತ!
ದ್ರೋಹಕ್ಕೆ
ಮತ್ತೊಮ್ಮೆ
ಪುರಾವೆ,
ಹಸಿರು ವರ್ಣ
ಮುಖವಾಡದ
ಉಗ್ರರ ತವರು,
ಪಾಕಿಸ್ತಾನ!!!

–ಮುಳ್ಳೂರು ಪ್ರಕಾಶ್, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಸಮಾಧಾನವೇ ಸ್ವರ್ಗ... ಅಸಮಾಧಾನವೇ ನರಕ...!

ಸಮಾಧಾನ ಹೊಂದಲು ನೂರು ಕಾರಣಗಳಿದ್ದರೂ ಅಸಮಾಧಾನ ಹೊಂದಲು ಮೂರು ಕಾರಣಗಳನ್ನು ಹುಡುಕುವ ಜಾಯಮಾನದವರು ಅನೇಕರಿದ್ದಾರೆ. ಇರುವ ಸಂತೋಷವನ್ನು ನೆನೆದು ಹರ್ಷಪಡದೆ, ಎಂದೋ ಆದ ದುರ್ಘಟನೆಯ ದುಃಖವ ನೆನೆದು ಮತ್ತೆ ಮತ್ತೆ ವ್ಯಥೆ ಪಡುವವರು ಬಹಳ ಮಂದಿ ಇದ್ದಾರೆ. ಸುಖದ ಸುಪ್ಪತ್ತಿಗೆಯಲ್ಲಿದ್ದರೂ, ಸಣ್ಣ ಕೋರಿಕೆಗಳ ಕೊರತೆ ನೆನೆದು ಅಸಮಾಧಾನದಿಂದ ಕುದಿಯುವವರು ಇಲ್ಲದಿಲ್ಲ. ಮನುಷ್ಯನಾಗಿ ಹುಟ್ಟಿದ ಮೇಲೆ ಕಷ್ಟ–ಸುಖಗಳು ಬದುಕಿನ ಪುಟಗಳ ಪಾಠಗಳು. ನಮಗೆ ಕಷ್ಟ ಬರಬಾರದು ಎಂದೆನಿಸುವುದು ಮೂರ್ಖತನ. ಇಂತಹ ಮನಸ್ಥಿತಿಯವರನ್ನು ಕಂಡು ಪ್ರಪಂಚದ ಮೊದಲ ಕವಯತ್ರಿ ಶರಣೆ ಅಕ್ಕಮಹಾದೇವಿ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆ ಎಂತಯ್ಯ? ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ ನೊರೆತೊರೆಗಳಿಗಂಜಿದೊಡೆ ಎಂತಯ್ಯ? ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ, ಚೆನ್ನಮಲ್ಲಿಕಾರ್ಜುನ ದೇವಾ ಕೇಳಯ್ಯ, ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕಯ್ಯ' ಎಂದು ವಚನವೊಂದರಲ್ಲಿ ಹೇಳಿದ್ದಾರೆ. ಬದುಕೆಂಬ ಸಂತೆಯಲ್ಲಿ ಟೀಕೆ ಟಿಪ್ಪಣಿಗಳು ಸಹಜ. ಅವುಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ ಸಮಾಧಾನದಿಂದ ಇರಬೇಕು ಎಂಬ ತತ್ತ್ವವನ್ನು ಈ ವಚನ ಹೇಳುತ್ತದೆ. ಎಲ್ಲರನ್ನೂ ಮೆಚ್ಚಿಸಿ ಬದುಕಲು ಸಾಧ್ಯವಿಲ್ಲ, ಅದು ಸಾಧುವೂ ಅಲ್ಲ.

ಇರುವ ಸಮಾಧಾನವನ್ನು ಬದಿಗೊತ್ತಿ, ಇಲ್ಲದ ಅಸಮಾಧಾನಕ್ಕಾಗಿ ಹಾತೊರೆಯುವುದು ಕೆಲವರಿಗೆ ಒಂದು ವ್ಯಸನವಾಗಿರುತ್ತದೆ ಅಥವಾ ಗೀಳಾಗಿರುತ್ತದೆ. ಇದನ್ನು ಒಂದು ಮಾನಸಿಕ ಖಾಯಿಲೆ ಅಂತಲೂ ಕರೆಯಬಹುದು. ಇನ್ನು ಕೆಲವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸಮಾಧಾನವಾಗಿರುವವರನ್ನು ಕಂಡು ಅಸಮಾಧಾನ ಹೊಂದುತ್ತಾರೆ. ಎಲ್ಲವೂ ಇರುವ ತಾನು ಸಮಾಧಾನ ಪಡೆಯಲು ಸಾಧ್ಯವಾಗದಿದ್ದರೂ, ಅವರಿಗೆ ಅನೇಕ ಕೊರತೆಗಳಿದ್ದರೂ ಹೇಗೆ ಸಮಾಧಾನವಾಗಿದ್ದಾರೆ? ಎಂಬುದು ಅವರ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಇವರುಗಳು ಬದುಕಿನಲ್ಲಿ ಅನೇಕ ನಿರೀಕ್ಷೆಗಳು ಹಾಗೂ ಕೋರಿಕೆಗಳನ್ನು ಹೊಂದಿರುತ್ತಾರೆ. ಅವುಗಳು ಈಡೇರದೇ ಇದ್ದಾಗ ನಿರಾಸೆ ಅನುಭವಿಸುತ್ತಾರೆ. ಇದೊಂದು ಸ್ವಯಂಕೃತ ತಪ್ಪಾಗಿರುತ್ತದೆ. ಆ ಕಾರಣಕ್ಕೆ ಇರಬೇಕು ಡಿವಿಜಿ ಅವರು 'ಇರುವ ಭಾಗ್ಯವ ನೆನೆದು, ಬಾರೆನೆಂಬುದ ಬಿಡು, ಹರುಷಕ್ಕಿದೆ ದಾರಿ' ಎಂದು ಹೇಳಿರುವುದು.

ಮನುಷ್ಯರಲ್ಲಿ ಅನೇಕರಿಗೆ ಏನು ಲಭಿಸಿದರೂ ಸಮಾಧಾನ ಎಂಬುದು ಇರುವುದಿಲ್ಲ. ಬಯಸಿದ್ದು ದಕ್ಕಿದ್ದರೂ ಸಮಾಧಾನ ಹೊಂದಿರುವುದಿಲ್ಲ. ಒಂದು ಕೋರಿಕೆ ಈಡೇರಿದರೆ ಮತ್ತೊಂದಕ್ಕೆ ಹಾತೊರೆಯುತ್ತಾರೆ. ಭಗವಂತ ಸುಖವಾಗಿರಲು, ನೆಮ್ಮದಿಯಾಗಿ ಬದುಕಲು ಎಲ್ಲವನ್ನೂ ನೀಡಿದ್ದರೂ, ಅದಕ್ಕಾಗಿ ಭಗವಂತನಿಗೆ ಕೃತಜ್ಞತೆ ಸಲ್ಲಿಸದೆ, ಮತ್ತೊಮ್ಮೆ ಭಗವಂತನ ಮುಂದೆ ನಿಂತು ಅದು ಕೊಡು, ಇದು ಕೊಡು ಎಂದು ಭಿಕ್ಷೆ ಬೇಡುವುದು ದುರದೃಷ್ಟಕರ. ನಮ್ಮ ಬದುಕು ಸಾವಿರ ಜನರ ಕನಸಾಗಿರುತ್ತದೆ. ಅದನ್ನು ಅರಿಯದೆ ದುರಾಸೆಯಿಂದ ಮತ್ತಷ್ಟು, ಮಗದಷ್ಟು ಬೇಡುವುದು ಮೂರ್ಖತನವಾಗುತ್ತದೆ. ನಡೆದಾಡುವ ವಿಶ್ವಕೋಶ ಎನಿಸಿಕೊಂಡಿದ್ದ ಖ್ಯಾತ ಸಾಹಿತಿಗಳಾದ ಶಿವರಾಮ ಕಾರಂತ ಅವರು 'ಕೈ ಮುಗಿದು ಕೇಳುವುದಕ್ಕೆ ಏನಿದೆ? ಈ ಬದುಕೆ ಒಂದು ಉಡುಗೊರೆ ಅಲ್ಲವೇ?' ಎಂದು ಹೇಳಿದ್ದಾರೆ. ಇದನ್ನು ಅರ್ಥಮಾಡಿಕೊಂಡರೆ ದೊಡ್ಡ ಸಮಾಧಾನವಾಗುವುದು ಖಚಿತ. ಬೆಳಗ್ಗೆ ಎದ್ದಾಕ್ಷಣ ಭಗವಂತನಿಗೆ ಬೇಡಿಕೆ ಸಲ್ಲಿಸುವ ಬದಲು, ಬದುಕಲು ಮತ್ತೊಂದು ದಿನ ಅವಕಾಶ ಮಾಡಿಕೊಟ್ಟ ಕಾರಣಕ್ಕೆ ಧನ್ಯವಾದ ತಿಳಿಸಿ ಸಮಾಧಾನ ಪಡೆಯುವುದು ಜಾಣತನ.

ಕೆಲವರು ಸಹಜ ಸಮಾಧಾನ ಪಡೆಯುವುದಕ್ಕಿಂತ ವಿಕೃತ ಸಮಾಧಾನ ಪಡೆಯುತ್ತಾರೆ. ಅವರಿಗೆ ಅವರ ಗೆಲುವು ಸಮಾಧಾನ ಕೊಡುವ ಬದಲು ಬೇರೆಯವರ ಸೋಲು ಅವರಿಗೆ ಸಮಾಧಾನ ನೀಡುತ್ತದೆ. ಸಂಬಂಧಿಗಳಿಗೆ ಗಂಭೀರ ಖಾಯಿಲೆಯಾದರೆ, ಆರ್ಥಿಕವಾಗಿ ನಷ್ಟವಾದರೆ, ನೆರೆಹೊರೆಯವರ ಮಕ್ಕಳು ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಇವರಿಗೆ ಆಗುವ ಸಮಾಧಾನ ಅಷ್ಟಿಷ್ಟಲ್ಲ. ಅದರಿಂದ ಇವರಿಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ. ಆದರೆ ಗೊತ್ತಿರುವವರಿಗೆ ತೊಂದರೆಯಾಯಿತು ಎಂದರೆ ಒಂದು ರೀತಿಯ ಸಮಾಧಾನ. ಇಂತಹ ವಿಕೃತ ಮನಸ್ಸಿನವರಿಗೆ ಅಸಮಾಧಾನ ಆಗುವುದು ಯಾವಾಗ ಎಂದರೆ ಸಂಬಂಧಿಗಳು ಹೊಸ ಮನೆ ನಿರ್ಮಾಣ ಮಾಡಿದರೆ, ನೆರೆಹೊರೆಯವರ ಮಕ್ಕಳು ರ್‍ಯಾಂಕ್ ಪಡೆದರೆ, ಸ್ನೇಹಿತರೊಬ್ಬರು ದುಬಾರಿ ಕಾರು ಖರೀದಿಸಿದಾಗ ಇವರಿಗೆ ಅಸಮಾಧಾನ ಶುರುವಾಗುತ್ತದೆ. ಈ ಮನಸ್ಥಿತಿಯವರು ವಿನಾಕಾರಣ ಚಿಂತಿಸಿ, ವ್ಯಥೆಪಟ್ಟು ನರಕ ಅನುಭವಿಸುತ್ತಾರೆ.



ಮನುಷ್ಯರಲ್ಲಿ ಅನೇಕರಿಗೆ ಏನೇ ಲಭಿಸಿದರೂ ಸಮಾಧಾನ ಎಂಬುದು ಇರುವುದಿಲ್ಲ. ಬಯಸಿದ್ದುದಕ್ಕಿದ್ದರೂ ಸಮಾಧಾನ ಹೊಂದಿರುವುದಿಲ್ಲ. ಒಂದು ಕೋರಿಕೆ ಈಡೇರಿದರೆ ಮತ್ತೊಂದಕ್ಕೆ ಹಾತೊರೆಯುತ್ತಾರೆ. ಭಗವಂತ ಸುಖವಾಗಿರಲು, ನೆಮ್ಮದಿಯಾಗಿ ಬದುಕಲು ಎಲ್ಲವನ್ನೂ ನೀಡಿದ್ದರೂ, ಅದಕ್ಕಾಗಿ ಭಗವಂತನಿಗೆ ಕೃತಜ್ಞತೆ ಸಲ್ಲಿಸದೆ, ಮತ್ತೊಮ್ಮೆ ಭಗವಂತನ ಮುಂದೆ ನಿಂತು ಅದು ಕೊಡು, ಇದು ಕೊಡು ಎಂದು ಭಿಕ್ಷೆ ಬೇಡುವುದು ದುರದೃಷ್ಟಕರ. ನಮ್ಮ ಬದುಕು ಸಾವಿರ ಜನರ ಕನಸಾಗಿರುತ್ತದೆ. ಅದನ್ನು ಅರಿಯದೆ ದುರಾಸೆಯಿಂದ ಮತ್ತಷ್ಟು, ಮಗದಷ್ಟು ಬೇಡುವುದು ಮೂರ್ಖತನವಾಗುತ್ತದೆ. ನಡೆದಾಡುವ ವಿಶ್ವಕೋಶ ಎನಿಸಿಕೊಂಡಿದ್ದ ಖ್ಯಾತ ಸಾಹಿತಿಗಳಾದ ಶಿವರಾಮ ಕಾರಂತ ಅವರು 'ಕೈ ಮುಗಿದು ಕೇಳುವುದಕ್ಕೆ ಏನಿದೆ ? ಈ ಬದುಕೆ ಒಂದು ಉಡುಗೊರೆ ಅಲ್ಲವೇ?' ಎಂದು ಹೇಳಿದ್ದಾರೆ. ಇದನ್ನು ಅರ್ಥಮಾಡಿಕೊಂಡರೆ ದೊಡ್ಡ ಸಮಾಧಾನವಾಗುವುದು ಖಚಿತ. ಬೆಳಗ್ಗೆ ಎದ್ದಾಕ್ಷಣ ಭಗವಂತನಿಗೆ ಬೇಡಿಕೆ ಸಲ್ಲಿಸುವ ಬದಲು, ಬದುಕಲು ಮತ್ತೊಂದು ದಿನ ಅವಕಾಶ ಮಾಡಿಕೊಟ್ಟ ಕಾರಣಕ್ಕೆ ಧನ್ಯವಾದ ತಿಳಿಸಿ ಸಮಾಧಾನ ಪಡೆಯುವುದು ಜಾಣತನ.

ಅನೇಕ ಪೋಷಕರಿಗೆ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯಿಂದ ಸಮಾಧಾನವಿರುತ್ತದೆ. ಆದರೆ ಅವರ ಸಮಾಧಾನವನ್ನು ದೊಡ್ಡ ಮನುಷ್ಯರು ಎನಿಸಿಕೊಂಡ ಬಂಧು–ಬಾಂಧವರು ಕದಡಿಬಿಡುತ್ತಾರೆ. ಫಲಿತಾಂಶ ಪ್ರಕಟವಾದ ತಕ್ಷಣ ಫೋನ್ ಮಾಡಿ ವಿಚಾರಿಸುವ ನೆಪದಲ್ಲಿ ಪೋಷಕರಿಗೆ ಅವರ ಮಕ್ಕಳ ಬಗ್ಗೆ ಜಿಗುಪ್ಸೆ ಬರುವಂತೆ ಮಾಡಿಬಿಡುವ ವಿಘ್ನ ಸಂತೋಷಿಗಳು ಅನೇಕರಿದ್ದಾರೆ. ಫಸ್ಟ್ ಕ್ಲಾಸ್ ಬಂದಿದ್ದರೆ, ಡಿಸ್ಟಿಂಕ್ಷನ್ ಬರಬೇಕಿತ್ತು ಎನ್ನವುದು, ಡಿಸ್ಟಿಂಕ್ಷನ್ ಬಂದಿದ್ದರೆ ಇನ್ನು ಹತ್ತು ಮಾರ್ಕ್ ತೆಗೆದುಕೊಂಡಿದ್ದರೆ ರ್‍ಯಾಂಕ್ ಬರಬಹುದಿತ್ತು ಎಂದು ಕಾಮೆಂಟ್ ಮಾಡುವುದು. ಹೀಗೆ ಅನೇಕರು ಫೋನ್ ಮಾಡಿ ಅವರ ಮಕ್ಕಳ ಸಾಧನೆಗೆ ಶ್ಲಾಘನೆ ಮಾಡುವ ಬದಲು, ಅವರ ಮನಸ್ಸನ್ನು ಕದಡಿ ಖುಷಿ ಪಡುತ್ತಾರೆ. ಪರಿಶ್ರಮದಿಂದ ಒಂದು ವಿಷಯದಲ್ಲಿ 100ಕ್ಕೆ 98 ಅಂಕಗಳನ್ನು ಗಳಿಸಿದ್ದರೂ ಅದಕ್ಕೆ ತೃಪಿಪಟ್ಟು ಶ್ಲಾಘನೆ ಮಾಡದೆ, ಇನ್ನೆರಡು ಅಂಕಗಳು ಎಲ್ಲಿ ಹೋದವು ಎಂದು ಮಕ್ಕಳಿಗೆ ಪೋಷಕರು ಮನನೋಯುವಂತೆ ಮಾತನಾಡುತ್ತಾರೆ. ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳಲು ಇಂತಹ ವಿಘ್ನ ಸಂತೋಷಿಗಳ ಚುಚ್ಚು ಮಾತುಗಳೇ ಕಾರಣವಾಗಿರುತ್ತವೆ. ತಮ್ಮ ತಟ್ಟೆಯಲ್ಲಿ ಇಲಿಯೇ ಬಿದ್ದಿದ್ದರೂ, ಬೇರೆವರ ತಟ್ಟೆಯ ನೊಣದ ಬಗ್ಗೆ ಕಾಮೆಂಟ್ ಮಾಡುವ ಜಾಯಮಾನ ಅವರದ್ದಾಗಿರುತ್ತದೆ.

ಕಛೇರಿಗಳಲ್ಲಿ ಕೆಲವು ಬಾಸ್‌ಗಳು ತಮ್ಮ ಕೈಕೆಳಗಿನ ಸಹೋದ್ಯೋಗಿಗಳು ಹೊಂದಾಣಿಕೆ ಸ್ವಭಾವದಿಂದ ಖುಷಿಯಾಗಿರುವುದನ್ನು ಸಹಿಸುವುದಿಲ್ಲ. ಏನಾದರೂ ಹುಳಿ ಹಿಂಡುವ ಮಾತನಾಡಿ ಇಡೀ ಕಛೇರಿಯ ಸ್ವಸ್ಥ ವಾತಾವರಣವನ್ನೇ ಹಾಳುಗೆಡವಿ ಬಿಡುತ್ತಾರೆ. ದೂರದ ಊರುಗಳಿಗೆ ಪ್ರಯಾಣ ಮಾಡಬೇಕಾದಾಗ ಕಡಿಮೆ ಲಗೇಜು ಇದ್ದಷ್ಟು ಹೆಚ್ಚು ಸಮಾಧಾನವಿರುತ್ತದೆ. ಬಸ್ ಸ್ಟ್ಯಾಂಡ್ ಹಾಗೂ ರೈಲ್ವೆ ನಿಲ್ದಾಣದಲ್ಲಿ ಬಹಳ ಸಮಯ ಕಾಯಬೇಕಾದ ಸಂದರ್ಭದಲ್ಲಿ ಕಡಿಮೆ ಲಗೇಜು ಇದ್ದಷ್ಟು ಕಳ್ಳತನ ಆಗುತ್ತದೆ ಎಂಬ ಭಯ ಇರುವುದಿಲ್ಲ. ಹೆಚ್ಚು ಲಗೇಜುಗಳು ಇದ್ದರೆ ಕಳ್ಳತನ ಆಗಿಬಿಡಬಹುದು ಎಂಬ ಭಯದಿಂದ ಸಮಾಧಾನದಿಂದ ನಿದ್ರೆಯನ್ನೂ ಸಹ ಮಾಡಲಾಗುವುದಿಲ್ಲ. ಅದನ್ನು ಬದುಕಿಗೂ ಅನ್ವಯಿಸಿಕೊಂಡರೆ, ಅಗತ್ಯವಿರುವಷ್ಟು ವಸ್ತುಗಳಿಂದ ಬದುಕನ್ನು ನಡೆಸಿದರೆ ಸಮಾಧಾನ, ತೃಪ್ತಿ, ಶಾಂತಿಯಿಂದ ಬದುಕಬಹುದು.

ಬದುಕಿನ ಜಂಜಾಟದಿಂದ ಬೇಸತ್ತು ಸಮಾಧಾನ ಪಡೆಯಲು ಕೆಲವು ಪ್ರಸಿದ್ಧ ದೇವಸ್ಥಾನಗಳಿಗೆ ತೆರಳಿದರೆ, ಅಲ್ಲಿ ಇರುವ ತುಸು ಸಮಾಧಾನವೂ ಹಾಳಾಗಿಬಿಡುತ್ತದೆ. ಕ್ಷೇತ್ರಕ್ಕೆ ಹೋದ ತಕ್ಷಣ ವಾಹನ ನಿಲುಗಡೆ ಶುಲ್ಕ, ಪಾದರಕ್ಷೆ ಸ್ಟ್ಯಾಂಡ್ ಶುಲ್ಕ, ನಾಲ್ಕಾರು ಗಂಟೆ ಸರತಿ ಸಾಲಿನಲ್ಲಿ ನಿಲ್ಲಬೇಕಾದ ಶಿಕ್ಷೆ, ಅಷ್ಟು ಕಾಲ ನಿಂತು ದೇವರ ಮೂರ್ತಿಯ ಮುಂದೆ ಒಂದು ನಿಮಿಷ ನಿಂತು ಧ್ಯಾನಿಸಲು ಸಾಧ್ಯವೇ? ಎಂದರೆ ಆಗುವುದಿಲ್ಲ. ಅಲ್ಲಿನ ಸಿಬ್ಬಂದಿ ದೂಡುತ್ತಾರೆ. ಪೂಜೆ, ಪ್ರಸಾದ, ವಸತಿ ವ್ಯವಸ್ಥೆ ಎಲ್ಲರದರಲ್ಲೂ ಏಜೆಂಟ್‌ಗಳ ಕಾಟ... ಹೀಗೆ ಅನೇಕ ಗೋಜಲುಗಳಿಂದ ಸಮಾಧಾನ ದೊರೆಯುವುದಾದರೂ ಎಲ್ಲಿಂದ. ಸ್ವರ್ಗ ಸದೃಶ್ಯದಂತೆ ಇರಬೇಕಾದ ಕ್ಷೇತ್ರಗಳಲ್ಲಿ ನರಕ ದರ್ಶನವಾಗುತ್ತಿರುವುದು ವಿಪರ್ಯಾಸ.

ಸಮಾಧಾನ ಹೊರಗೆ ಸಿಗುವ ಸಂಗತಿಯಲ್ಲ, ಅದು ನಮ್ಮೊಳಗೆ ಇದ್ದು, ಅದನ್ನು ಕಂಡುಕೊಳ್ಳಬೇಕಾದುದು ಆಗಬೇಕು. ಆದರೆ ಅಸಮಾಧಾನ ಮಾತ್ರ ಹೊರಗಿನಿಂದ ಬರಲು ಸಾಧ್ಯ. ವಚನಕಾರರಾದ ಬಸವಣ್ಣನವರು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಹೇಳಿರುವ ಹಾಗೆ ಸಮಾಧಾನ ತರುವಂತಹ ಸತ್ಕಾರ್ಯಗಳನ್ನು ಮಾಡಬೇಕೆ ವಿನಃ ಅಸಮಾಧಾನ ತರುವ ದುಷ್ಟ ಕೆಲಸಗಳನ್ನು ಮಾಡಿ, ಅದರಿಂದ ಸಮಾಧಾನ ದೊರಕಲಿ ಎಂದು ಬಯಸುವುದು ಮೂರ್ಖತನ. ಮನಸ್ಸನ್ನು ಕದಡುವ ವಿಚಾರಗಳಿಂದ ದೂರವಿರಬೇಕು. ಜೀವನ ಶೈಲಿ ವಿಚಾರದಲ್ಲಿ ಸ್ಪರ್ಧಾ ಮನೋಭಾವ ಬಿಡಬೇಕು. ನಮ್ಮ ಬದುಕು ನಮ್ಮದು, ಅವರ ಬದುಕು ಅವರದ್ದು ಎಂದು ಭಾವಿಸಿದರೆ ಎಷ್ಟೋ ಸಮಸ್ಯೆಗಳು ಗೋಚರಿಸುವುದೇ ಇಲ್ಲ. ಅನುಕರಣೆ ಬದುಕನ್ನು ಬಯಸಿ, ಅವರಂತೆ ನಾನು ಬದುಕಬೇಕು ಎಂದು ಕಲ್ಪಿಸಿಕೊಳ್ಳುವುದು ತಪ್ಪು. ಎಷ್ಟೋ ಜನರ ಬದುಕು ಹೊರಗೆ ಕಾಣುವ ರೀತಿಯಲ್ಲಿ ಒಳಗೆ ಇರುವುದಿಲ್ಲ. ಸಮಾಧಾನಕ್ಕೆ ಹಣವೇ ಮೂಲ ದ್ರವ್ಯ ಎಂದು ಅನೇಕರು ಭಾವಿಸಿದ್ದಾರೆ. ಹಣದಿಂದ ಅನೇಕ ಸಮಸ್ಯೆಗಳು ಬಗೆಹರಿಯಬಹುದು, ಆದರೆ ಸಮಾಧಾನ ಸಿಗುತ್ತದೆ ಎಂದು ಹೇಳಲಾಗದು. ನಮ್ಮ ಇತಿ–ಮಿತಿ ಅರಿತು ಬದುಕು ನಡೆಸಿದರೆ ಸ್ವರ್ಗಕ್ಕಾಗಿ ಅಪೇಕ್ಷಿಸಬೇಕಿಲ್ಲ. ಭುವಿಯೇ ಸ್ವರ್ಗ ಸದೃಶವಾಗಿ ಬಿಡುತ್ತದೆ.

ಮಾಡುವ ಕೆಲಸವನ್ನು ಇಷ್ಟ ಪಡುವ ಮೂಲಕ ಸಮಾಧಾನ ಪಡೆಯಬಹುದು. ಅನ್ಯರಿಂದ ಕಡಿಮೆ ನಿರೀಕ್ಷೆಗಳನ್ನು ಇರಿಸಿಕೊಂಡಾಗ ಸಮಾಧಾನ ಪಡೆಯಬಹುದು. ಗಳಿಸಿದ್ದರಲ್ಲಿ, ಉಳಿಸಿದ್ದರಲ್ಲಿ ಸ್ವಲ್ಪವನ್ನು ಕಷ್ಟದಲ್ಲಿರುವವರಿಗೆ ನೆರವು ನೀಡಿ ಸಮಾಧಾನ ಪಡೆಯಬಹುದು. ವ್ಯಾಯಾಮ/ವಾಕ್, ಯೋಗ–ಧ್ಯಾನಗಳಿಂದ ಸಮಾಧಾನ ಪಡೆಯಬಹುದು. ನೆಚ್ಚಿನ ನಿಸರ್ಗದ ತಾಣಕ್ಕೆ ಭೇಟಿ ನೀಡಿ ಸಮಾಧಾನ ಹೊಂದಬಹುದು. ಇಷ್ಟವಾದ ಸಂಗೀತ ಆಲಿಸಿ, ಮೆಚ್ಚಿದ ಸಿನೆಮಾ/ನಾಟಕ ವೀಕ್ಷಿಸಿ ಸಮಾಧಾನ ಪಡೆಯಬಹುದು. ಸಮಾನ ಮನಸ್ಕರ ಜೊತೆ ಮನಸ್ಸು ಬಿಚ್ಚಿ ಮಾತನಾಡಿ ಸಮಾಧಾನ ಪಡೆಯಬಹುದು. ಒಬ್ಬರಿಗೆ ಒಳಿತು ಮಾಡುವ ಮೂಲಕ, ಒಳಿತು ಆಶಿಸುವ ಮೂಲಕ ಸಮಾಧಾನ ಪಡೆಯಬಹುದು. ಸಕಾಲಕ್ಕೆ ಊಟ–ತಿಂಡಿ ಮಾಡಿ, ಅಗತ್ಯವಿರುವಷ್ಟು ನಿದ್ರೆ ಮಾಡುವ ಮೂಲಕ ಸಮಾಧಾನ ಪಡೆಯಬಹುದು.

ಹೂರಣ: ನಾವು ಮನಸ್ಸು ಮಾಡಿದರೆ ಯಾರೂ ಅಸಮಾಧಾನ ತರಲು ಸಾಧ್ಯವಿಲ್ಲ.

ಮೇ16 ಅಥವಾ 17ರಿಂದ ಐಪಿಎಲ್ ಪುನರಾರಂಭ

ಫೈನಲ್ ಪಂದ್ಯ ಕೋಲ್ಕತ್ತದಿಂದ ಸ್ಥಳಾಂತರ?

ನವದೆಹಲಿ, ಮೇ.11– ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಸ್ಥಗಿತಗೊಂಡಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಇದೇ 16 ಅಥವಾ 17ರಂದು ಆರಂಭಗೊಳ್ಳುವ ಸಾಧ್ಯತೆಯಿದೆ. ಫೈನಲ್ ಪಂದ್ಯವನ್ನು ಕೋಲ್ಕತ್ತದಿಂದ ಸ್ಥಳಾಂತರಿಸುವ ಸಂಭವವಿದೆ.

ಮೇ 9ರಂದು ಒಂದು ವಾರದ ಮಟ್ಟಿಗೆ ಈ ಪಂದ್ಯಾವಳಿ ಸ್ಥಗಿತಗೊಳಿಸಲಾಗಿತ್ತು. ಆದರೆ ಶನಿವಾರ ಯುದ್ಧ ಸ್ವರೂಪದ ಸಂಘರ್ಷ ಕೊನೆಗೊಳಿಸಲು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಇದರಿಂದ ಲೀಗ್ ಮುಂದುವರಿಯಲು ಅವಕಾಶವಾಗಿದೆ. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅಧಿಕಾರಿಗಳು ಲೀಗ್ ಪುನರಾರಂಭಕ್ಕೆ ಸಂಬಂಧಿಸಿ ಯೋಜನೆ ರೂಪಿಸಲು ಭಾನುವಾರ ಸಭೆ ಸೇರಿದ್ದರು.

ಸೂಕ್ತ ವೇಳಾಪಟ್ಟಿ ರೂಪಿಸಲು ಮಂಡಳಿಯು ಕಾರ್ಯಪ್ರವೃತ್ತವಾಗಿದೆ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ ಶುಕ್ಲಾ ತಿಳಿಸಿದರು. ಐಪಿಎಲ್‌ಗೆ ಸಂಬಂಧಿಸಿ ಇದುವರೆಗೆ ನಿರ್ಧಾರ ಕೈಗೊಂಡಿಲ್ಲ. ಪರಿಹಾರ ಕಂಡುಕೊಳ್ಳಲು ಮಂಡಳಿ ಅಧಿಕಾರಿಗಳು ಯೋಜನೆ ರೂಪಿಸುತ್ತಿದ್ದಾರೆ. ಬಿಸಿಸಿಐ ಕಾರ್ಯದರ್ಶಿ, ಐಪಿಎಲ್ ಅಧ್ಯಕ್ಷರು ಫ್ರಾಂಚೈಸಿಗಳು ಮತ್ತು ಇತರ ಭಾಗೀಕದಾರರ ಜೊತೆ ಮಾತುಕತೆಯಲ್ಲಿ ಇದ್ದಾರೆ. ಶೀಘ್ರವೇ ನಿರ್ಧಾರಕ್ಕೆ ಬರಲಾಗುವುದು. ಸಾಧ್ಯವಾದಷ್ಟು ಬೇಗ ಟೂರ್ನಿ ಆರಂಭಕ್ಕೆ ಪ್ರಯತ್ನ ನಡೆದಿದೆ ಎಂದರು.



ಲಖನೌ ಸೂಪರ್ ಜೈಂಟ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಣ ಪಂದ್ಯದೊಡನೆ ಲೀಗ್ ಪುನರಾರಂಭಗೊಳ್ಳಲಿದೆ ಎಂದು ಐಪಿಎಲ್ ಮೂಲವೊಂದು ತಿಳಿಸಿದೆ. ಈ ಪಂದ್ಯ ಮೇ 9ರಂದು ನಿಗದಿಯಾಗಿತ್ತು.

ಎಲ್ಲ ತಂಡಗಳಿಗೆ ಆಟಗಾರರನ್ನು ಕರೆಸಿಕೊಳ್ಳುವಂತೆ ತಿಳಿಸಲಾಗಿದೆ. ಟೂರ್ನಿಯ ಮೇ 16 ಅಥವಾ 17ರಂದು ಲಖನೌ ಪಂದ್ಯದೊಡನೆ ಮುಂದುವರಿಯಲಿದೆ. ಅಂತಿಮ ವೇಳಾಪಟ್ಟಿ ಸೋಮವಾರ ಹಂಚಿಕೊಳ್ಳಲಾಗುವುದು ಎಂದು ಈ ಮೂಲ ಸುದ್ದಿಸಂಸ್ಥೆಗೆ ತಿಳಿಸಿದೆ.

ಉಳಿದ ಎಲ್ಲ ಪಂದ್ಯಗಳು ನಾಲ್ಕು ಕ್ರೀಡಾಂಗಣಗಳಲ್ಲಿ ನಡೆಯಲಿವೆ. ದೆಹಲಿ ಮತ್ತು ಧರ್ಮಶಾಲಾಕ್ಕೆ ಉಳಿದ ಪಂದ್ಯಗಳ ಆತಿಥ್ಯ ಲಭ್ಯವಾಗುವುದಿಲ್ಲ. ಈ ಕ್ರೀಡಾಂಗಣದಿಂದ ಎಲ್ಲ ಸಲಕರಣೆಗಳನ್ನು ತೆಗೆದುಹಾಕಲಾಗಿದೆ ಎಂದು ತಿಳಿಸಿದೆ.

ಕ್ವಾಲಿಫೈಯರ್ 1 ಮತ್ತು ಎಲಿಮಿನೇಟರ್ ಪಂದ್ಯಗಳ ಸ್ಥಳದಲ್ಲಿ ಬದಲಾವಣೆಯಾಗುವುದಿಲ್ಲ. ಈ ಪಂದ್ಯಗಳು ನಿಗದಿಯಂತೆ ಹೈದರಾಬಾದಿನಲ್ಲೇ ನಡೆಯಲಿವೆ. ಆದರೆ ಫೈನಲ್ ಪಂದ್ಯದ ಆತಿಥ್ಯ ಕೋಲ್ಕತ್ತದ ಬದಲು ಬೇರೆ ಕಡೆ ನಡೆಯುವ ಸಾಧ್ಯತೆಯಿದೆ. ಅಂದು ಕೋಲ್ಕತ್ತದಲ್ಲಿ ಮಳೆಯಾಗುವ ಮುನ್ಸೂಚನೆಯಿದೆ. ಒಂದು ವೇಳೆ ಫೈನಲ್ ಸ್ಥಳ ಬದಲಾದರೆ ಅದು ಅಹಮದಾಬಾದಿನಲ್ಲಿ ನಿಗದಿಯಾಗಲಿದೆ ಎಂದು ಮೂಲ ತಿಳಿಸಿದೆ.

ಉಳಿದ ಪಂದ್ಯಗಳ ಪುನರಾರಂಭಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರಕ್ಕೆ ಬರಲು ಇನ್ನು ಕೆಲ ದಿನಗಳಲ್ಲೇ ಮಂಡಳಿಯು ಫ್ರಾಂಚೈಸಿಗಳು, ಪ್ರಸಾರಕ ಸಂಸ್ಥೆ, ಪ್ರಾಯೋಜಕರು ಮತ್ತು ಆತಿಥ್ಯ ವಹಿಸುವ ರಾಜ್ಯ ಸಂಸ್ಥೆಗಳ ಜೊತೆ ಸಮಾಲೋಚನೆ ಆರಂಭಿಸಲಿದೆ.

ಸರ್ವಪಕ್ಷ ಸಭೆ, ವಿಶೇಷ ಅಧಿವೇಶನ ಕರೆಯಲು ರಾಹುಲ್ ಗಾಂಧಿ ಆಗ್ರಹ

ಅಮೆರಿಕಾ ಮಧ್ಯಸ್ಥಿಕೆಗೆ ಅಸಮಾದಾನ, ಪ್ರಧಾನಿ ಮೋದಿಗೆ ಪತ್ರ

ನವದೆಹಲಿ, ಮೇ 11– ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ್ ಹಾಗೂ ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ಒಪ್ಪಂದ ಉಲ್ಲಂಘನೆ ಸಂಬಂಧ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ಹಾಗೂ ವಿಶೇಷ ಸಂಸತ್ ಅಧಿವೇಶನ ಕರೆಯಬೇಕೆಂದು ಕಾಂಗ್ರೆಸ್ ಆಗ್ರಹಿಸಿದೆ.



ಈ ಸಂಬಂಧ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಅಲ್ಲದೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೊದಲು ಕದನ ವಿರಾಮವನ್ನು ಘೋಷಿಸಿದ್ದಕ್ಕಾಗಿ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯಾವ ಪರಿಸ್ಥಿತಿಯಲ್ಲಿ ಕದನ ವಿರಾಮ ಜಾರಿಗೆ ಬಂದಿದೆ ಎಂದು ಹೇಳಬೇಕು? ನಿನ್ನೆ ಪಾಕಿಸ್ತಾನದಿಂದ ಕದನ ವಿರಾಮ ಉಲ್ಲಂಘನೆ ಏಕೆ ಆಯಿತು? ಮತ್ತೆ ಪಾಕಿಸ್ತಾನ ಹೀಗೆ ಮಾಡುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? ಹೀಗಾಗಿ ವಿಶೇಷ ಅಧಿವೇಶನ ಕರೆದು ಈ ಸಂಬಂಧ ಚರ್ಚಿಸಬೇಕೆಂದು ಒತ್ತಾಯಿಸಿದ್ದಾರೆ.

ಪತ್ರದ ವಿವರ: ಪ್ರಧಾನಿ ಮೋದಿಯವರೇ, ತಕ್ಷಣವೇ ಸಂಸತ್ ವಿಶೇಷ ಅಧಿವೇಶನವನ್ನು ಕರೆಯಬೇಕೆಂಬ ವಿರೋಧ ಪಕ್ಷದ ಸರ್ವಾನುಮತದ ವಿನಂತಿಯನ್ನು ನಾನು ಪುನರುಚ್ಚರಿಸುತ್ತೇನೆ. ಪಹಲ್ಗಾಮ್ ಭಯೋತ್ಪಾದಕ ದಾಳಿ. ಆಪರೇಷನ್ ಸಿಂಧೂರ್ ಮತ್ತು ಕದನ ವಿರಾಮವನ್ನು ಅಮೆರಿಕ ಅಧ್ಯಕ್ಷ ಟ್ರಂಪ್ ಮೊದಲು ಘೋಷಿಸಿದ್ದಾರೆ. ಹೀಗಾಗಿ ಇದು ಮುಂಬರುವ ಸವಾಲುಗಳನ್ನು ಎದುರಿಸಲು ನಮ್ಮ ಸಾಮೂಹಿಕ ಸಂಕಲ್ಪವನ್ನು ಪ್ರದರ್ಶಿಸಲು ಒಂದು ಅವಕಾಶವಾಗಿದೆ. ನೀವು ಈ ಮನವಿಯನ್ನು ಗಂಭೀರವಾಗಿ ಮತ್ತು ತ್ವರಿತವಾಗಿ ಪರಿಗಣಿಸುತ್ತೀರಿ ಎಂದು ನಾನು ಭಾವಿಸಿದ್ದೇನೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.


ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ಹಲವು ಪ್ರಶ್ನೆಗಳನ್ನು ಹಾಕಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ಒಪ್ಪಂದದ ಬಗ್ಗೆ ಚರ್ಚಿಸಲು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ತಟಸ್ಥ ವೇದಿಕೆಗಾಗಿ ಕರೆ ನೀಡಿರುವುದು ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ. ಹಾಗಾದರೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷವನ್ನು ಬಗೆಹರಿಸಲು ಮೂರನೆಯ ವ್ಯಕ್ತಿಗಳಿಗೆ ಮಧ್ಯಸ್ಥಿಕೆಯ ಬಾಗಿಲು ತೆರೆದಿದೆಯೆ? ಆ ಮೂಲಕ ಶಿಮ್ಲಾ ಒಪ್ಪಂದವನ್ನು ಮುರಿಯಲಾಗಿದೆಯೆ? ಭಾರತ ಮತ್ತು ಪಾಕಿಸ್ತಾನದ ನಡುವೆ ರಾಜತಾಂತ್ರಿಕ ಮಾರ್ಗಗಳನ್ನು ತೆರೆಯಲಾಗಿದೆಯೆ? ಯಾವ ಬದ್ಧತೆಯನ್ನು ಬಯಸಿದ್ದೇವು, ಯಾವುದನ್ನು ಪಡೆಯುತ್ತಿದ್ದೇವೆ ಎಂದು ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ



ಭಾರತ–ಪಾಕ್ ಕದನ ವಿರಾಮ ಶ್ಲಾಘಿಸಿದ ಟ್ರಂಪ್:
ಕಾಶ್ಮೀರ ಸಮಸ್ಯೆಗೆ ಮಧ್ಯಸ್ಥಿಕೆ ವಹಿಸುವ ಪ್ರಸ್ತಾಪ



ನ್ಯೂಯಾರ್ಕ್, ಮೇ 11– ಕಳೆದ ಕೆಲ ದಿನಗಳಿಂದ ಸಶಸ್ತ್ರ ಸಂಘರ್ಷ ನಡೆಸುತ್ತಿದ್ದ ಭಾರತ ಹಾಗೂ ಪಾಕಿಸ್ತಾನ ಪರಸ್ಪರ ಕದನ ವಿರಾಮ ಒಪ್ಪಿದ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಉಭಯ ದೇಶಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಆಕ್ರಮಣ ನಿಲ್ಲಿಸಲು ಭಾರತ ಮತ್ತು ಪಾಕಿಸ್ತಾನಗಳು ಒಪ್ಪಂದಕ್ಕೆ ಬಂದಿರುವುದನ್ನು ಟ್ರಂಪ್ ಭಾನುವಾರ ಮತ್ತೊಮ್ಮೆ ಶ್ಲಾಘಿಸಿದ್ದಾರೆ.

ಸಾಮಾಜಿಕ ಮಾಧ್ಯಮ ವೇದಿಕೆ ಟ್ರೂತ್‌ಸೋಶಿಯಲ್‌ನಲ್ಲಿ ಪೋಸ್ಟ್‌ನಲ್ಲಿ ಟ್ರಂಪ್, ಈ ಧೈರ್ಯಶಾಲಿ ಕ್ರಮದಿಂದ ನಿಮ್ಮ ಪರಂಪರೆ ಮತ್ತಷ್ಟು ಉನ್ನತ ಸ್ಥಾನಕ್ಕೇರಿದೆ ಎಂದು ಹೇಳಿದ್ದಾರೆ. ಅಲ್ಲದೆ, ಹಲವು ವರ್ಷಗಳ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಎರಡೂ ದೇಶಗಳೊಂದಿಗೆ ಮಧ್ಯಸ್ಥಿಕೆಗೆ ಅಮೆರಿಕ ಸಿದ್ಧವಿರುವುದಾಗಿ ಟ್ರಂಪ್ ಹೇಳಿದ್ದಾರೆ.

ಭಾರತ ಮತ್ತು ಪಾಕಿಸ್ತಾನದ ಬಲಿಷ್ಠ, ಅಚಲವಾದ ನಾಯಕತ್ವದ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ. ಈಗಿನ ಆಕ್ರಮಣವನ್ನು ನಿಲ್ಲಿಸುವ ಸಮಯ ಬಂದಿದೆ. ಈ ಸಂಘರ್ಷವು ಅನೇಕರ ಸಾವು ಮತ್ತು ವಿನಾಶಕ್ಕೆ ಕಾರಣವಾಗಬಹುದಿತ್ತು. ಲಕ್ಷಾಂತರ ಮುಗ್ಧ ಜನರು ಸಾಯುಬಹುದಿತ್ತು. ಕೆಚ್ಚೆದೆಯ ಕ್ರಮದಿಂದ ನಿಮ್ಮ ಪರಂಪರೆ ಮತ್ತಷ್ಟು ವೃದ್ಧಿಯಾಗಿದೆ. ಈ ಐತಿಹಾಸಿಕ ಮತ್ತು ಸಾಹಸಮಯ ನಿರ್ಧಾರ ಕೈಗೊಳ್ಳುವಲ್ಲಿ ಯುಎಸ್‌ಎ ನಿಮಗೆ ನೆರವಾಗಿದೆ ಎಂಬ ಬಗ್ಗೆ ನನಗೆ ಹೆಮ್ಮೆ ಇದೆ. ಈ ಎರಡೂ ಮಹಾನ್ ರಾಷ್ಟ್ರಗಳೊಂದಿಗೆ ನಾನು ವ್ಯಾಪಾರವನ್ನು ಗಣನೀಯವಾಗಿ ವೃದ್ಧಿಸುತ್ತೇನೆ. ಸಾವಿರಾರು ವರ್ಷಗಳ ಬಳಿಕ ಕಾಶ್ಮೀರ ಸಮಸ್ಯೆಯು ಪರಿಹಾರ ಆಗುವುದಾದರೆ ಅದಕ್ಕೂ ನಾನು ನಿಮ್ಮಿಬ್ಬರೊಂದಿಗೆ ಮಧ್ಯಸ್ಥಿಕೆಗೆ ಸಿದ್ಧನಿದ್ದೇನೆ. ಉತ್ತಮ ನಿರ್ಧಾರಕ್ಕೆ ಬಂದ ಭಾರತ ಮತ್ತು ಪಾಕಿಸ್ತಾನದ ನಾಯಕತ್ವವನ್ನು ದೇವರು ಆಶೀರ್ವದಿಸಲಿ ಎಂದು ಟ್ರಂಪ್ ಟ್ರೂತ್‌ಸೋಶಿಯಲ್‌ನಲ್ಲಿ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಭಾರತ–ಪಾಕ್ ಸಮಸ್ಯೆಗಳನ್ನು ಬಗೆಹರಿಸಲು ಶಾಂತಿಯುತ ಮಾತುಕತೆ ಸೂಕ್ತ
ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್



ಇಸ್ಲಾಮಾಬಾದ್, ಮೇ 11– ಪಾಕಿಸ್ತಾನ ಮತ್ತು ಭಾರತೀಯ ಸೇನೆಗಳ ನಡುವಿನ ನಾಲ್ಕು ದಿನಗಳ ಮುಖಾಮುಖಿಯ ಸಂದರ್ಭದಲ್ಲಿ ಅನುಕರಣೀಯ ಏಕತೆ ಮತ್ತು ಸಮಗ್ರತೆಯನ್ನು ಪ್ರದರ್ಶಿಸಿದ್ದಕ್ಕಾಗಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ತಮ್ಮ ಸಮ್ಮಿಶ್ರ ಪಾಲುದಾರರು ಮತ್ತು ಪ್ರತಿಪಕ್ಷಗಳು ಸೇರಿದಂತೆ ದೇಶದ ರಾಜಕೀಯ ನಾಯಕರಿಗೆ ಧನ್ಯವಾದ ತಿಳಿಸಿದ್ದಾರೆ.

ಶನಿವಾರ ತಡರಾತ್ರಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಷರೀಫ್, ಜಲ ಸಂಪನ್ಮೂಲಗಳ ಹಂಚಿಕೆ ಮತ್ತು ಕಾಶ್ಮೀರ ಸಮಸ್ಯೆ ಸೇರಿದಂತೆ ಭಾರತ ಮತ್ತು ಪಾಕಿಸ್ತಾನದ ನಡುವಿನ ದೀರ್ಘಕಾಲದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಶಾಂತಿಯುತ ಮಾತುಕತೆಯ ಮಾರ್ಗವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಾದೇಶಿಕ ಶಾಂತಿಯ ಹಿತದೃಷ್ಟಿಯಿಂದ ಭಾರತದೊಂದಿಗೆ ಮಾಡಿಕೊಂಡ ಒಪ್ಪಂದಕ್ಕೆ ಪಾಕಿಸ್ತಾನ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದೆ. ಅಂತರರಾಷ್ಟ್ರೀಯ ರಾಜತಾಂತ್ರಿಕ ಪ್ರಯತ್ನಗಳಿಗೆ ಪಾಕಿಸ್ತಾನ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆ ಎಂದು ಷರೀಫ್ ಹೇಳಿದರು.

ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಅಮೆರಿಕ, ಯುಕೆ, ಟರ್ಕಿ, ಸೌದಿ ಅರೇಬಿಯಾ, ಕತಾರ್, ಯುಎಇ ಮತ್ತು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ನಾಯಕತ್ವ ಸೇರಿದಂತೆ ಎಲ್ಲಾ ಸ್ನೇಹಪರ ರಾಷ್ಟ್ರಗಳಿಗೆ ಕೃತಜ್ಞತೆ ಸಲ್ಲಿಸಿದರು.

ಪಾಕಿಸ್ತಾನದ ವಿಶ್ವಾಸಾರ್ಹ ಸ್ನೇಹಿತ ಚೀನಾ ಈ ಪ್ರಕ್ಷುಬ್ಧ ಸಮಯದಲ್ಲಿ ಪಾಕಿಸ್ತಾನದೊಂದಿಗೆ ನಿಂತಿದೆ. ಭಾರತದೊಂದಿಗಿನ ಕದನ ವಿರಾಮ ಒಪ್ಪಂದವು ಇಡೀ ರಾಷ್ಟ್ರ ಮತ್ತು ಪಾಕಿಸ್ತಾನದ ಸಶಸ್ತ್ರ ಪಡೆಗಳ ಯಶಸ್ಸು ಎಂದು ಬಣ್ಣಿಸಿದರು.

'ಆಪರೇಷನ್ ಸಿಂಧೂರ್'ನಿಂದ ಮೂರೂ ಗುರಿ ಈಡೇರಿಕೆ

ನವದೆಹಲಿ, ಮೇ 11– 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ, ಹಾಗೂ ನಂತರದ ಸಂಘರ್ಷದಲ್ಲಿ ಭಾರತಕ್ಕೆ ಎಲ್ಲಾ ಮೂರು ಉದ್ದೇಶಗಳು ನೆರವೇರಿವೆ ಎಂದು ಸರ್ಕಾರ ಹೇಳಿದೆ. ಮಿಲಿಟರಿ ಗುರಿ, ರಾಜಕೀಯ ಗುರಿ ಮತ್ತು ಮಾನಸಿಕ ಗುರಿಗಳನ್ನು ಮುಟ್ಟಿದೆ ಎಂದು ಸರ್ಕಾರ ಹೇಳಿಕೊಂಡಿದೆ. 'ಆಪರೇಷನ್ ಸಿಂಧೂರ್' ಬಳಿಕ ಪಾಕಿಸ್ತಾನ ನಡೆಸಿದ ಪ್ರತಿದಾಳಿ ಹಾಗೂ ನಂತರದ ಸಂಘರ್ಷದಲ್ಲಿ ಭಾರತ ಸ್ಪಷ್ಟ ಮೇಲುಗೈ ಪಡೆದು, ಪಾಕಿಸ್ತಾನವು ಕದನ ವಿರಾಮಕ್ಕಾಗಿ ಅಮೆರಿಕದ ನೆರವು ಯಾಚಿಸಬೇಕಾದ ಸ್ಥಿತಿ ಬಂದಿತು ಎನ್ನಲಾಗಿದೆ.

ಭಾರತಕ್ಕೆ ಈಡೇರಿದ ಮೂರು ಉದ್ದೇಶಗಳು

ಮಿಲಿಟರಿ ಗುರಿ: ಪ್ರಧಾನಿ ನರೇಂದ್ರ ಮೋದಿ ಅವರು 'ಉಗ್ರರ ನೆಲೆಗಳನ್ನು ನೆಲಸಮ ಮಾಡುತ್ತೇವೆ' ಎಂದಿದ್ದರು. ಅದರಂತೆ, ಬಹಾವಲಪುರ್, ಮುರಿಡ್ಕೆ ಮತ್ತು ಮುಜಾಫರಾಬಾದ್‌ನಲ್ಲಿರುವ ಉಗ್ರರ ಶಿಬಿರಗಳನ್ನು ನೆಲಸಮ ಮಾಡಲಾಗಿದೆ.

ರಾಜಕೀಯ ಗುರಿ: ಸಿಂಧೂ ಜಲ ಒಪ್ಪಂದವನ್ನು ಭಾರತ ಹಿಂಪಡೆದಿದೆ. ಇದರಿಂದ ಪಾಕಿಸ್ತಾನಕ್ಕೆ ಭಾರತವು ಸಿಂಧೂ ನದಿ ನೀರು ಬಿಡುಗಡೆ ತಡೆದಿದೆ. ಪಾಕಿಸ್ತಾನವು ಭಾರತದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವವರೆಗೂ ಇದು ಹೀಗೇ ಮುಂದುವರಿಯಲಿದೆ.


ಮಾನಸಿಕ ಗುರಿ: ಅವರ ಹೃದಯ ಭಾಗಕ್ಕೆ ನುಗ್ಗಿ ಹೊಡೆಯುತ್ತೇವೆ ಎಂದು ಪ್ರಧಾನಿಗಳು ಹೇಳಿದ್ದರು. ಅದರಂತೆ, ನುಗ್ಗಿ ಹೊಡೆಯಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ.

ಪುಲ್ವಾಮ ಉಗ್ರ ದಾಳಿಗೆ ಪ್ರತಿಯಾಗಿ ಭಾರತವು ಏರ್‌ಸ್ಟ್ರೈಕ್ ನಡೆಸಿತ್ತು. ಆಗ ಬಾಲಾಕೋಟ್‌ನಲ್ಲಿರುವ ಜೇಷೆ ಉಗ್ರ ಶಿಬಿರವನ್ನು ಮಾತ್ರ ಗುರಿ ಮಾಡಲಾಗಿತ್ತು. ಈಗ ಪಹಲ್ಗಾಮ್ ದಾಳಿಯಲ್ಲಿ 26 ಮಂದಿ ಅಮಾಯಕರನ್ನು ಉಗ್ರರು ಬಲಿಪಡೆದಿದ್ದರು. ಅದಕ್ಕೆ ಪ್ರತಿಯಾಗಿ 'ಆಪರೇಷನ್ ಸಿಂಧೂರ್' ನಡೆಸಿತು. ಪಾಕಿಸ್ತಾನದ 9 ಸ್ಥಳಗಳಲ್ಲಿರುವ ಉಗ್ರರ ಶಿಬಿರಗಳನ್ನು 24 ಕ್ಷಿಪಣಿಗಳು ಧ್ವಂಸ ಮಾಡಿದವು. ಭಯೋತ್ಪಾದಕರ ಅಡುದಾಣ, ತರಬೇತಿ ಸ್ಥಳಗಳು ಇದರಲ್ಲಿ ಒಳಗೊಂಡಿದ್ದುವು.

ಹೊಡೆದರೆ ಸರಿಯಾಗಿ ಹೊಡೆಯುತ್ತೇವೆ ಎಂಬುದು ಪಾಕಿಸ್ತಾನಕ್ಕೆ ಗೊತ್ತಾಗಿದೆ: ಬಹವಾಲಪುರ್ ಮತ್ತು ಮುರಿಡ್ಕೆಯಲ್ಲಿರುವ ಉಗ್ರರ ಶಿಬಿರಗಳು ಐಎಸ್‌ಐ ಜೊತೆ ನಿಕಟವಾಗಿವೆ. ಅವರನ್ನು ನೆಲಕ್ಕುರುಳಿಸುವ ಮೂಲಕ ನಾವು ಸಣ್ಣ ಕ್ಯಾಂಪಲ್ಲ, ಹೊಡೆದರೆ ಹೆಡ್‌ಕ್ವಾರ್ಟರ್ಸ್ ಅನ್ನೇ ಹೊಡೆಯುತ್ತೇವೆ ಎಂಬುದನ್ನು ತೋರಿಸಿದ್ದೇವೆ ಎಂದು ಸರ್ಕಾರದ ಮೂಲಗಳು ಹೇಳಿದ್ದು, ಆಪರೇಷನ್ ಸಿಂದೂರ ಇನ್ನೂ ಮುಗಿದಿಲ್ಲ. ಅವರು ದಾಳಿ ಮಾಡಿದರೆ ನಾವೂ ದಾಳಿ ಮಾಡುತ್ತೇವೆ ಎನ್ನುವ ಗಟ್ಟಿ ನಿಲುವನ್ನು ಸರ್ಕಾರ ತೆಗೆದುಕೊಂಡಿದೆ ಎಂದಿವೆ.

ಪಾಕಿಸ್ತಾನದ ನೂರ್ ಖಾನ್ ವಾಯುನೆಲೆಗೆ ಹಾನಿ





ನವದೆಹಲಿ: ಚೀನಾದ ಉಪಗ್ರಹ ಸಂಸ್ಥೆ ಬಿಡುಗಡೆ ಮಾಡಿರುವ ಉಪಗ್ರಹ ಚಿತ್ರಣದಲ್ಲಿ ಭಾರತೀಯ ಸಶಸ್ತ್ರ ಪಡೆಗಳ ದಾಳಿಯ ನಂತರ ಪಾಕಿಸ್ತಾನದ ನೂರ್ ಖಾನ್ ವಾಯುನೆಲೆಯಲ್ಲಿ ಹಾನಿಯಾಗಿರುವುದನ್ನು ತೋರಿಸಿದೆ.

ಭಾರತೀಯ ಸಶಸ್ತ್ರ ಪಡೆಗಳು ರಫೀಕಿ, ಮುರಿದ್, ನೂರ್ ಖಾನ್, ಪಂಜಾಬ್‌ನ ಚುನಿಯನ್ ಮತ್ತು ಸುಕ್ಕೂರ್‌ನಲ್ಲಿರುವ ಪಾಕಿಸ್ತಾನದ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿವೆ.

ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪಾಕಿಸ್ತಾನ ಸೇನೆಯ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್, ರಾವಲ್ಪಿಂಡಿಯ ನೂರ್ ಖಾನ್ ವಾಯು ನೆಲೆ, ಚಕ್ವಾಲ್‌ನ ಮುರಿದ್ ನೆಲೆ ಮತ್ತು ಪಂಜಾಬ್ ಪ್ರಾಂತ್ಯದ ಜಾಂಗ್ ಜಿಲ್ಲೆಯ ರಫೀಕಿ ವಾಯು ನೆಲೆಯ ಮೇಲೆ ಭಾರತ ಕ್ಷಿಪಣಿ ದಾಳಿ ನಡೆಸಿದೆ ಎಂದು ಹೇಳಿದ್ದಾರೆ.

ನೂರ್ ಖಾನ್ ವಾಯುನೆಲೆ ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಿಂದ ಸುಮಾರು 10 ಕಿ.ಮೀ ದೂರದಲ್ಲಿರುವ ರಾವಲ್ಪಿಂಡಿಯ ಚಕ್ಲಾಲಾದಲ್ಲಿದೆ. ಇದು ಪಾಕಿಸ್ತಾನದ ವಾಯುನೆಲೆಗಳಲ್ಲಿ ಅತ್ಯಂತ ಪ್ರಮುಖವಾಗಿದೆ ಮತ್ತು ಪಾಕಿಸ್ತಾನದ ಪ್ರಮುಖ ವಿಮಾನ ಸಂಚಾರದ ನೆಲೆಯಾಗಿದೆ ಮತ್ತು ಇದನ್ನು ಲಾಜಿಸ್ಟಿಕಲ್ ಮತ್ತು ಕಾರ್ಯತಂತ್ರದ ಏರ್‌ಲಿಫ್ಟ್ ಕಾರ್ಯಾಚರಣೆಗಳಿಗೆ ಬಳಸಲಾಗುತ್ತದೆ.

C-130 ಹರ್ಕ್ಯುಲಸ್ ಮತ್ತು ಸಾಬ್ 2000 ರಂತಹ ಸಾರಿಗೆ ವಿಮಾನಗಳು, ಮತ್ತು VIP ಕರೆದೊಯ್ಯುವ ವಿಮಾನದ ಜೊತೆಗೆ ಹಾರಾಟದ ಮಧ್ಯ ಇಂಧನ ತುಂಬಿಸುವ IL-78 ವಿಮಾನವೂ ಇದೆ.

ಪಾಕ್‌ನ 700 ಡ್ರೋನ್, ಕೆಲವು ಜೆಟ್‌ಗಳು ಧ್ವಂಸ: ಭಾರತದ ಎಲ್ಲಾ ಪೈಲಟ್ ಸುರಕ್ಷಿತ, ಯಾವುದೇ ಹಾನಿಯಾಗಿಲ್ಲ



ನವದೆಹಲಿ, ಮೇ 11– ಮೂರು ದಿನಗಳಿಂದ ನಡೆದ ಭಾರತ– ಪಾಕಿಸ್ತಾನ ನಡುವಿನ ಸೇನಾ ಸಂಘರ್ಷದಲ್ಲಿ ಪಾಕಿಸ್ತಾನದ ಶೆಲ್, ಡ್ರೋನ್ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ ಎಂದು ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ಭಾನುವಾರ ದೃಢಪಡಿಸಿದರು.

ಡಿಜಿಎಂಒ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 7 ರಂದು ಪಾಕಿಸ್ತಾನಿ ಸೇನೆ ನಡೆಸಿದ ಶೆಲ್ ದಾಳಿಯಿಂದ ನಮ್ಮ ನೆಲದಲ್ಲಿ ಯಾವುದೇ ಹಾನಿಯಾಗದಂತೆ ಭಾರತದ ವಾಯು ರಕ್ಷಣಾ ವ್ಯವಸ್ಥೆ ಸನ್ನದ್ಧವಾಗಿತ್ತು. ಮೇ 8 ಮತ್ತು 9 ರಂದು ರಾತ್ರಿ 10–30 ಗಂಟೆಗೂ ಮುನ್ನಾ ಭಾರತದ ಹಲವಾರು ನಗರಗಳಲ್ಲಿ ಡ್ರೋನ್‌ಗಳು, ಮಾನವ ರಹಿತ ವೈಮಾನಿಕ ವಿಮಾನಗಳು ಮತ್ತು ಮಾನವರಹಿತ ಯುದ್ಧ ವೈಮಾನಿಕ ವಾಹನ ಮೂಲಕ ದಾಳಿಗೆ ಯತ್ನಿಸಲಾಗಿತ್ತು. ಮೇ 7 ರಂದು ಫಿರಂಗಿಗಳನ್ನು ನಿಯೋಜಿಸಿದ್ದ ಪಾಕಿಸ್ತಾನ ಮರುದಿನ ಅವುಗಳ ಸಂಖ್ಯೆಯನ್ನು ಕಡಿಮೆ ಮಾಡಿತ್ತು. ನಾಗರಿಕರಿಗೆ ಕಿರುಕುಳ ನೀಡಲು ಹೆಚ್ಚಿನ ಹೆಲಿಕಾಪ್ಟರ್‌ಗಳನ್ನು ಕಳುಹಿಸಿತ್ತು ಎಂದು ತಿಳಿಸಿದರು.

700 ಡ್ರೋನ್ ಗಳ ಧ್ವಂಸ: ವಾಯುನೆಲೆ, ನಾಗರಿಕರನ್ನು ಗುರಿಯಾಗಿಸಿ ನಿರಂತರ ದಾಳಿಯ ನಂತರ ಪಾಕ್ ಅನ್ನು ಭಾರತ ಹಿಮ್ಮೆಟ್ಟಿಸಿತು. ಮೇ 8 ರ ಸಂಜೆ ಪಾಕಿಸ್ತಾನ ಭಾರತೀಯ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ಯುದ್ಧ ವಿಮಾನಗಳು ಮತ್ತು ಅನೇಕ ಡ್ರೋನ್ ದಾಳಿ ನಡೆಸಿತು. ಆದರೆ ಪೆಚೋರಾ, ಗರುಡಾ ಸ್ಪೈಪರ್ಸ್ ಮತ್ತು IAF ಸಮರ್‌ನಂತಹ ಭಾರತದ ವಾಯು ರಕ್ಷಣಾ ವ್ಯವಸ್ಥೆಗಳಿಂದ 700 ಡ್ರೋನ್‌ಗಳನ್ನು ಹೊಡೆದುರುಳಿಸಲಾಯಿತು ಎಂದು ತಿಳಿಸಿದರು.

ಶತ್ರು ರಾಷ್ಟ್ರದ ರಕ್ಷಣಾ ವ್ಯವಸ್ಥೆ ಗುರಿಯಾಗಿಸುವ ಸಾಮರ್ಥ್ಯ: ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್, ಶತ್ರುರಾಷ್ಟ್ರದ ಯಾವುದೇ ರಕ್ಷಣಾ ವ್ಯವಸ್ಥೆಯನ್ನು ಗುರಿಯಾಗಿಸುವ ಸಾಮರ್ಥ್ಯವನ್ನು ಭಾರತ ಹೊಂದಿದೆ ಆದರೆ ಸಂಯಮದಿಂದ ಕಾರ್ಯನಿರ್ವಹಿಸುತ್ತದೆ ಎಂದು ಪುನರುಚ್ಚರಿಸಿದರು.

ಕೆಲವು ಪಾಕ್ ವಿಮಾನಗಳ ಧ್ವಂಸ: ಶತ್ರು ವಿಮಾನಗಳು ಭಾರತೀಯ ವಾಯು ಪ್ರದೇಶಕ್ಕೆ ಬಾರದಂತೆ ಹೊಡೆದುರುಳಿಸಲಾಗಿದೆ. ಆದರೆ, ಎಷ್ಟು ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂಬುದರ ಬಗ್ಗೆ ನಿಖರವಾದ ಸಂಖ್ಯೆ ಗೊತ್ತಿಲ್ಲ ಈ ಸಂಬಂಧ ತಾಂತ್ರಿಕ ವಿವರಗಳನ್ನು ಪಡೆಯುತ್ತಿದ್ದೇವೆ ಎಂದು ಏರ್ ಮಾರ್ಷಲ್ ತಿಳಿಸಿದರು.

ಭಾರತದ ಎಲ್ಲಾ ಪೈಲಟ್‌ಗಳು ಸುರಕ್ಷಿತ: 'ಆಪರೇಷನ್ ಸಿಂಧೂರ್'ನಲ್ಲಿ ತೊಡಗಿದ್ದ ಭಾರತದ ಎಲ್ಲಾ ಪೈಲಟ್‌ಗಳು ಸುರಕ್ಷಿತವಾಗಿ ಮರಳಿದ್ದಾರೆ ಎಂದು ರಾಜೀವ್ ಘಾಯ್ ತಿಳಿಸಿದರು. ಕಾರ್ಯಾಚರಣೆ ವೇಳೆ ಭಾರತಕ್ಕೆ ಆದ ನಷ್ಟ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಯುದ್ಧದ ಸನ್ನಿವೇಶದಲ್ಲಿ ನಷ್ಟ ಅನಿವಾರ್ಯ ಎಂಬುದನ್ನು ಒಪ್ಪಿಕೊಂಡರು. ಯುದ್ಧದ ಸಂದರ್ಭದಲ್ಲಿ ನಷ್ಟಗಳು ಯುದ್ಧದ ಒಂದು ಭಾಗವಾಗಿರುತ್ತದೆ. ಇನ್ನೂ ಕಾರ್ಯಾಚರಣೆಯ ಸನ್ನಿವೇಶದಲ್ಲಿರುವುದರಿಂದ ಎಷ್ಟು ನಷ್ಟವಾಗಿದೆ ಎಂಬುದನ್ನು ಬಹಿರಂಗಪಡಿಸಲು ಇಷ್ಟಪಡುವುದಿಲ್ಲ. ನಮ್ಮ ಶತ್ರುಗಳಿಗೆ ಮಾಹಿತಿ ನೀಡಲು ಬಯಸುವುದಿಲ್ಲ ಎಂದರು.

ಕಾಶ್ಮೀರದಿಂದ ಸುರಕ್ಷಿತವಾಗಿ ನವದೆಹಲಿಗೆ ತಲುಪಿದ ಕರ್ನಾಟಕದ ವಿದ್ಯಾರ್ಥಿಗಳು



ಬೆಂಗಳೂರು, ಮೇ 11– ಶ್ರೀನಗರದ ಶೇರ್–ಇ–ಕಾಶ್ಮೀರ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ಕರ್ನಾಟಕದ ಹದಿಮೂರು ವಿದ್ಯಾರ್ಥಿಗಳು ಭಾರತ ಸರ್ಕಾರದ ಸಂಘಟಿತ ಪ್ರಯತ್ನಗಳಿಂದಾಗಿ ನವದೆಹಲಿಗೆ ಸುರಕ್ಷಿತವಾಗಿ ಮರಳಿದ್ದಾರೆ.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನಿರ್ದೇಶನದ ಮೇರೆಗೆ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಪಾಕಿಸ್ತಾನದ ದಾಳಿ ನಡುವೆ ಉದ್ರಿಕ್ತ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದ ವಿದ್ಯಾರ್ಥಿಗಳನ್ನು ಜಮ್ಮುವಿನಿಂದ ರಾಜ್ಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವಲ್ಲಿ ಯಶಸ್ವಿಯಾಗಿದ್ದಾರೆ.

ಕಣಿವೆ ರಾಜ್ಯದಲ್ಲಿನ ಎಲ್ಲರ ಜೀವ ರಕ್ಷಣೆ ಮಾಡುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆಯಂತೆ ವಿದ್ಯಾರ್ಥಿಗಳ ತೆರವಿಗೆ ಸರ್ವ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಈ ಕಾರ್ಯಾಚರಣೆಗೆ ನೆರವಾದ ಎಲ್ಲವರಿಗೂ ಧನ್ಯವಾದ ಸಲ್ಲಿಸುತ್ತೇನೆ. ರಾಜ್ಯದ ಎಲ್ಲಾ ವಿದ್ಯಾರ್ಥಿಗಳು ಈಗಾಗಲೇ ನವದೆಹಲಿ ತಲುಪಿದ್ದು, ಅವರನ್ನು ಸುರಕ್ಷಿತವಾಗಿ ಬೆಂಗಳೂರಿಗೆ ಕಳಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಚನ್ನಪಟ್ಟಣ ತಾಲ್ಲೂಕಿನ ತಗಚಗೆರೆ ಗ್ರಾಮದ ವಿದ್ಯಾರ್ಥಿ ಹರ್ಷಿತ್ ಅವರ ಪೋಷಕರು ಜಮ್ಮುವಿನಲ್ಲಿ ಸಿಲುಕಿರುವ ತಮ್ಮ ಪುತ್ರನನ್ನು ರಕ್ಷಣೆ ಮಾಡಬೇಕು ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದರು. ಕೂಡಲೇ ಈ ವಿಷಯವನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಗಮನಕ್ಕೆ ತಂದು ವಿದ್ಯಾರ್ಥಿಗಳ ಸುರಕ್ಷಿತ ಸ್ಥಳಾಂತರಕ್ಕೆ ಮನವಿ ಮಾಡಿದ್ದರು.

ಶನಿವಾರ ಶ್ರೀನಗರದಿಂದ ಭದ್ರತೆಯ ನಡುವೆ ಬಸ್‌ನಲ್ಲಿ ಜಮ್ಮುವಿಗೆ ಪ್ರಯಾಣಿಸಿದ್ದ ವಿದ್ಯಾರ್ಥಿಗಳು ಭಾನುವಾರ ಮಧ್ಯಾಹ್ನದ ಹೊತ್ತಿಗೆ ರೈಲಿನಲ್ಲಿ ದೆಹಲಿ ತಲುಪಿದರು.

ವಿದ್ಯಾರ್ಥಿಗಳು ನವದೆಹಲಿಗೆ ತಲುಪಿದ ನಂತರ ಅವರ ಉಸ್ತುವಾರಿಯನ್ನು ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವಾಲಯದ ಅಧಿಕಾರಿಗಳೇ ಸಂಪೂರ್ಣವಾಗಿ ನೋಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಸುರಕ್ಷಿತವಾಗಿ ಅವರ ಮನೆಗಳನ್ನು ತಲುಪುವವರೆಗೂ ನಾವು ಎಚ್ಚರಿಕೆ ವಹಿಸುತ್ತೇವೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.




ಪಾಕ್ ಉಗ್ರ ಚಟುವಟಿಕೆಗಳು ಬಹಿರಂಗ
ಹೊಸ ಪುರಾವೆಗಳೊಂದಿಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಕದ ತಟ್ಟಿದ ಭಾರತ

ನವದೆಹಲಿ, ಮೇ 11– ಏಪ್ರಿಲ್ 22ರ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತೊಯ್ಬಾದ ಅಂಗ ಸಂಸ್ಥೆ ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಪಾತ್ರದ ಬಗ್ಗೆಯೂ ಈ ಪುರಾವೆಗಳು ಗಮನಹರಿಸುತ್ತವೆ. ಪಾಕಿಸ್ತಾನ ಭಯೋತ್ಪಾದನೆಯಲ್ಲಿ ಭಾಗಿಯಾಗಿರುವ ಇತ್ತೀಚಿನ ಪುರಾವೆಗಳೊಂದಿಗೆ ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ (UNSC) ತಂಡವನ್ನು ಕಳುಹಿಸಲಿದೆ.

ಮೂಲಗಳ ಪ್ರಕಾರ, UNSCR 1267 ನಿರ್ಬಂಧಗಳ ಸಮಿತಿಯು ಮುಂದಿನ ವಾರ ಸಭೆ ಸೇರಲಿದೆ. ಏತನ್ಮಧ್ಯೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಶನಿವಾರದ ಕದನ ವಿರಾಮವನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಸ್ವಾಗತಿಸಿದ್ದಾರೆ. ನಾವು ನಿಕಟವಾಗಿ ನಿಗಾ ಇಡುತ್ತಿದ್ದೇವೆ, ಸಂಘರ್ಷವನ್ನು ಶಮನಗೊಳಿಸಲು ಎಲ್ಲಾ ಪ್ರಯತ್ನಗಳನ್ನು ನಾವು ಸ್ವಾಗತಿಸುತ್ತೇವೆ ಎಂದು ಮಹಾಕಾರ್ಯದರ್ಶಿಯ ಉಪ ವಕ್ತಾರ ಫರ್ಹಾನ್ ಹಕ್ ಹೇಳಿದರು.

ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಜಾರಿಗೆ ಬಂದ ನಂತರ, ಗಡಿಯಲ್ಲಿ ಪರಿಸ್ಥಿತಿ ಸಾಮಾನ್ಯವಾಗಿದೆ ಎಂದು ತೋರುತ್ತದೆ. ಪಾಕಿಸ್ತಾನ ಯಾವುದೇ ಕ್ರಮ ಕೈಗೊಂಡರೆ, ಅದರದೇ ಭಾಷೆಯಲ್ಲಿ ಪೂರ್ಣ ಬಲದಿಂದ ಪ್ರತಿಕ್ರಿಯಿಸಬೇಕು ಎಂದು ಭಾರತೀಯ ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಸೇನಾ ಕಮಾಂಡರ್‌ಗಳಿಗೆ ಮುಕ್ತ ಹಸ್ತ ನೀಡಿದ್ದಾರೆ. ಜನರಲ್ ಉಪೇಂದ್ರ ದ್ವಿವೇದಿ ಅವರು ಪಶ್ಚಿಮ ಗಡಿಯ ಸೇನಾ ಕಮಾಂಡರ್‌ಗಳೊಂದಿಗೆ ಭದ್ರತೆಯನ್ನು ಪರಿಶೀಲಿಸಿದ್ದಾರೆ. ಈ ಅವಧಿಯಲ್ಲಿ ಅವರು ಸೇನಾ ಕಮಾಂಡರ್‌ಗಳಿಗೆ ಮುಕ್ತ ಅಧಿಕಾರ ನೀಡಿದ್ದಾರೆ.

ಭಾರತೀಯ ಸೇನೆ ಪಾಕ್‌ಗೆ ತಕ್ಕ ಉತ್ತರ ನೀಡಿದೆ: ರಾಜನಾಥಸಿಂಗ್



ನವದೆಹಲಿ, ಮೇ 11– ಭಾರತೀಯ ಸೇನೆಯು ಧೈರ್ಯ ಮತ್ತು ಸಂಯಮವನ್ನು ಪ್ರದರ್ಶಿಸಿದೆ. ಪಾಕಿಸ್ತಾನದ ಅನೇಕ ಸೇನಾ ನೆಲೆಗಳ ಮೇಲೆ ದಾಳಿ ಮಾಡುವ ಮೂಲಕ ತಕ್ಕ ಉತ್ತರ ನೀಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದ್ದಾರೆ.

ಬ್ರಹ್ಮೋಸ್ ಉತ್ಪಾದನಾ ಘಟಕವನ್ನು ಉದ್ಘಾಟಿಸಲು ಲಕ್ನೋದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ವರ್ಚುವಲ್ ಆಗಿ ಮಾತನಾಡಿದ ಅವರು, 'ಆಪರೇಷನ್ ಸಿಂಧೂರ್' ಕೇವಲ ಮಿಲಿಟರಿ ಕ್ರಮವಲ್ಲ. ಆದರೆ, ಭಯೋತ್ಪಾದನೆ ವಿರುದ್ಧ ಹೋರಾಡಲು ಭಾರತದ ರಾಜಕೀಯ, ಸಾಮಾಜಿಕ ಮತ್ತು ಕಾರ್ಯತಂತ್ರದ ಇಚ್ಛಾಶಕ್ತಿಯ ಸಂಕೇತವಾಗಿದೆ ಎಂದು ಹೇಳಿದರು.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ 9 ಭಯೋತ್ಪಾದಕ ನೆಲೆಗಳನ್ನು ನಾಶಮಾಡಲು ಮೇ 7ರಂದು ಆಪರೇಷನ್ ಸಿಂಧೂರವನ್ನು ಪ್ರಾರಂಭಿಸಲಾಯಿತು.

ಪಾಕಿಸ್ತಾನದ ಆಕ್ರಮಣಗಳಿಗೆ ನಂತರದ ಎಲ್ಲ ಪ್ರತೀಕಾರ ಕ್ರಮಗಳನ್ನು ಆಪರೇಷನ್ ಸಿಂಧೂರ್ ಅಡಿಯಲ್ಲಿ ನಡೆಸಲಾಯಿತು. ಭಾರತ ಮತ್ತು ಪಾಕಿಸ್ತಾನ ಶನಿವಾರ ತಕ್ಷಣದಿಂದ ಜಾರಿಗೆ ಬರುವಂತೆ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡಿವೆ.

ಆಪರೇಷನ್ ಸಿಂಧೂರ್ ಮೂಲಕ, ಭಾರತೀಯ ಸೇನೆಯು ಅನೇಕ ಕುಟುಂಬಗಳ ಸಿಂಧೂರವನ್ನು ಅಳಿಸಿಹಾಕಿದ ಭಯೋತ್ಪಾದಕರನ್ನು ಶಿಕ್ಷಿಸಿತು. ಗಡಿಯ ಎರಡೂ ಬದಿಗಳಲ್ಲಿ ಭಯೋತ್ಪಾದನೆ ವಿರುದ್ಧ ನವ ಭಾರತ ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಸ್ಪಷ್ಟಪಡಿಸಿದ್ದಾರೆ ಎಂದು ಸಿಂಗ್ ಹೇಳಿದರು.

ಭಾರತೀಯ ಸೇನೆಯು ಪಾಕಿಸ್ತಾನದ ನಾಗರಿಕರನ್ನು ಎಂದಿಗೂ ಗುರಿಯಾಗಿಸಿ ಕೊಂಡಿಲ್ಲ. ಆದರೆ, ಆ ದೇಶವು ಭಾರತದ ವಸತಿ ಪ್ರದೇಶಗಳು ಮತ್ತು ಪೂಜಾ ಸ್ಥಳಗಳನ್ನು ಗುರಿಯಾಗಿಸಿಕೊಂಡಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತವು ಪಾಕಿಸ್ತಾನಕ್ಕೆ ಪ್ರವೇಶಿಸಿ ಹಲವಾರು ದಾಳಿಗಳನ್ನು ನಡೆಸಿತು ಎಂಬುದನ್ನು ಜಗತ್ತು ನೋಡಿದೆ ಎಂದು ಅವರು ಹೇಳಿದರು.

ನಾವು ಗಡಿ ಸಮೀಪವಿರುವ ಮಿಲಿಟರಿ ನೆಲೆಗಳ ವಿರುದ್ಧ ಕ್ರಮ ಕೈಗೊಂಡಿದ್ದಲ್ಲದೆ, ಪಾಕಿಸ್ತಾನ ಸೇನೆಯ ಪ್ರಧಾನ ಕಚೇರಿ ಇರುವ ರಾವಲ್ಪಿಂಡಿಯಲ್ಲಿಯೂ ಸಹ ಭಾರತೀಯ ಪಡೆಗಳ ಶಕ್ತಿ ಏನೆಂಬುದನ್ನು ತೋರಿಸಲಾಗಿದೆ ಎಂದು ಅವರು ಹೇಳಿದರು.



ಕದನ ವಿರಾಮ ಒಪ್ಪಂದ: ಭಾರತ–ಪಾಕ್ ನಡೆ ಸ್ವಾಗತಿಸಿದ ಪೋಪ್ ರಾಬರ್ಟ್ ಫ್ರಾನ್ಸಿಸ್ ಪ್ರಿವೋಸ್ಟ್



ವ್ಯಾಟಿಕನ್ ಸಿಟಿ, ಮೇ 11– ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ಒಪ್ಪಂದವನ್ನು ರೋಮನ್ ಕ್ಯಾಥೋಲಿಕ್ ಚರ್ಚ್‌ನ ನೂತನ ಪೋಪ್ ರಾಬರ್ಟ್ ಫ್ರಾನ್ಸಿಸ್ ಪ್ರಿವೋಸ್ಟ್ (ಲಿಯೊ 14) ಸ್ವಾಗತಿಸಿದ್ದಾರೆ. ಭಾರತ–ಪಾಕಿಸ್ತಾನ ಬಿಕ್ಕಟ್ಟು ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದ್ವಿಪಕ್ಷೀಯ ಮಾತುಕತೆಗಳು ಶಾಶ್ವತವಾಗಿ ಶಾಂತಿ ನೆಲೆಸಲು ಕಾರಣವಾಗುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಲ್ಲಿ 26 ಪ್ರವಾಸಿಗರು ಮೃತಪಟ್ಟಿದ್ದರು. ಇದರ ಬೆನ್ನಲ್ಲೇ ಭಾರತದ ಸಶಸ್ತ್ರ ಪಡೆಗಳು 'ಆಪರೇಷನ್ ಸಿಂಧೂರ'ದ ಮೂಲಕ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ ಗಡಿಯಲ್ಲಿ ಎರಡೂ ದೇಶಗಳ ನಡುವೆ ಸೇನಾ ಸಂಘರ್ಷ ತೀವ್ರಗೊಂಡಿದೆ.







ಕೆಆರ್‌ಎಸ್‌ನಲ್ಲಿ ಆಪರೇಷನ್ ಅಭ್ಯಾಸ್ ಅಣಕು ಪ್ರದರ್ಶನ

ಬೆಂಕಿ ಅವಘಡ, ಬಾಂಬ್ ಸ್ಫೋಟ, ನೀರಿನಲ್ಲಿ ಮುಳುಗಡೆಯಾದವರ ರಕ್ಷಣೆ

ಶ್ರೀರಂಗಪಟ್ಟಣ, ಮೇ 11– ಮಂಡ್ಯ ಜಿಲ್ಲಾಡಳಿತದ ವತಿಯಿಂದ ಭಾನುವಾರ ಕೆಆರ್‌ಎಸ್‌ನಲ್ಲಿ ಆಪರೇಷನ್ ಅಭ್ಯಾಸ್ ಅಣುಕು ಪ್ರದರ್ಶನವನ್ನು ಏರ್ಪಡಿಸಿ ಬೋಟಿಂಗ್ ವೇಳೆ ಅವಘಡ ನಡೆದ ಸಂದರ್ಭದಲ್ಲಿ ಜಿಲ್ಲಾಡಳಿತ, ಪೊಲೀಸ್, ಅಗ್ನಿಶಾಮಕ, ಆರೋಗ್ಯ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳು ಹಾಗೂ ಸಾರ್ವಜನಿಕರು ವಹಿಸಬೇಕಾದ ಎಚ್ಚರಿಕೆ ಕುರಿತು ಅಣುಕು ಪ್ರದರ್ಶನವನ್ನು ಅನಾವರಣಗೊಳಿಸಲಾಯಿತು.

ಕೆಆರ್‌ಎಸ್ ಉದ್ಯಾನವನದಲ್ಲಿರುವ ಬೋಟಿಂಗ್ ಪಾಯಿಂಟ್‌ನಲ್ಲಿ ಬೋಟ್ ಮಗುಚಿಕೊಂಡ ಸಂದರ್ಭದಲ್ಲಿ ಕಂಟ್ರೋಲ್ ರೂಂಗೆ ಘಟನೆ ವಿವರ ಕಳುಹಿಸಲಾಯಿತು. ತಕ್ಷಣ ಕಂಟ್ರೋಲ್ ರೂಂನಿಂದ ವಿವಿಧ ಇಲಾಖೆಗಳಿಗೆ ಮಾಹಿತಿ ನೀಡಿ ಎಚ್ಚರಿಸಲಾಯಿತು.

ಅಗ್ನಿಶಾಮಕ ದಳದವರು ಮೊದಲು ನೀರಿನಲ್ಲಿ ಮುಳುಗುತ್ತಿರುವ ವ್ಯಕ್ತಿಗಳನ್ನು ರಕ್ಷಣೆಗಾಗಿ ತಮ್ಮ ಇಲಾಖೆ ಬೋಟ್, ರಕ್ಷಣಾ ಸಲಕರಣೆಗಳನ್ನು ಬಳಸಿಕೊಂಡು ದಡಕ್ಕೆ ಕರೆ ತಂದರು. ಪೊಲೀಸ್ ಇಲಾಖೆಯವರು ಸಾರ್ವಜನಿ ಕರನ್ನು ನಿಯಂತ್ರಿಸಲು ಹಾಗೂ ಅಗ್ನಿಶಾಮಕ ಇಲಾಖೆ ವಾಹನಗಳು ಹಾಗೂ ಅಂಬ್ಯೂಲೆನ್ಸ್‌ಗಳ ಚಲನ-ವಲನಗಳಿಗೆ ತೊಂದರೆಯಾಗದಂತೆ ಬಂದೋಬಸ್ತ್ ಒದಗಿಸಿದರು.

ಆರೋಗ್ಯ ಇಲಾಖೆ ವತಿಯಿಂದ ಸ್ಥಳದಲ್ಲೇ ಪ್ರಥಮ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಚಿಕಿತ್ಸೆಗೆ ಅವಶ್ಯಕವಿರುವವರನ್ನು ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು.

2ನೇ ಅಭ್ಯಾಸ ಬೆಂಕಿ ಅವಘಡದಿಂದ ರಕ್ಷಣೆ: ಪೊಲೀಸ್ ಗೆಸ್ಟ್‌ಹೌಸ್‌ನಲ್ಲಿ ಬೆಂಕಿ ಅವಘಡವಾದ ತಕ್ಷಣ ಸೈರನ್ ಶಬ್ದ ಚಾಲನೆ ಮಾಡಿ ಎಚ್ಚರಿಕೆ ನೀಡಲಾಯಿತು. ಕಂಟ್ರೋಲ್ ರೂಂಗೆ ವಿಷಯ ರವಾನಿಸಿ ಎಲ್ಲಾ ಇಲಾಖೆಗಳನ್ನು ಎಚ್ಚರಿಸಲಾಯಿತು. ಪೊಲೀಸ್ ಗೆಸ್ಟ್ ಹೌಸ್‌ನಲ್ಲಿ ಬೆಂಕಿ ಅನಾಹುತದಲ್ಲಿ ಸಿಲುಕಲಾಗಿದ್ದ ವ್ಯಕ್ತಿಗಳನ್ನು ರಕ್ಷಿಸುವ ಅಣುಕು ಪ್ರದರ್ಶನದಲ್ಲಿ ಮೊದಲನೇ ಮಹಡಿಯಿಂದ ಗಾಯಾಳುಗಳನ್ನು ಕೆಳಗೆ ಇಳಿಸಿ ಚಿಕಿತ್ಸೆ ನೀಡುವುದು ವಿಶೇಷವಾಗಿತ್ತು.

3ನೇ ಅಭ್ಯಾಸ ಬಾಂಬ್ ಸ್ಫೋಟದ ಅವಘಡ ಬಾಂಬ್ ಸ್ಫೋಟವಾದ ತಕ್ಷಣ ಸೈರನ್ ಮೂಲಕ ಎಚ್ಚರಿಕೆ ನೀಡಿ ಕಂಟ್ರೋಲ್ ರೂಂಗೆ ವಿಷಯ ರವಾನಿಸಿ ಎಲ್ಲಾ ಇಲಾಖೆಗಳಿಗೆ ಕ್ರಮಕ್ಕೆ ಮಾಹಿತಿ ನೀಡಲಾಯಿತು.

ಬಾಂಬ್ ನಿಷ್ಕ್ರಿಯ ತಂಡ ಶ್ವಾನ ದಳದೊಂದಿಗೆ ಆಗಮಿಸಿ ಉದ್ಯಾನವನದ ಪರಿಶೀಲನೆ ಪ್ರಾರಂಭಿಸಲಾಯಿತು. ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಎನ್‌ಸಿಸಿ ವಿದ್ಯಾರ್ಥಿಗಳು, ಅಪಘಾತಕ್ಕೀಡದವರ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದರೆ. ವೈದ್ಯರ ತಂಡ ಪ್ರಥಮ ಚಿಕಿತ್ಸೆ ನೀಡುವ ಕಾರ್ಯದಲ್ಲಿ ತೊಡಗಲಾಯಿತು.

ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ನಂದಿನಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಸ್ಥಳಕ್ಕೆ ಆಗಮಿಸಿ ಕಾರ್ಯಾಚರಣೆಯಲ್ಲಿ ಯಾವುದೇ ಲೋಪವಾಗದಂತೆ ನಿಗಾ ವಹಿಸಿದ್ದರು.

ಅಣುಕು ಪ್ರದರ್ಶನದಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಗಂಗಾಧರ್, ಅಗ್ನಿಶಾಮಕ ಅಧಿಕಾರಿ ರಾಘವೇಂದ್ರ ಉಪವಿಭಾಗಾಧಿಕಾರಿ ಶಿವಮೂರ್ತಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ, ಆರೋಗ್ಯ, ಪೊಲೀಸ್, ಅಗ್ನಿಶಾಮಕ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಗೃಹರಕ್ಷಕ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ದೇಶ ಸೇವೆಗೆ ತೆರಳಿದ ಸೈನಿಕನಿಗೆ ಅಭಿನಂದಿಸಿ, ಶುಭ ಹಾರೈಕೆ

ತುರ್ತು ಕರೆ ಮೇರೆಗೆ ರಜೆ ಮೇಲೆ ಬಂದಿದ್ದ ಸೈನಿಕ ರಾಘವೇಂದ್ರ ಕರ್ತವ್ಯಕ್ಕೆ



ತುರ್ತು ಕರೆ ಮೇರೆಗೆ ಕರ್ತವ್ಯಕ್ಕೆ ತೆರಳಿದ ಮಂಡ್ಯದ ಮಗ ರಾಘವೇಂದ್ರ ಅವರಿಗೆ ಮಹಾರಾಜ ನಗರ ಬಡಾವಣೆ ನಿವಾಸಿಗಳು ಅಭಿನಂದಿಸಿ, ಶುಭ ಹಾರೈಸಿ ಕಳುಹಿಸಿಕೊಟ್ಟರು.

ಮಂಡ್ಯ: ಮನೆಯ ಗೃಹಪ್ರವೇಶದ ಹಿನ್ನೆಲೆಯಲ್ಲಿ ರಜೆ ಮೇಲೆ ಬಂದಿದ್ದ ಸೈನಿಕ ರಾಘವೇಂದ್ರ ರಕ್ಷಣಾ ಇಲಾಖೆಯ ಸೈನ್ಯಾಧಿಕಾರಿಗಳ ತುರ್ತು ಕರೆ ಮೇರೆಗೆ ಕರ್ತವ್ಯಕ್ಕೆ ತೆರಳಿದರು. ಈ ಸಂದರ್ಭದಲ್ಲಿ ಬಡಾವಣೆಯ ನಿವಾಸಿಗಳು ಅಭಿನಂದಿಸಿ, ಶುಭ ಹಾರೈಸಿ ಕಳುಹಿಸಿಕೊಟ್ಟರು.

ಮೂಲತಃ ಮಂಡ್ಯ ತಾಲೂಕಿನ ಹಲ್ಲೇಗೆರೆ ಗ್ರಾಮದ ಸುಬ್ಬೇಗೌಡ ಹಾಗೂ ನಿಂಗಮ್ಮ ದಂಪತಿ ಎರಡನೇ ಪುತ್ರ ರಾಘವೇಂದ್ರ ಮಾರ್ಚ್ 16 2011 ರಲ್ಲಿ ಗುಜರಾತ್‌ನ ಗಾಂಧಿಧಾಮ್‌ನಲ್ಲಿ ಮೊದಲು ಕರ್ತವ್ಯ ನಿರ್ವಹಿಸಿದ್ದರು. ನಂತರ ಇವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿತ್ತು. ಮಂಡ್ಯ ನಗರದ ಮಹಾರಾಜ ನಗರ ಬಡಾವಣೆಯಲ್ಲಿ ಮೇ 30 ರಂದು ಮನೆ ಗೃಹಪ್ರವೇಶವಿದ್ದುದರಿಂದ ರಾಘವೇಂದ್ರ ಮೇ.12 ರವರೆಗೂ ರಜೆ ಹಾಕಿ ಬಂದಿದ್ದರು.

ಭಾರತ ಹಾಗೂ ಪಾಕಿಸ್ತಾನ ನಡುವೆ ನಡೆಯುತ್ತಿರುವ ಕದನ ತಾರಕಕ್ಕೇರುತ್ತಿದ್ದಂತೆ ಅಮೇರಿಕಾ ಅಧ್ಯಕ್ಷ ಟ್ರಂಪ್ ಮಧ್ಯಸ್ತಿಕೆ ವಹಿಸಿ ಕದನ ವಿರಾಮ ಘೋಷಿಸಿದ್ದರು. ಆದರೂ, ಪಾಕಿಸ್ತಾನ ತನ್ನ ನರಿ ಬುದ್ಧಿ ತೋರಿಸಿ ಬಳಿಕವೂ ರಾತ್ರಿ ಮತ್ತೆ ಅಪ್ರಚೋದಿತ ದಾಳಿ ಮಾಡಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಹೆಚ್ಚಿನ ಸೈನಿಕರನ್ನು ನಿಯೋಜಿಸಲು ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ಸೂಚನೆ ಮೇರೆಗೆ ರಜೆ ಮೇಲೆ ತೆರಳಿದ್ದ ಸೈನಿಕರನ್ನು ಕರ್ತವ್ಯಕ್ಕೆ ಹಾಜರಾಗುವಂತೆ ರಕ್ಷಣಾ ಇಲಾಖೆಯ ಅಧಿಕಾರಿ ಕಚೇರಿಯಿಂದ ತುರ್ತು ಕರೆ ಬಂದ ಹಿನ್ನೆಲೆಯಲ್ಲಿ ಕರ್ತವ್ಯಕ್ಕೆ ಮರಳಿದರು.

ಜಮ್ಮು ಕಶ್ಮೀರದ ಗಡಿ ಭಾಗ ಲಡಾಕ್‌ಗೆ ರಾಘವೇಂದ್ರ ಅವರನ್ನು ನಿಯೋಜಿಸಿದ್ದು, ಕರ್ತವ್ಯಕ್ಕೆ ತೆರಳಿದರು. ಈ ಸಂದರ್ಭದಲ್ಲಿ ಕುಟುಂಬಸ್ಥರು ಹಾಗೂ ಬಡಾವಣೆಯ ನಿವಾಸಿಗಳು ಹೃದಯಪೂರ್ವಕವಾಗಿ ಶುಭ ಹಾರೈಸಿ ಅಭಿನಂದಿಸಿ ಕಳುಹಿಸಿಕೊಟ್ಟರು.

ಬಡಾವಣೆಮುಖಂಡರಾದ ಅಶೋಕ್, ಗೋವಿಂದರಾಜು, ಕೃಷ್ಣಪ್ಪ ರಾಮಲಿಂಗಯ್ಯ, ಮಹದೇವಸ್ವಾಮಿ, ನಟರಾಜು, ಕುಮಾರ್, ಕೆಂಪ ರಾಜು, ವೆಂಕಟರಾಮು, ರಾಘು, ಕಿರಣ್, ಲತಾ, ಸುನೀತಾ ಹಾಗೂ ಕುಟುಂಬದ ಸದಸ್ಯರು ಇದ್ದರು.

ಅರ್ಜಿ ಆಹ್ವಾನ

ಮಂಡ್ಯ: ಯುವನಿಧಿ ಯೋಜನೆಯಲ್ಲಿ 2022–23, 2023–24ನೇ ಸಾಲಿನಲ್ಲಿ ಮತ್ತು 2024–25ನೇ ಸಾಲಿನಲ್ಲಿ ಸ್ನಾತಕ ಪದವಿ/ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮೊ ಪದವಿಯಲ್ಲಿ ತೇರ್ಗಡೆಯಾಗಿ ಉದ್ಯೋಗ ದೊರಕದಂತಹ ಅರ್ಹ ಅಭ್ಯರ್ಥಿಗಳು https://sevasindhugs.karnataka.gov.in ಸೇವಾಸಿಂಧು ವೆಬ್‌ಪೋರ್ಟಲ್‌ನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿದೆ.

ಪಾಂಡವಪುರ ವಿಜಯ ಕಾಲೇಜಿನಲ್ಲಿ ವೈಭವದ ಜಾನಪದ ಉತ್ಸವ

ಎಲ್ಲೆಲ್ಲೂ ಗ್ರಾಮೀಣ ಸೊಗಡು, ಪೂರ್ಣಕುಂಭ ಮೆರವಣಿಗೆ, ಮೊಳಗಿದ ನಮ್ಮ ಸೇನೆ ನಮ್ಮ ಹೆಮ್ಮೆ ಘೋಷಣೆ



ಜಾನಪದ ಉತ್ಸವ ಸುಗ್ಗಿಸಂಭ್ರಮದ ಮೆರವಣಿಗೆಗೆ ಚಾಲನೆ ನೀಡಿದ ಸಂದರ್ಭ.

ಪಾಂಡವಪುರ, ಮೇ 11– ಪಟ್ಟಣದ ವಿದ್ಯಾ ಪ್ರಚಾರ ಸಂಘದ ವಿಜಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಾನಪದ ಉತ್ಸವ, ಸುಗ್ಗಿ ಸಂಭ್ರಮ ಅತ್ಯಂತ ವೈಭವದಿಂದ ನಡೆಯಿತು. ಕಾಲೇಜಿನಲ್ಲಿ ಗ್ರಾಮೀಣ ಸೊಗಡಿನ ವಾತಾವರಣ ಮನೆ ಮಾಡಿತ್ತು. ಗ್ರಾಮೀಣ ಸೊಗಡಿನಂತೆ ಎಲ್ಲಾ ವಿದ್ಯಾರ್ಥಿನಿ, ಶಿಕ್ಷಕಿಯರು ಬಗೆಬಗೆಯ ಸೀರೆಗಳನ್ನೊಟ್ಟು, ವಿದ್ಯಾರ್ಥಿಗಳು, ಉಪನ್ಯಾಸಕರು ಬಿಳಿಪಂಚೆ, ಶರ್ಟ್ ಧರಿಸಿ ಸಂಭ್ರಮಿಸಿದರು.

ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಬನ್ನಾರಿ ಮಾರಮ್ಮ ದೇವಸ್ಥಾನದ ಆವರಣದಿಂದ ಕಾಲೇಜಿನವರೆಗೂ ಮೆರವಣಿಗೆ ನಡೆಸಲಾಯಿತು. ಮೆರವಣಿಗೆ ಸಂಸ್ಥೆಯ ಅಧ್ಯಕ್ಷರು, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿದ್ಯಾರ್ಥಿನಿಯರು ಪೂರ್ಣಕುಂಭ ಹೊತ್ತು ಸಾಗಿದರೆ ವೀರಗಾಸೆ ಕುಣಿತ, ಡೊಳ್ಳುಕುಣಿತ, ಟಮಟೆ, ನಗಾರಿಗಳು, ಐದು ಜತೆ ಹಳ್ಳಿಕಾರ್ ತಳಿಯ ಜೋಡೆತ್ತುಗಳು ಭಾಗವಹಿಸುವ ಮೂಲಕ ಗಮನ ಸೆಳೆಯಿತು.

ಉಪನ್ಯಾಸಕರು ಎತ್ತಿನಗಾಡಿ ಏರಿ ಮೆರವಣಿಗೆ ಬರುವ ಮೂಲಕ ಸಂಭ್ರಮಿಸಿದರು. ಇದೇ ವೇಳೆ ಎಲ್ಲಾ ವಿದ್ಯಾರ್ಥಿಗಳು ನಮ್ಮ ಸೈನ್ಯ ನಮ್ಮ ಹೆಮ್ಮೆ ಎಂಬ ಘೋಷಣೆಯೊಂದಿಗೆ ಮೆರವಣಿಗೆಗೆ ಮೆರಗು ತಂದರು.

ಕಾಲೇಜಿನ ಡಾ.ಕೃಷ್ಣಕುಮಾರ್ ಸಭಾಂಗಣದಲ್ಲಿ ಹಳ್ಳಿಯ ವಾತಾವರಣವನ್ನೇ ಸೃಷ್ಟಿಸಲಾಗಿತ್ತು, ಭತ್ತ, ರಾಗಿಯ ರಾಶಿ, ರೈತರು ಉಳುಮೆಗೆ ಬಳಸುವ ನೊಗ, ನೇಗಿಲು, ಒನಕೆ, ರಾಗಿ ಬೀಸುವ ಕಲ್ಲು, ಕಬ್ಬು, ಭತ್ತದ ತೆನೆ ಸೇರಿದಂತೆ ಇಡೀ ಸಭಾಂಗಣವನ್ನು ಹಳ್ಳಿಯ ಪರಿಸರದಂತೆ ಅಲಂಕರಿಸಲಾಗಿತ್ತು. ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ವಿ. ಬಸವರಾಜು ಸೇರಿದಂತೆ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರು, ಉಪನ್ಯಾಸಕರು ಭತ್ತ ಹಾಗೂ ರಾಗಿಯ ರಾಶಿಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿನಿಯರಿಗೆ ಬಳೆ, ರವಿಕೆ, ಹರಿಸಿಣ-ಕುಂಕುಮ ವಿತರಣೆ ಮಾಡಿದರೆ ವಿದ್ಯಾರ್ಥಿಗಳಿಗೆ ಟವಲ್ ವಿತರಣೆ ಮಾಡಿದರು. ಜತೆಗೆ 9 ಮಂದಿ ಮುತ್ತೈದೆಯರಿಗೆ ಬಾಗೀನ ನೀಡುವ ಮೂಲಕ ಜಾನಪದ ಉತ್ಸವ ಸುಗ್ಗಿ ಸಂಭ್ರಮ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಿದರು. ಜತೆಗೆ ಗ್ರಾಮೀಣ ಸೊಗಡಿನ ಊಟವನ್ನು ಸಹ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾತನಾಡಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ನಮ್ಮ ಗ್ರಾಮೀಣ ಸೊಗಡಿನ ಜಾನಪದ ಕಲೆ, ಸುಗ್ಗಿಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕಾಲೇಜಿನಲ್ಲಿ ಇಂತಹ ವಿನೂತನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ನಮ್ಮ ರೈತರು ಸುಗ್ಗಿಯ ಸಂದರ್ಭದಲ್ಲಿ ಹೇಗೆ ಸಂಭ್ರಮಿಸುತ್ತಾರೆ, ಜತೆಗೆ ರೈತರು ಜೀವನವನ್ನು ಅರ್ಥೈಸಿಕೊಳಬೇಕು, ನಮ್ಮ ಜಾನಪದ ಕಲೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ವಿದ್ಯಾಪ್ರಚಾರ ಸಂಘದ ಗೌರವ ಕಾರ್ಯದರ್ಶಿ ಕೆ.ವಿ.ಬಸವರಾಜು ಮಾತನಾಡಿ, ಭಾರತ-ಪಾಕಿಸ್ತಾನ ಯುದ್ದ ನಡೆಯುತ್ತಿದ್ದು ಭಾರತೀಯ ಯೋಧರು ತುಂಬಾ ಚನ್ನಾಗಿ ತಮ್ಮ ಕಾರ್ಯಕ್ಷಮತೆಯನ್ನು ಮೆರೆಯುತ್ತಿದ್ದಾರೆ. ಹಾಗಾಗಿ ನಾವೆಲ್ಲರು ಅವರ ಜತೆಗೆ ಇರಬೇಕು ಎಂದರು. ನಿರ್ದೇಶಕ ಸೋಮೇಗೌಡ ಮಾತನಾಡಿದರು. ಪ್ರಾಂಶುಪಾಲ ಪ್ರೊ.ಕೃಷ್ಣಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಎಸ್.ರಾಮೇಗೌಡ, ಗೋಪಾಲಸ್ವಾಮಿ, ಚಂದ್ರಶೇಖರ್, ಡಾ.ಎಂ.ಮಾಯಿಗೌಡ, ಪ್ರಾಂಶುಪಾಲ ಪ್ರೊ.ಕೃಷ್ಣಮೂರ್ತಿ, ಉಪನ್ಯಾಸಕ ಡಾ.ಎನ್.ಕೆ.ವೆಂಕಟೇಗೌಡ, ವೇಣುಗೋಪಾಲ್ ಸೇರಿದಂತೆ ಉಪನ್ಯಾಸಕರು, ಬೋಧಕ ಮತ್ತು ಭೋಧಕೇತರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿವೃಂದ ಹಾಜರಿದ್ದರು.

ಬೋರೇಗೌಡ ನಿಧನ



ಭಾರತೀನಗರ, ಮೇ 11–ಭಾರತೀನಗರದ ಭಾರತೀಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಬಿ.ಎಸ್.ಬೋರೇಗೌಡ ಅವರ ತಂದೆ ಬಿದರಹೊಸಹಳ್ಳಿ ಪಟೇಲ್ ಎಚ್.ಬಿ.ಬೋರೇಗೌಡ ಉ॥ತಮ್ಮಯ್ಯ(90) ಭಾನುವಾರ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ.

ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮವಾದ ಬಿದರಹೊಸಹಳ್ಳಿಯ ತಮ್ಮ ಜಮೀನಿನಲ್ಲಿ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಕೆಳ ಹಂತದ ಸರ್ಕಾರಿ ಸಿಬ್ಬಂದಿಗೆ ಕೆನೆಪದರದಿಂದ ವಿನಾಯಿತಿ; ಸರ್ಕಾರದಿಂದ ಸುತ್ತೋಲೆ

ಬೆಂಗಳೂರು, ಮೇ 11– ರಾಜ್ಯ ಸರ್ಕಾರದ ಕೆಳ ಹಂತದ ಹುದ್ದೆಗಳಲ್ಲಿರುವ ಅಭ್ಯರ್ಥಿಗಳಿಗೆ ಕೆನೆಪದರದಿಂದ ವಿನಾಯಿತಿ ನೀಡುವ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ (SES–2015) ಆಧರಿಸಿ ಹಿಂದುಳಿದ ವರ್ಗಗಳ ಆಯೋಗವು ತನ್ನ ಶಿಫಾರಸುಗಳಲ್ಲಿ ಒಬಿಸಿಗಳಿಗೆ ಕೆನೆಪದರವನ್ನು ಅನ್ವಯಿಸಲು ಶಿಫಾರಸು ಮಾಡಿತ್ತು, ಇದು ಕಳೆದ ಶುಕ್ರವಾರ ನಡೆದ ಸಚಿವ ಸಂಪುಟದ ಕಾರ್ಯಸೂಚಿಗಳಲ್ಲಿ ಒಂದು ವಿಷಯವಾಗಿತ್ತು.

ಅಭ್ಯರ್ಥಿಗಳಿಗೆ ಕೆನೆಪದರದಿಂದ ವಿನಾಯಿತಿ ನೀಡುವ ಸುತ್ತೋಲೆಯನ್ನು ಸಚಿವ ಸಂಪುಟ ಸಭೆಗೆ ಒಂದು ದಿನ ಮೊದಲು ಅಂದರೆ ಗುರುವಾರ ಹೊರಡಿಸಲಾಗಿದೆ. ಸಂವಿಧಾನದ ವಿಧಿ 15(4) ಮತ್ತು 16(4) ರ ಅಡಿಯಲ್ಲಿ ನೇರ ನೇಮಕಾತಿಗಾಗಿ, ವರ್ಗ 2A, 2B, 3A, 3B ವರ್ಗಕ್ಕೆ ಸೇರಿದ ಅಭ್ಯರ್ಥಿಗಳು, ಕೆಳ ಹಂತದ ಹುದ್ದೆಗಳಲ್ಲಿ ನಿಗದಿತ-ನಿರ್ದಿಷ್ಟ ಅವಧಿಯ ಅನುಭವವನ್ನು ಹೊಂದಿದ್ದರೆ, ಅಂತಹ ಸಂದರ್ಭದಲ್ಲಿ ಅವರಿಗೆ ಕೆನೆಪದರ ನಿಯಮ ಅನ್ವಯಿಸುವುದಿಲ್ಲ ಎಂದು ಹಿಂದುಳಿದ ವರ್ಗಗಳ ಇಲಾಖೆ ಹೊರಡಿಸಿದ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದೆ.

ಆದ್ದರಿಂದ, ಈ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಸೇವೆಯಲ್ಲಿ ವಿನಾಯಿತಿ ನೀಡಲು, ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಿ ಎಂದು ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿದೆ. ಈ ನಿರ್ಧಾರವು ಕೆಳ ಹಂತದ ಹುದ್ದೆಗಳಲ್ಲಿರುವ ಸರ್ಕಾರಿ ನೌಕರರ ಮಕ್ಕಳು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಕೋಟಾ ಪ್ರಯೋಜನಗಳನ್ನು ಪಡೆಯಲು ಸಹಾಯ ಮಾಡುತ್ತದೆ. ಹಿಂದೆ ಎಸ್‌ಸಿ/ಎಸ್‌ಟಿ ಮತ್ತು ವರ್ಗ-Iರ ಅಭ್ಯರ್ಥಿಗಳಿಗೆ ಕೆನೆಪದರದ ವಿನಾಯಿತಿ ನೀಡಲಾಗಿತ್ತು, ಅದನ್ನು ಈಗ ಒಬಿಸಿಗಳಿಗೂ ವಿಸ್ತರಿಸಿದೆ.

ಕರ್ನಾಟಕದಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಕೆನೆಪದರದ ಸ್ಥಾನ ಮಾನವನ್ನು ನಿರ್ಧರಿಸಲು ಆದಾಯ ಮಿತಿ ವಾರ್ಷಿಕ 8 ಲಕ್ಷ ರೂಪಾಯಿಗಳಾಗಿದೆ. ಒಬ್ಬ ವ್ಯಕ್ತಿಯ ವಾರ್ಷಿಕ ಆದಾಯವು ಈ ಮಿತಿಗಿಂತ ಹೆಚ್ಚಿದ್ದರೆ, ಅವರು ಉದ್ಯೋಗ ಅಥವಾ ಶಿಕ್ಷಣದಲ್ಲಿ ಒಬಿಸಿ ಮೀಸಲಾತಿಗೆ ಅರ್ಹರಲ್ಲ.

ರಾಜಸ್ಥಾನ, ಪಂಜಾಬ್ ಗಡಿಯಲ್ಲಿ ಬ್ಲ್ಯಾಕ್ ಔಟ್

ಜೈಪುರ: ರಾಜಸ್ಥಾನ ಹಾಗೂ ಪಂಜಾಬಿನ ಗಡಿ ಪ್ರದೇಶಗಳಲ್ಲಿ ಭಾನುವಾರ ರಾತ್ರಿಯೂ ಮುನ್ನೆಚ್ಚರಿಕೆ ಕ್ರಮವಾಗಿ ಬ್ಲ್ಯಾಕ್ ಔಟ್ ಮಾಡಲಾಯಿತು. ಭಾರತ-ಪಾಕಿಸ್ತಾನ ಕದನ ವಿರಾಮ ಒಪ್ಪಂದ ಉಲ್ಲಂಘಿಸಿ ಶನಿವಾರ ರಾತ್ರಿಯೂ ಪಾಕಿಸ್ತಾನ ದಾಳಿ ನಡೆಸಿತ್ತು. ಹೀಗಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಭಾನುವಾರ ರಾತ್ರಿ ರಾಜಸ್ಥಾನದ ಬಾರ್ಮರ್‌ನಲ್ಲಿ ರಾತ್ರಿ 8.45ರಲ್ಲಿ, ಜೈಸಲ್ಮೇರ್‌ನಲ್ಲಿ ರಾತ್ರಿ 7.30 ರಿಂದ ಹಾಗೂ ಬಾಡಮೇರ್‌ನಲ್ಲಿ ರಾತ್ರಿ 8 ರಿಂದ ಕತ್ತಲು ಆವರಿಸಿತ್ತು.

ವಿವಿಧ ಡಿಪ್ಲೊಮಾ ಕೋರ್ಸ್‌ಗಳಿಗೆ ವಿಶೇಷ ಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಜೆಎಸ್‌ಎಸ್ ವಿಶೇಷ ಚೇತನ ಪಾಲಿಟೆಕ್ನಿಕ್ ಪ್ರಾಂಶುಪಾಲರ ಮಾಹಿತಿ



ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ.ಇಳಂಗೋವನ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವುದು.

ಮೈಸೂರು, ಮೇ 11(ಎಸ್‌ಪಿಎನ್)– 2025–26ನೇ ಸಾಲಿಗೆ ಮೂರು ವರ್ಷಗಳ ಅವಧಿಯ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ (ಅಖಿಲ ಭಾರತಮಟ್ಟದಲ್ಲಿ) ವಿಶೇಷ ಚೇತನ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ.ಇಳಂಗೋವನ್ ತಿಳಿಸಿದರು.

ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಆವರಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಷಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳು ಅನುದಾನಿತ ಕೋರ್ಸ್ ಗಳಾಗಿವೆ. ಜ್ಯುಯಲರಿ ಡಿಸೈನ್ ಮತ್ತು ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಆಪ್ಲಿಕೇಷನ್ಸ್ (ಫಾರ್ ವಿಜ್ಯುವಲಿ ಇಂಪೇರ್ಡ್), ಅಪರೇಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಅಂಡ್ ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ ಕೋರ್ಸ್ ಅನುದಾನಿತ ರಹಿತ ಕೋರ್ಸ್‌ಗಳಾಗಿವೆ ಎಂದರು.

ಈ ಕೋರ್ಸ್‌ಗಳಿಗೆ ಅಖಿಲ ಭಾರತದ ಮಟ್ಟದ ವಿಶೇಷಚೇತನ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿಶೇಷ ಚೇತನ ವಿದ್ಯಾರ್ಥಿಗಳು ಹಾಗೂ ದೇಶದ ಬೇರೆಬೇರೆ ರಾಜ್ಯಗಳಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಪೂರೈಸಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಬಹುದು. ಮೂಳೆ ಮತ್ತು ಕೀಲು ಅಂಗವಿಕಲತೆ ಶೇ.40ಕ್ಕೂ ಹೆಚ್ಚು ಕಿವುಡು ಮತ್ತು ಮೂಗ ಅಂಗವಿಕಲತೆ ಶೇ.60 ಡಿಬಿ ಮೇಲ್ಪಟ್ಟವರು. ಅಂಧತ್ವ -6/60 ಅಥವಾ 20/100 ಸ್ನೆಲೆನ್ ಇರುವವರು ಅರ್ಜಿ ಸಲ್ಲಿಸಬಹುದು.

ಈ ಕಾಲೇಜಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಶಿಷ್ಯವೇತನ ದೊರೆಯಲಿದೆ. ಕೋರ್ಸ್ ಮುಗಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಬೇರೆಬೇರೆ ಕಂಪನಿಗಳಲ್ಲಿ ಉದ್ಯೋಗಾವಕಾಶಕ್ಕೆ ಅವಕಾಶ ಒದಗಿಸಲು ಚಿಂತನೆಯೂ ಇದೆ ಎಂದರು.

ಈ ಕೋರ್ಸ್ ಪ್ರವೇಶಾತಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳ ಅರ್ಜಿಗೆ 100 ರೂ., ಎಸ್ಸಿ, ಎಸ್ಟಿ ಹಾಗೂ ಸಿ-1 ಕೆಟಗರಿ ಅಭ್ಯರ್ಥಿಗಳ ಅರ್ಜಿಗೆ 50 ರೂ., ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್: www.jsspda.org ಮತ್ತು ಮೊ: 98446–44937 ಅನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದು ಎಂದರು. ಗೋಷ್ಠಿಯಲ್ಲಿ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನ ಹಿರಿಯ ಉಪನ್ಯಾಸಕರಾದ ಡಾ.ಉಮಾ, ಡಾ.ಶ್ರೀಕಂಠಸ್ವಾಮಿ, ವಾರ್ಡನ್ ಶಿವಕುಮಾರ್, ಉದ್ಯೋಗ ಮತ್ತು ತರಬೇತಿ ಕೇಂದ್ರದ ಕುಶಾಲ ಉಪಸ್ಥಿತರಿದ್ದರು.

ಧಾರ್ಮಿಕ ನೆಲಗಟ್ಟಿಲ್ಲದೆ ಮಾಡುವ ಸಮಾಜ ಸುಧಾರಣೆಗಳು ಜಗತ್ತಿನಲ್ಲಿ ನಿಲ್ಲಲು ಸಾಧ್ಯವಿಲ್ಲ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ಮೈಸೂರಿನ ಶಿಕ್ಷಕರ ಬಡಾವಣೆ, ಶಕ್ತಿನಗರ, ವಿದ್ಯಾಶಂಕರ ಬಡಾವಣೆ ಹಾಗೂ ಡಾ.ರಾಜ್‌ಕುಮಾರ್ ರಸ್ತೆ ಒಳಗೊಂಡ ಬಸವ ಸಮಿತಿಯನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿ, ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕುದೇರು ಮಠದ ಗುರುಶಾಂತಸ್ವಾಮೀಜಿ, ಬಸವೇಶ್ವರ ಮಠದ ಶಿವಪ್ರಭು ಸ್ವಾಮೀಜಿ, ಶಾಸಕರಾದ ತನ್ವೀರ್ ಸೇಠ್, ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ ಮತ್ತಿತರರಿದ್ದರು.

ಮೈಸೂರು, ಮೇ 11(ಎಂಕೆ)– ಧರ್ಮದ ತಳಹದಿಯ ಮೇಲೆ ಜೀವನವನ್ನು ರೂಪಿಸುವ ಪ್ರಯತ್ನ ಮಾಡಿದ್ದರಿಂದಲೇ 9 ಶತಮಾನಗಳ ನಂತರವೂ ಬಸವಣ್ಣನವರು ಪ್ರಸ್ತುತ, ಸ್ಮರಣೀಯರಾಗಿದ್ದಾರೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ಶಿಕ್ಷಕರ ಬಡಾವಣೆಯ ಡಾ.ಎಸ್. ರಾಧಾಕೃಷ್ಣನ್ ಸಭಾಭವನದಲ್ಲಿ ಆಯೋಜಿಸಿದ್ದ ಶಿಕ್ಷಕರ ಬಡಾವಣೆ, ಶಕ್ತಿನಗರ, ವಿದ್ಯಾಶಂಕರ ಬಡಾವಣೆ ಹಾಗೂ ಡಾ.ರಾಜ್‌ಕುಮಾರ್ ರಸ್ತೆ ಒಳಗೊಂಡ ಬಸವ ಸಮಿತಿ ಹಾಗೂ ಬಸವ ಜಯಂತಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧಾರ್ಮಿಕ ನೆಲಗಟ್ಟಿಲ್ಲದೆ ಮಾಡುವ ಸಮಾಜ ಸುಧಾರಣೆಗಳು ಜಗತ್ತಿನಲ್ಲಿ ನಿಲ್ಲಲು ಸಾಧ್ಯವಿಲ್ಲ. ಧಾರ್ಮಿಕ ಚೌಕಟ್ಟಿನಲ್ಲಿ ಸಾಮಾಜಿಕ ಸುಧಾರಣೆ ಪ್ರಯತ್ನ ಮಾಡಿದ್ದರ ಫಲವಾಗಿ ಮತ್ತೆ ಬಸವಣ್ಣನವರ ಆದರ್ಶಗಳು ಪುನರ್ ಜೀವನಗೊಳ್ಳಲು ಸಾಧ್ಯವಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಬಸವಣ್ಣನವರ ಆಶಯಗಳನ್ನು, ಆದರ್ಶಗಳನ್ನು ಯಾರು ಬಿತ್ತುತ್ತಾರೋ, ಬೆಳೆಯುತ್ತಾರೋ, ಪಾಲನೆ ಮಾಡುತ್ತಾರೋ ಅವರೆಲ್ಲರೂ ಶರಣರಾಗುತ್ತಾರೆ. ತಾವು ಕಷ್ಟದಲ್ಲಿದ್ದರೂ ಮನಸ್ಪೂರ್ತಿಯಾಗಿ ಇನ್ನೊಬರ ಒಳಿತನ್ನು ಬಯಸುತ್ತಾರೋ ಅವರೆಲ್ಲಾ ಶರಣ, ಶರಣೆಯರಾಗಿರುತ್ತಾರೆ. ಈ ನಿಟ್ಟಿನಲ್ಲಿ ಉದ್ಘಾಟನೆಗೊಂಡಿರುವ ಬಸವ ಸಮಿತಿ ಸಮುದಾಯದ ಒಳಿತಿಗಾಗಿ ದುಡಿಯಬೇಕು. ಸಮಾಜಮುಖಿಯಾಗಿ ನಡೆಯಬೇಕು ಎಂದು ಹಾರೈಸಿದರು.

ಬಸವಣ್ಣನವರ ಚಿಂತನೆಗಳು ಸಾಕಾರಗೊಳಿಸಬೇಕಿದೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಶಿಕ್ಷಕರ ಬಡಾವಣೆ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಯಾರು ಹೊಟ್ಟೆ ಹಸಿವಿನಿಂದ ಇರಬಾರದು. ಯಾರು ಸಹ ಶಿಕ್ಷಣದಿಂದ ವಂಚಿತರಾಗಬಾರದು. ಎಲ್ಲಾ ಕುಟುಂಬಗಳು ಸುಖ-ನೆಮ್ಮದಿಯಿಂದ ಇರಬೇಕು. ಈ ನಿಟ್ಟಿನಲ್ಲಿ ಉದ್ಘಾಟನೆಗೊಂಡ ಬಸವ ಸಮಿತಿಯು ಬಸವ ತತ್ವ ಪಾಲನೆಯೊಂದಿಗೆ ಸಮಾಜಮುಖಿಯಾಗಿ ಮುನ್ನಡೆಯಲಿದೆ ಎಂದು ವಿಶ್ವಾಸ ಇದೆ. 12ನೇ ಶತಮಾನದಲ್ಲಿಯೇ ಸಮ-ಸಮಾಜದ ಪರಿಕಲ್ಪನೆ ನೀಡಿದ ಬಸವಣ್ಣನವರ ಚಿಂತನೆಗಳನ್ನು ಸಾಕಾರಗೊಳಿಸಬೇಕಿದೆ ಎಂದರು.

ಸಾಂಸ್ಕೃತಿಕ ನಾಯಕ: ಬಸವ ತತ್ವ ಕುರಿತು ವಿಶೇಷ ಉಪನ್ಯಾಸ ನೀಡಿದ ಕುಂದೂರು ಮಠದ ಶ್ರೀ ಡಾ.ಶರತ್‌ಚಂದ್ರ ಸ್ವಾಮೀಜಿ, ಕರ್ನಾಟಕ ಸರ್ಕಾರ ಎರಡು ವರ್ಷದ ಹಿಂದೆ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿತು. ನಮಗೆಲ್ಲಾ ಬಹಳ ಸಂತೋಷವಾಯಿತು. ಆದರೆ, ಯಾಕೆ ಬಸವಣ್ಣನವರನ್ನೇ ಸಾಂಸ್ಕೃತಿಕ ನಾಯಕ ಎನ್ನಲಾಯಿತು. ಕರ್ನಾಟಕದಲ್ಲಿ ಇನ್ನೂ ಎಷ್ಟೋ ಸಾದು-ಸಂತರು, ಪವಾಡ ಪುರುಷರಿದ್ದಾರೆ. ಅವರೆಲ್ಲಾ ಸಾಂಸ್ಕೃತಿಕ ನಾಯಕರಾಗಬಹುದಿತ್ತಲ್ಲಾ. ಬಸವಣ್ಣನವರನ್ನೇ ಏಕೆ ಮಾಡಲಾಯಿತು. ಅವರಲ್ಲಿ ಅಂತಹ ವೈಶಿಷ್ಟ್ಯವೇನು ಎಂಬ ವಿಚಾರಗಳು ಕೆಲವರ ಮನಸ್ಸಿನಲ್ಲಿ ಬಂದವು. ಜಗತ್ತಿನಲ್ಲಿನ ಮಹಾತ್ಮರೆಲ್ಲರೂ ಪರಲೋಕದ ಬಗ್ಗೆ ಉಪದೇಶ ಮಾಡಿದ್ದಾರೆಯೇ ಹೊರತು ಇಹಲೋಕಕ್ಕೆ ಮಹತ್ವ ಕೊಡಲೇ ಇಲ್ಲ. ಬಹುಶಃ ಇಡೀ ಜಗತ್ತಿನಲ್ಲಿ ಇಹಲೋಕಕ್ಕೆ ಮಹತ್ವ ಕೊಟ್ಟಂತಹ ಏಕೈಕ ಮಹನೀಯ ಯಾರಾದರೂ ಇದ್ದರೆ ಅದು ಬಸವಣ್ಣ. ಆದ್ದರಿಂದ ಅವರನ್ನು ಸಾಂಸ್ಕೃತಿಕ ನಾಯಕ ಎನ್ನಲಾಯಿತು ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ವಿದ್ವಾನ್ ಶ್ರೀ ಆನಂದಕುಮಾರ್ ಅವರಿಂದ ವಚನಗಾಯನ ನಡೆಯಿತು. ಕುದೇರು ಮಠದ ಗುರುಶಾಂತ ಸ್ವಾಮೀಜಿ, ಬಸವೇಶ್ವರ ಮಠದ ಶಿವಪ್ರಭು ಸ್ವಾಮೀಜಿ, ಶಾಸಕ ತನ್ವೀರ್ ಸೇಠ್, ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಬಸವರಾಜು, ಬಸವ ಸಮಿತಿ ಅಧ್ಯಕ್ಷ ಹೆಚ್.ಆರ್.ವೃಷಭೇಂದ್ರ, ಉಪಾಧ್ಯಕ್ಷ ಹೆಚ್.ಪಿ. ನಂಜುಂಡಸ್ವಾಮಿ, ಕಾರ್ಯದರ್ಶಿ ಬಿ.ಎಂ.ಪುಟ್ಟಣ್ಣ, ಖಜಾಂಚಿ ಎ.ಪಿ.ಕೆಂಡಗಣ್ಣ ಸ್ವಾಮಿ, ನಿರ್ದೇಶಕರಾದ ಅನಿಲ್ ರಾಜ್, ಕೆ.ಟಿ.ಸತೀಶ್, ಹೆಚ್.ಬಿ.ಓಂಕಾರಯ್ಯ, ಎಸ್.ಜಯಶೇಖರಸ್ವಾಮಿ, ಎಸ್.ವಿ.ಜಯಶೇಖರ್, ಎಂ.ಎಸ್.ರಾಜೇಂದ್ರಕುಮಾರ್, ಪಿ.ಎಸ್.ಅಭಿಷೇಕ್, ಕೆಸಿಶಿವಕುಮಾರಸ್ವಾಮಿ, ಎಸ್.ನಂದೀಶ್, ಎಸ್.ಬಿ. ಕರುಣಾಕರಮೂರ್ತಿ, ಗುರುಪಾದಸ್ವಾಮಿ, ವಿ.ಪ್ರಕಾಶ್, ಸಿ.ಸುರೇಶ್, ಎಸ್.ಆರ್.ಆನಂದಕುಮಾರ್ ಮತ್ತಿತರರಿದ್ದರು.

ಸಮಾಜಮುಖಿಯಾಗಿ ಮುನ್ನಡೆಯಲಿ...

ಮನುಷ್ಯನ ಬದುಕು ವಿಶಾಲವಾಗಬೇಕಾದರೆ, ಜ್ಞಾನವನ್ನು ತಿಳಿಯುವ ಕಾತುರತೆ ಇರಬೇಕು. ಜ್ಞಾನದ ತೃಷೆ ಇರುವಲ್ಲಿ ಮನಷ್ಯನ ವಿಕಾಸ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನೂತನ ಬಸವ ಸಮಿತಿಯು ಆಧ್ಯಾತ್ಮಿಕ ಚಿಂತನಾ, ಸತ್ಸಂಗ ಹಾಗೂ ಭಾರತೀಯ ಪರಂಪರೆ ತಿಳಿಸುವ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಜ್ಞಾನವನ್ನು ವೃದ್ಧಿಸುವ ಮೂಲಕ ಸಮಾಜಮುಖಿಯಾಗಿ ಮುನ್ನಡೆಯಬೇಕು.

–ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಬಸವಣ್ಣನವರು ಸರಕಾಗಿದ್ದಾರೆ...!


ಪ್ರಚಲಿತ ದಿನಗಳಲ್ಲಿ ಬಸವಣ್ಣನವರನ್ನು ಮಾತನಾಡಲಷ್ಟೇ ಬಳಸುವ ಸರಕನ್ನಾಗಿ ಮಾಡಿಕೊಳ್ಳಲಾಗಿದೆ. ಕೆಲವರಿಗೆ ಬಸವಣ್ಣ ಅಧಿಕಾರಕ್ಕೆ ಪ್ರಸಿದ್ಧಿಗೆ ಸರಕಾಗಿದ್ದಾರೆ. ಇನ್ನೂ ಕೆಲವರಿಗೆ ಬಸವಣ್ಣ ಹೊಟ್ಟೆಪಾಡಿನ ಸರಕಾದರೆ, ಮತ್ತೆ ಕೆಲವರಿಗೆ ಕೀರ್ತಿ ಸರಕು. ಅದೇ ರೀತಿ ಅನೇಕ ರೀತಿಯ ಸರಕನ್ನಾಗಿ ಬಸವಣ್ಣನವರನ್ನು ಮಾಡಿಕೊಂಡಿದ್ದಾರೆ. ಆದರೆ, ಬಸವಣ್ಣನವರನ್ನು ಆತ್ಮಕ್ಕೆ, ಹೃದಯಕ್ಕೆ, ಬುದ್ಧಿವಂತಿಕೆಗೆ ಸರಕನ್ನಾಗಿ ಮಾಡಿಕೊಂಡವರು ಎಲ್ಲೋ ಕೆಲವೇ ಕೆಲವು ಮಂದಿ. **– ಶ್ರೀ ಡಾ.ಶರತ್‌ಚಂದ್ರ ಸ್ವಾಮೀಜಿ, ಕುಂದೂರು ಮಠ, ಮೈಸೂರು**

ಪಂಚಮಾಗೆ ಪಿಹೆಚ್.ಡಿ



ಮೈಸೂರು: ರಾಜ್ಯಶಾಸ್ತ್ರ ವಿಷಯದಲ್ಲಿ ಕೊಡಗಿನ ಎಸ್.ಎನ್.ಪಂಚಮಾ ಅವರು ಡಾ.ಎಂ.ರಾಣಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾಧರಪಡಿಸಿದರ 'ಕರ್ನಾಟಕದ ಕೊಡಗು ಜಿಲ್ಲೆಯ ಪ್ರತ್ಯೇಕತಾವಾದಿ ಚಳುವಳಿ ಕುರಿತು ಒಂದು ಅಧ್ಯಯನ' ಎಂಬ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಸಕಲ ಸರ್ಕಾರಿ ಗೌರವದೊಂದಿಗೆ ಡಾ.ಸುಬ್ಬಣ್ಣ ಅಯ್ಯಪ್ಪನ್ ಅಂತ್ಯಕ್ರಿಯೆ



ಮೈಸೂರು, ಮೇ.11(ಬಿಎಲ್‌ಯು)– ನಿನ್ನೆ ನಿಧನ ಹೊಂದಿದ ಕೇಂದ್ರದ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆಯ ನಿವೃತ್ತ ಕಾರ್ಯದರ್ಶಿಗಳೂ ಆದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಸುಬ್ಬಣ್ಣ ಅಯ್ಯಪ್ಪನ್ ಅವರ ಅಂತ್ಯಕ್ರಿಯೆ ಇಂದು ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿತು.

ಶ್ರೀರಂಗಪಟ್ಟಣ ಸಮೀಪದ ಮೈಸೂರು – ಬೆಂಗಳೂರು ರಸ್ತೆಯ ಸತ್ಯ ಸಾಯಿ ಆಶ್ರಮದ ಬಳಿಯ ಕಾವೇರಿ ನದಿಯಲ್ಲಿ ನಿನ್ನೆ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಡಾ. ಸುಬ್ಬಣ್ಣ ಅಯ್ಯಪ್ಪನ್ ಅವರ ಮೃತದೇಹ ಪತ್ತೆಯಾಗಿತ್ತು. ಇಂದು ಬೆಳಿಗ್ಗೆ ಮೈಸೂರಿನ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ಸಂಬಂಧಿಕರಿಗೆ ಒಪ್ಪಿಸಲಾಯಿತು.

ಮೈಸೂರಿನ ವಿಶ್ವೇಶ್ವರ ನಗರದ ಸಂಕಲ್ಪ್ ಬಸಂತ್ ಅಪಾರ್ಟ್‌ಮೆಂಟ್‌ನಲ್ಲಿ ಕೃಷಿ ವಿಜ್ಞಾನಿ ಡಾ.ಸುಬ್ಬಣ್ಣ ಅಯ್ಯಪ್ಪನ್ ಅವರಿಗೆ ಪೊಲೀಸರು ಗೌರವ ವಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಡಳಿತದ ಪರವಾಗಿ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಅವರು ಹಾಜರಾಗಿ ಶ್ರದ್ಧಾಂಜಲಿ ಅರ್ಪಿಸಿದರು.

ತರುವಾಯ ಇಂದು ಮಧ್ಯಾಹ್ನ ನಗರದ ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು. ಡಾ.ಸುಬ್ಬಣ್ಣ ಅಯ್ಯಪ್ಪನ್ ಅವರ ಅಳಿಯ ಆದರ್ಶ್ ಅವರು ಮಾವನ ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ದಾಖಲೆ ಮೀರಿ ದುಬಾರಿಯಾಗಿದ್ದ ತೆಂಗಿನ ಕಾಯಿ ಬೆಲೆ ಸ್ವಲ್ಪ ಅಗ್ಗ



ಇನ್ನು 15 ದಿನದಲ್ಲಿ ಅರ್ಧದಷ್ಟು ಇಳಿಕೆ ಸಾಧ್ಯತೆ

- ಎಳನೀರು ಹೆಚ್ಚು ಬಳಕೆ ತೆಂಗಿನ ಕಾಯಿ ಬೆಲೆ ದುಬಾರಿಗೆ ಕಾರಣ
- ಮುಂಬೈಗೆ ಹೆಚ್ಚಿನ ಎಳನೀರು ಸಾಗಾಟ
- ಕರ್ನಾಟಕದಲ್ಲಿ ಈಗ ತೆಂಗಿನ ಕಾಯಿ ಸೀಸನ್ ಆರಂಭ

ಮೈಸೂರು, ಮೇ.11(ಬಿಎಲ್‌ಯು)– ಇದೇ ಮೊದಲ ಬಾರಿಗೆ ತೆಂಗಿನ ಕಾಯಿ ಬೆಲೆ ದಾಖಲೆ ಮೀರಿ ದುಬಾರಿಯಾಗಿದೆ. ಇದರಿಂದ ತೆಂಗಿನ ಕಾಯಿ ಖರೀದಿಗೆ ಜನರು ಹಿಂಜರಿಯುತ್ತಿದ್ದಾರೆ. ಆದರೆ ಈಗ ತೆಂಗಿನ ಕಾಯಿ ಬೆಲೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಇನ್ನು 15 ದಿನದ ನಂತರ ಇನ್ನೂ ಅರ್ಧದಷ್ಟು ಇಳಿಕೆಯಾಗಲಿದೆ.

ಮೈಸೂರು ಜಿಲ್ಲೆಗೆ ಒಂದು ದಿನಕ್ಕೆ 80 ರಿಂದ 100 ಟನ್ ತೆಂಗಿನ ಕಾಯಿ ಬೇಕಿದೆ. ಅಂದರೆ ಸುಮಾರು 2 ಲಕ್ಷ ತೆಂಗಿನ ಕಾಯಿ ಅವಶ್ಯವಿದೆ ಇದರಲ್ಲಿ 50 ಟನ್ ತೆಂಗಿನ ಕಾಯಿ ತಮಿಳುನಾಡಿನ ಕೊಯಮತ್ತೂರು, ಸೇಲಂ, ಆನಗಲ್ ಸೇರಿದಂತೆ ಇತರೆಡೆಯಿಂದ ಮೈಸೂರಿಗೆ ಬರುತ್ತದೆ. ಉಳಿದ ತೆಂಗಿನ ಕಾಯಿ ಸ್ಥಳೀಯವಾಗಿ ದೊರೆಯುತ್ತದೆ.

ಒಂದು ಕೆ.ಜಿ. ತೆಂಗಿನ ಕಾಯಿಗೆ 80 ರೂಪಾಯಿ ಬೆಲೆ ಇದೆ. ತಮಿಳುನಾಡಿನ ಕಾಯಿ ಸ್ವಲ್ಪ ದಪ್ಪ ಇರುವ ಹಿನ್ನೆಲೆ 70 ರೂಪಾಯಿ ಬೆಲೆ ಇದೆ. ಒಂದು ಕೆ.ಜಿ.ಗೆ ಎರಡು ತೆಂಗಿನ ಕಾಯಿ ಬರುತ್ತದೆ. ಮೈಸೂರಿನಲ್ಲಿ 15 ರಿಂದ 25 ರೂಪಾಯಿಗೆ ಸಿಗುತ್ತಿದ್ದ ತೆಂಗಿನ ಕಾಯಿ ದಿಢೀರ್ ಆಗಿ 40 ರೂಪಾಯಿಗೆ ಏರಿಕೆಗೆ ಕಂಡಿತು.

ಅಡುಗೆಯಲ್ಲಿ ತೆಂಗಿನ ಕಾಯಿ ಸಮನಾಗಿಲ್ಲದಿದ್ದರೆ ನಾಲಿಗೆಗೆ ರುಚಿ ಹತ್ತುವುದಿಲ್ಲ. ಇದರಿಂದ ಎರಡು ತೆಂಗಿನ ಕಾಯಿ ಖರೀದಿ ಮಾಡುತ್ತಿದ್ದವರು, ಒಂದು ತೆಂಗಿನ ಕಾಯಿಯಲ್ಲೆ ಅಡುಗೆ ಮಾಡಿ ನಾಜೂಕಿನಿಂದ ಸಂಸಾರ ಸಾಗಿಸುತ್ತಿದ್ದಾರೆ. ತೆಂಗಿನ ಕಾಯಿ ಕಡಿಮೆ ಬಳಸಿ ಆಹಾರ ತಯಾರಿಸುತ್ತಿದ್ದ ಕಾರಣ ರುಚಿ ಸ್ವಲ್ಪ ಕಡಿಮೆ ಇತ್ತು.



ತೆಂಗಿನ ಕಾಯಿ ಬೆಲೆ ದಿಢೀರ್ ಹೆಚ್ಚಾಗಲು ಪ್ರಮುಖ ಕಾರಣವೆಂದರೆ ಎಳನೀರು ಬಳಕೆ ಹೆಚ್ಚಾಗಿರುವುದು. ಬಿಸಿಲಿನ ತಾಪ, ಉತ್ತಮ ಆರೋಗ್ಯ ಹಾಗೂ ಹಲವು ರೋಗಗಳಿಗೆ ರಾಮಬಾಣವಾಗಿರುವ ಹಿನ್ನೆಲೆ ಹೆಚ್ಚಾಗಿ ಎಳನೀರನ್ನು ಸೇವಿಸಲಾಗುತ್ತಿದೆ. ಮರದಲ್ಲಿ ಎಳನೀರಾಗಿ ತೆಂಗಿನ ಕಾಯಿ ಆಗಲು ಕನಿಷ್ಟ 3 ತಿಂಗಳು ಬೇಕು. ಆದರೆ ಎಳನೀರಿಗೆ ಬೇಡಿಕೆ ಹೆಚ್ಚಾಗಿರುವ ಕಾರಣ ತೆಂಗಿನ ಕಾಯಿ ಆಗಲು ಬಿಡದೆ ಎಳನೀರು ಕಿತ್ತು ಮಾರಾಟ ಮಾಡಲು ಆರಂಭಿಸಲಾಯಿತು.

ತೆಂಗಿನ ಮರದಿಂದ ಎಳನೀರು ಕಿತ್ತು ಮಾರಾಟ ಮಾಡುವ ರೈತರು 30 ರಿಂದ 35 ರೂಪಾಯಿಗೆ ಮಾರಾಟ ಮಾಡಿದರೆ, ರಸ್ತೆ ಹಾಗೂ ಅಂಗಡಿಗಳಲ್ಲಿ 40 ರಿಂದ 60 ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ. ಎಳನೀರನ್ನು ಕಿತ್ತು ಮಾರಾಟ ಮಾಡುತ್ತಿದ್ದ ಕಾರಣ ತೆಂಗಿನ ಕಾಯಿಗೆ ಬರ ಬಂದು ಬೇಡಿಕೆಗೆ ತಕ್ಕಂತೆ ಸಿಗದೆ ಕೊರತೆ ಉಂಟಾಗಿ ಬೆಲೆ ದುಬಾರಿಯಾಯಿತು.

ಒಂದು ಎಳನೀರಿಗೆ ಮುಂಬೈನಲ್ಲಿ 150 ರೂಪಾಯಿ ಬೆಲೆ ಇದ್ದು, ಭಾರೀ ಬೇಡಿಕೆ ಇದೆ. ಇದರಿಂದ ಸ್ಥಳೀಯವಾಗಿ ಸಿಗುವ ಎಳನೀರನ್ನು ಕೆಲವು ವ್ಯಾಪಾರಿಗಳು ಮುಂಬೈಗೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದಾರೆ. ಇದು ಕೂಡ ತೆಂಗಿನ ಕಾಯಿ ಬೆಲೆ ದುಬಾರಿಯಾಗಲು ಮತ್ತೊಂದು ಕಾರಣವಾಗಿದೆ.

ಒಂದು ತೆಂಗಿನ ಕಾಯಿ ತೂಕ ಸುಮಾರು 450 ಗ್ರಾಂನಿಂದ 500 ಗ್ರಾಂವರೆಗೆ ಇರುತ್ತದೆ. ಕರ್ನಾಟಕದಲ್ಲಿ 3 ತಿಂಗಳಿಗೊಮ್ಮೆ 4 ರಿಂದ 5 ಕಟಾವುಗಳಲ್ಲಿ ತೆಂಗಿನ ಕಾಯಿ ಕೀಳಲಾಗುತ್ತದೆ. ತಮಿಳುನಾಡಿನಲ್ಲಿ 4 ಕಟಾವುಗಳಲ್ಲಿ ತೆಂಗಿನ ಕಾಯಿ ಕೀಳಲಾಗುತ್ತದೆ.

ಮೊದಲ ಸೀಸನ್‌ನಲ್ಲಿ 50 ಮರಕ್ಕೆ 2,000 ತೆಂಗಿನ ಕಾಯಿ ದೊರೆತರೆ, ಎರಡನೇ ಸೀಸನ್‌ಗೆ 1,500 ತೆಂಗಿನ ಕಾಯಿ, 3 ನೇ ಸೀಸನ್‌ಗೆ 1,000 ತೆಂಗಿನ ಕಾಯಿ ಹಾಗೂ 4 ನೇ ಸೀಸನ್‌ಗೆ 200 ರಿಂದ 300 ತೆಂಗಿನ ಕಾಯಿ ಸಿಗುತ್ತದೆ. ತರುವಾಯ ಕೂಳೆ ಕಾಯಿ ಅಷ್ಟೋ ಇಷ್ಟೋ ಸಿಗುತ್ತದೆ.

ಈಗ ತೆಂಗಿನ ಕಾಯಿಯ ಮೊದಲ ಸೀಸನ್ ಆರಂಭವಾಗಿದೆ. ಇದರಿಂದ ತೆಂಗಿನ ಕಾಯಿ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ಬರುತ್ತಿದೆ. ತಮಿಳುನಾಡಿಗಿಂತ ಕರ್ನಾಟಕದಲ್ಲಿ ಹೆಚ್ಚಿನ ತೆಂಗಿನ ಕಾಯಿ ಬರುತ್ತಿದೆ. ಇದರಿಂದ ಒಂದು ಕೆ.ಜಿ.ತೆಂಗಿನ ಕಾಯಿ ಬೆಲೆ 10 ರೂಪಾಯಿಗೆ ಕಡಿಮೆಯಾಗಿದೆ. ಈಗ ಒಂದು ಕೆಜಿ ತೆಂಗಿನ ಕಾಯಿ 70 ರೂಪಾಯಿಗೆ ಸಿಗುತ್ತಿದೆ.

ಇನ್ನು 15 ದಿನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನ ಕಾಯಿ ಮಾರುಕಟ್ಟೆಗೆ ಲಗ್ಗೆ ಇಡುತ್ತಿದೆ. ಇದರಿಂದ ಕೆಜಿ ತೆಂಗಿನ ಕಾಯಿ ಬೆಲೆ 40 ರಿಂದ 50 ರೂಪಾಯಿಗೆ ಇಳಿಕೆಯಾಗಲಿದೆ ಎಂದು ಸಗಟು ತೆಂಗಿನ ಕಾಯಿ ಮಾರಾಟಗಾರ ಮಧುಕರ್ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ತೆಂಗಿನ ಕಾಯಿ ಸೀಸನ್ ಆರಂಭವಾಗಿರುವ ಹಿನ್ನೆಲೆಯಲ್ಲಿ ಇಲ್ಲಿಂದಲೇ ತಮಿಳುನಾಡು ಸೇರಿದಂತೆ ಇತರೆಡೆಗೆ ತೆಂಗಿನ ಕಾಯಿ ಕಳುಹಿಲಾಗುವುದು ಎಂದು ಮಧುಕರ್ ಮಾಹಿತಿ ನೀಡಿದರು.

> ಈ ಬಾರಿ ಎಳನೀರಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ತೆಂಗಿನ ಕಾಯಿ ಬೆಲೆ ದುಬಾರಿ ಆಗಲು ಕಾರಣವಾಯಿತು. ಎಳನೀರಿನಿಂದ ಒಳ್ಳೆಯ ಲಾಭ ಸಿಗುತ್ತಿರುವ ಕಾರಣ ರೈತರು ಎಳನೀರನ್ನೇ ಹೆಚ್ಚಾಗಿ ಮಾರಾಟ ಮಾಡುತ್ತಿದ್ದಾರೆ.
>
> ತೆಂಗಿನ ಕಾಯಿ ಕೊರತೆ ಉಂಟಾಗಲು ಮರಗಳಿಗೆ ರೋಗಬಾಧೆ ಕಾರಣವಲ್ಲ. ತೆಂಗಿನ ಮರಗಳಿಗೆ ರೋಗ ಬರುವುದು ಸರ್ವೆ ಸಾಮಾನ್ಯ. ಆದರೆ ರೋಗ ಮುಕ್ತ ಮಾಡಲು ನಾವು ರೈತರಿಗೆ ಸಲಹೆ, ಮಾರ್ಗದರ್ಶನ ನೀಡುತ್ತಿರುತ್ತೇವೆ. ಇದರಿಂದ ತೆಂಗಿನ ಮರಗಳ ರೋಗ ಬಾಧೆ ಕಡಿಮೆಯಾಗುತ್ತದೆ. ಎಳನೀರನ್ನು ಹೆಚ್ಚಾಗಿ ಮಾರಾಟ ಮಾಡುತ್ತಿರುವ ಕಾರಣ ತೆಂಗಿನ ಕಾಯಿಗೆ ಕೊರತೆ ಉಂಟಾಗಿದೆ. ಮಾರುಕಟ್ಟೆ ಬೆಲೆಗಿಂತ ತೋಟಗಾರಿಕೆ ಇಲಾಖೆ ನಡೆಸುವ ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಕಡಿಮೆ ಬೆಲೆಯಲ್ಲಿ ತೆಂಗಿನ ಕಾಯಿ ಮಾರಾಟ ಮಾಡಲಾಗುತ್ತದೆ.
>
> -ಮಂಜುನಾಥ್ ಅಂಗಡಿ, ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ.

ಭಾರತೀಯ ಸೇನೆಗೆ ಸ್ಥೈರ್ಯಕ್ಕೆ ಪ್ರಾರ್ಥಿಸಿ ವಿಶೇಷ ಪೂಜೆ



ಭಾರತೀಯ ಸೇನೆಗೆ ಒಳಿತಾಗಲಿ ಎಂದು ಪಂಚಮುಖಿ ಆಂಜನೇಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮೈಸೂರು, ಮೇ 11(ಎಸ್‌ಪಿಎನ್)– ಪಾಕಿಸ್ತಾನದ ವಿರುದ್ಧ ಹೋರಾಡುತ್ತಿರುವ 'ಆಪರೇಷನ್ ಸಿಂಧೂರ್' ಮೂಲಕ ಭಾರತೀಯ ಸೇನೆಗೆ ಆತ್ಮಸ್ಥೈರ್ಯ ನೀಡಲು ಪ್ರಾರ್ಥಿಸಿ ಪಂಚಮುಖಿ ಆಂಜನೇಸ್ವಾಮಿ ದೇವಸ್ಥಾನದಲ್ಲಿ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪದಾಧಿಕಾರಿಗಳು ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು ಇರ್ವಿನ್ ರಸ್ತೆಯ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಭಾರತೀಯ ಸೇನೆ ಪರವಾಗಿ ಭಾರತ್ ಮಾತಾಕಿ ಜೈ ಸೇರಿದಂತೆ ವಿವಿಧ ಘೋಷಣೆಗಳನ್ನು ಕೂಗಿದರು.

ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ಮಾತನಾಡಿ, ಸದಾ ಭಾರತೀಯರ ರಕ್ಷಣೆಗಾಗಿ ಗಡಿಯಲ್ಲಿ ಹೋರಾಡುತ್ತಿರುವ ಸೈನಿಕರ ಆರೋಗ್ಯ, ದೇಶದ ಸುರಕ್ಷತೆ ಎರಡೂ ಮುಖ್ಯವಾಗಿರುತ್ತದೆ. ಹಾಗಾಗಿ ಈ ವೀರ ಸೈನಿಕರಿಗೆ ಹೋರಾಟಕ್ಕೆ ಆತ್ಮ ಸ್ಥೈರ್ಯ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಲಾಗಿದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಎನ್.ಎಂ ನವೀನ್ ಕುಮಾರ್, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಮೈಸೂರು ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಪದಾಧಿಕಾರಿಗಳಾದ ಅಜಯ್ ಶಾಸ್ತ್ರಿ, ರಾಕೇಶ್ ಭಟ್, ಶ್ರೀಕಾಂತ್ ಕಶ್ಯಪ್, ಟಿ ಎಸ್ ಅರುಣ್, ರಂಗನಾಥ್, ಚಕ್ರಪಾಣಿ, ಸುಚೇಂದ್ರ, ಅಪೂರ್ವ ಸುರೇಶ್, ಜತ್ತಿ ಪ್ರಸಾದ್, ರವಿಶಂಕರ್, ವಿಶ್ವನಾಥ್, ವಿಜ್ಞೇಶ್ವರ ಭಟ್, ರಾಮು, ನಾ.ಸು ನಾಗರಾಜ, ಎ. ಎಸ್ ನಾಗೇಶ್‌ಸೇರಿದಂತೆ ಇತರರಿದ್ದರು.

ವೀರ ಮಡಿವಾಳರ ಸಂಘಕ್ಕೆ ಅಧ್ಯಕ್ಷ ಆಯ್ಕೆ



ಮೈಸೂರು ಜಿಲ್ಲಾ ವೀರ ಮಡಿವಾಳರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ, ಹಿರಿಯ ಸಂಘಟಕರಾದ ಜಿ.ಎಸ್.ಸತ್ಯನಾರಾಯಣ ಅವರನ್ನು ಸಮುದಾಯದ ಮುಖಂಡರು ಅವಿರೋಧವಾಗಿ ಆಯ್ಕೆ ಮಾಡಿದರು.ಈ ಸಂದರ್ಭದಲ್ಲಿ ನಂಜನಗೂಡು ವೀರ ಮಡಿವಾಳರ ಸಂಘದ ತಾಲೂಕು ಅಧ್ಯಕ್ಷ ಡಾ.ಡಿ.ಚಂದ್ರು ಕೇಶವ, ಶ್ರೀನಿವಾಸ್, ಗಿರೀಶ್, ಶ್ರೀರಾಮ್, ಚಿಕ್ಕಣ್ಣ, ಮಹೇಶ್, ಜಗದೀಶ್, ರಂಗಸ್ವಾಮಿ, ರವಿ, ಮಡುವಿನಹಳ್ಳಿ ಮಹದೇವು, ಮಂಜುಶೆಟ್ಟಿ, ಸ್ವಾಮಿ, ಜಗದೀಶ್, ಸಂತೋಷ್, ಕೆಂಬಾಲ್ ರಾಮು, ಮಹೇಶ್, ಸೇರಿದಂತೆ ವಿವಿಧ ತಾಲೂಕುಗಳ ಮುಖಂಡರು ಉಪಸ್ಥಿತರಿದ್ದರು.

ಬಾಡಿಗೆಗೆ ಪಡೆದಿದ್ದ ಕಾರನ್ನೇ ಮಾರಾಟ ಮಾಡಲು ಯತ್ನ

ಮೈಸೂರು, ಮೇ 11(ಎಂಕೆ)– ಬಾಡಿಗೆಗೆ ಪಡೆದಿದ್ದ ಕಾರನ್ನು ಸಹಿ ನಕಲು ಮಾಡಿ ತನ್ನ ಹೆಸರಿಗೆ ಮಾಡಿಸಿಕೊಂಡು, ಅದೇ ಕಾರಿನ ಮೇಲೆ ಲೋನ್ ಪಡೆದಿರುವುದಲ್ಲದೆ ಮತ್ತೊಬ್ಬರಿಗೆ ಮಾರಾಟ ಮಾಡಲು ಯತ್ನಿಸಿರುವ ಕುರಿತು ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಬ್ಬಾಳ ನಿವಾಸಿ ಎಸ್.ವರುಣ್ ಎಂಬುವರು ದೂರು ನೀಡಿದ್ದು, ತಾನು 13.50 ಲಕ್ಷ ರೂ. ಕೊಟ್ಟು ಖರೀದಿಸಿದ್ದ ಇನ್ನೋವಾ ಕ್ರಿಸ್ಟಾ(ಕೆಎ–05–ಎಹೆಚ್–7489) ಕಾರನ್ನು ಇಲವಾಲ ಹೋಬಳಿ ಕಲ್ಲೂರು ನಾಗನಹಳ್ಳಿ ಗ್ರಾಮದ ಎನ್.ಪಿ.ಪ್ರದೀಪ್‌ಗೆ ಬಾಡಿಗೆಗೆ ನೀಡಲಾಗಿತ್ತು. ಆದರೆ, ಆತ ಫಾರಂ 29 ಮತ್ತು 30ಕ್ಕೆ ನನ್ನ ಸಹಿಯನ್ನು ನಕಲು ಮಾಡಿ, ನನ್ನ ಕಾರನ್ನು ತನ್ನ ಹೆಸರಿಗೆ ಮಾಡಿಸಿಕೊಂಡು, ಕಾರಿನ ಮೇಲೆ ಫೈನಾನ್ಸ್‌ನಲ್ಲಿ ಲೋನ್ ಪಡೆದಿರುವುದಲ್ಲದೆ ಬೇರೆಯವರಿಗೆ ಮಾರಾಟ ಮಾಡಲು ಮುಂದಾಗಿದ್ದಾನೆ. ಸಹಿ ನಕಲು ಮಾಡಿ ವಂಚಿಸಿರುವ ಎನ್.ಪಿ.ಪ್ರದೀಪ್ ವಿರುದ್ಧ ಕ್ರಮ ಕೈಗೊಳ್ಳುವುದಲ್ಲದೆ ಬಾಡಿಗೆಗೆ ಕೊಟ್ಟಿದ್ದ ಕಾರನ್ನು ವಾಪಸ್ ಕೊಡಿಸುವಂತೆ ದೂರಿನಲ್ಲಿ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಮೇ 11(ಪಿಎಂ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2024–25ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಿದ ರಾಜ್ಯ ಹಾಗೂ ಕೇಂದ್ರೀಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಹಾಗೂ 10ನೇ ತರಗತಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದಿರುವ ಪ್ರತಿಭಾವಂತರು ಅರ್ಜಿ ಸಲ್ಲಿಸಬಹುದು. ಪುರಸ್ಕಾರವು ನಗದು ಒಳಗೊಂಡಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಜೂ.30ರೊಳಗೆ ಸಂಸ್ಥೆಯ ವಿಳಾಸಕ್ಕೆ (ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು–570004) ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಮೊ.ಸಂ. 94490 30588 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಯೋಗನರಸಿಂಹ ಸ್ವಾಮೀಜಿ ಜಯಂತಿ



ಮೈಸೂರಿನ ವಿಜಯನಗರದಲ್ಲಿರುವ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಯೋಗನರಸಿಂಹ ಸ್ವಾಮಿ ಜಯಂತಿ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಭಕ್ತಾಧಿಗಳು ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

70ರ ದಶಕದಂತೆ ದಲಿತ ಚಳುವಳಿ ಪ್ರಖರ ಶಕ್ತಿಯಾಗಿ ಮತ್ತೆ ಹೊರಹೊಮ್ಮಬೇಕು

ದಸಂಸ ಹಿರಿಯ ಹೋರಾಟಗಾರ ಹರಿಹರ ಆನಂದಸ್ವಾಮಿ

ಮೈಸೂರು, ಮೇ 11(ಪಿಎಂ)– ಪುನರ್ ಸಂಘಟನೆಗೊಳ್ಳುವ ಮೂಲಕ ದಲಿತ ಚಳುವಳಿಯು 70ರ ದಶಕದಂತೆ ಪ್ರಖರ ಶಕ್ತಿಯಾಗಿ ಮತ್ತೆ ಹೊರಹೊಮ್ಮಬೇಕಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರೂ ಆದ ದಲಿತ ಸಂಘರ್ಷ ಸಮಿತಿಯ (ದಸಂಸ) ಹಿರಿಯ ಹೋರಾಟಗಾರ ಹರಿಹರ ಆನಂದಸ್ವಾಮಿ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನ, ಕರ್ನಾಟಕ ವಿಕಾಸವಾಹಿನಿ ಮತ್ತು ಸೌಹಾರ್ದಬೀಡು ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 134ನೇ ಜಯಂತಿ ಅಂಗವಾಗಿ 'ಸಮಸಮಾಜ ಮತ್ತು ಅಂಬೇಡ್ಕರ್ ತತ್ವಸಿದ್ಧಾಂತ' ಕುರಿತು ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಸಾಮಾಜಿಕ–ಆರ್ಥಿಕ ಅನ್ಯಾಯ, ಅಸಮಾನತೆ ವಿರುದ್ಧ ಕರ್ನಾಟಕದಲ್ಲಿ 70ರ ದಶಕದ ಸಂದರ್ಭದಲ್ಲಿ ಪ್ರಖರ ಶಕ್ತಿಯಾಗಿದ್ದ ದಲಿತ ಚಳವಳಿ ಇಂದು ಶಿಥಿಲವಾಗಿ ದಿಕ್ಕು ತಪ್ಪಿದ ಸ್ಥಿತಿಯಲ್ಲಿದ್ದು, ಅದರ ಪುನರ್ ಸಂಘಟನೆ ಆಗಬೇಕು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ಕಾಲಘಟ್ಟದಲ್ಲಿ ಅಸ್ಪೃಶ್ಯತೆ–ಅಸಮಾನತೆ ವಿರುದ್ಧ ಪ್ರಬಲ ಹೋರಾಟ ಮಾಡಿದರು. ಸಂವಿಧಾನ ಸಹ ಕೊಟ್ಟರು. ಅದಾಗ್ಯೂ ಮುಂದುವರೆದಿದ್ದ ಅಸಮಾನತೆ ವಿರುದ್ಧವಾಗಿ ರಾಜ್ಯದಲ್ಲಿ ದಲಿತ ಚಳವಳಿ ಹುಟ್ಟಿಕೊಂಡಿತು. ನಾನು ವಿದ್ಯಾಭ್ಯಾಸ ಮುಗಿಸಿದ್ದ ಸಂದರ್ಭದಲ್ಲಿ ಅಂದು ಬೂಸಾ ಗಲಾಟೆ ಪ್ರಾರಂಭವಾಯಿತು. ಇದೇ ಗಲಾಟೆ ಹಿನ್ನೆಲೆಯಲ್ಲಿ ದಲಿತ ಚಳವಳಿ ಆರಂಭವಾಯಿತು ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಭಾನುವಾರ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರಾದ ಹರಿಹರ ಆನಂದಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

70ರ ದಶಕದಲ್ಲಿ ಶೋಷಿತ ಸಮುದಾಯಗಳ ವಿರುದ್ಧ ದೌರ್ಜನ್ಯ–ದಬ್ಬಾಳಿಕೆ ನಿರಂತರವಾಗಿ ನಡೆಯುತ್ತಿತ್ತು. ಅಂದು ಡಿ.ದೇವರಾಜ ಅರಸು ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರು ದಲಿತ ಸಮುದಾಯದ ಹಿರಿಯ ನಾಯಕರು ಹಾಗೂ ಮುತ್ಸದ್ದಿ ರಾಜಕಾರಣಿಯಾಗಿದ್ದರು. ಅವರು ಅಂಬೇಡ್ಕರ್ ಮತ್ತು ಬುದ್ಧರನ್ನು ಆದರ್ಶವಾಗಿ ಇಟ್ಟುಕೊಂಡಿದ್ದವರು. ಅಸಮಾನತೆ, ಅಸ್ಪೃಶ್ಯತೆ ತೊಡೆದು ಹಾಕಲು ಪರಿಹಾರ ಕಂಡುಕೊಳ್ಳಲು ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಬಿ.ಬಸವಲಿಂಗಪ್ಪನವರು 'ಬೂಸಾ' ಎಂದು ಹೇಳಿದ ಒಂದು ಮಾತಿಗೆ ಕನ್ನಡ ಭಾಷೆಯನ್ನು ನೆಪವಾಗಿಸಿಕೊಂಡು ವಿನಾಕಾರಣ ವಿವಾದ ಸೃಷ್ಟಿ ಮಾಡಲಾಯಿತು. ಇದು ದಲಿತ ಚಳವಳಿ ಹುಟ್ಟಿಗೂ ಭದ್ರ ಬುನಾದಿ ಹಾಕಿತು. ದಲಿತ ಚಳವಳಿಯು 70ರಿಂದ 80ರ ದಶಕದವರೆಗೆ ಪ್ರಖರವಾದ ಶಕ್ತಿಯಾಗಿತ್ತು. ಆದರೆ ಇಂದು ಶಿಥಿಲವಾಗಿ ದಿಕ್ಕು ತಪ್ಪಿದ ಸ್ಥಿತಿಯನ್ನು ತಲುಪಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದಲಿತ ಚಳವಳಿ ಮೂಲಕವೇ ನಾನು ಈ ಜಗತ್ತನ್ನು ನೋಡಲು ಪ್ರಾರಂಭಿಸಿದೆ. ನಾನು ಪ್ರಶಸ್ತಿ ಅರಸಿ ಚಳುವಳಿ ಕಟ್ಟಿದವನಲ್ಲ. ಶೋಷಿತ ಸಮುದಾಯಗಳ ಮೇಲೆ ನಡೆಯುವ ದೌರ್ಜನ್ಯ ನಿಂತರೆ ಅದೇ ನಮಗೆ ದೊಡ್ಡ ಪ್ರಶಸ್ತಿ. ಬಾಬಾ ಸಾಹೇಬರ ಹೆಸರಿನಲ್ಲಿ ಪ್ರಶಸ್ತಿ ಲಭಿಸಿರುವುದು ನನಗೆ ಹೆಮ್ಮೆ ಎನ್ನಿಸುತ್ತದೆ. ಸರ್ಕಾರ ಗುರುತಿಸಿ ಪ್ರಶಸ್ತಿ ಕೊಟ್ಟಿದೆ. ನಾನು ಯಾವುದೇ ಅರ್ಜಿ ಹಾಕಿರಲಿಲ್ಲ. ಯಾರಿಂದಲೂ ಶಿಫಾರಸ್ಸು ಸಹ ಮಾಡಿಸಿರಲಿಲ್ಲ ಎಂದರು.

'ಸಮಸಮಾಜ ಮತ್ತು ಅಂಬೇಡ್ಕರ್ ತತ್ವ ಸಿದ್ಧಾಂತ' ಕುರಿತು ಜೆನ್ ಕವಿ ಸೋಸಲೆ ಗಂಗಾಧರ್ ವಿಷಯ ಮಂಡಿಸಿದರು. ಇದೇ ವೇಳೆ ಹುಣಸೂರು ಡೀಡ್ ಸಂಸ್ಥೆ ನಿರ್ದೇಶಕ ಡಾ.ಎಸ್.ಶ್ರೀಕಾಂತ್ ಅವರ ಕುರಿತ 'ಶ್ರೀಕಾಂತ್ –75 ಆದಿವಾಸಿ ಹಕ್ಕೊತ್ತಾಯ ಚಳವಳಿಯ ಹೆಜ್ಜೆಗಳು' ಎಂಬ ಕೈಪಿಡಿಯನ್ನು ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಬಿಡುಗಡೆ ಮಾಡಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಡೀಡ್ ಸಂಸ್ಥೆ ನಿರ್ದೇಶಕ ಡಾ.ಎಸ್. ಶ್ರೀಕಾಂತ್, ಮಾನವ ಹಕ್ಕುಗಳ ಹೋರಾಟಗಾರ ಪ್ರಸನ್ನ, ನಂಜನಗೂಡು ಮಕ್ಕಳ ಮನೆಯ ಡಿ.ಜಿ. ಸೋಮಶೇಖರ್‌ಮೂರ್ತಿ, ಆದಿವಾಸಿ ಮುಖಂಡ ಹರ್ಷ, ಪತ್ರಕರ್ತರಾದ ಸೋಮಯ್ಯ ಮಲೆಯೂರು, ಪುರಿಗಾಲಿ ಮರಡೇಶಮೂರ್ತಿ ಮತ್ತಿತರು ಹಾಜರಿದ್ದರು.

ದೇಶ – ವಿದೇಶ

ಬಂಡೆಯಿಂದ 100 ಮೀ. ಆಳಕ್ಕೆ ಉರುಳಿಬಿದ್ದ ಬಸ್; 21 ಮಂದಿ ಸಾವು

ಕೊಲಂಬೊ: ಶ್ರೀಲಂಕಾದಲ್ಲಿ ಭಾನುವಾರ ಪ್ರಯಾಣಿಕರ ಬಸ್ಸೊಂದು ಬಂಡೆಯಿಂದ ಉರುಳಿ ಬಿದ್ದ ಪರಿಣಾಮ ಕನಿಷ್ಠ 21 ಜನರು ಸಾವಿಗೀಡಾಗಿದ್ದು, 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯ ಪ್ರಾಂತ್ಯದ ಕೋಟ್ಮಲೆಯಲ್ಲಿ ಬಸ್ ಚಾಲಕ ಗುಡ್ಡಗಾಡು ಪ್ರದೇಶದಲ್ಲಿ ಎಡ ತಿರುವು ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಈ ಅಪಘಾತ ಸಂಭವಿಸಿದೆ. ರಾಜ್ಯ ಸಾರಿಗೆ ಸಂಸ್ಥೆಗೆ ಸೇರಿದ ಬಸ್, ದಕ್ಷಿಣ ಯಾತ್ರಾ ಸ್ಥಳವಾದ ಕತರಗಮದಿಂದ ವಾಯುವ್ಯ ಪಟ್ಟಣವಾದ ಕುರುನಗರಕ್ಕೆ ತೆರಳುತ್ತಿತ್ತು. ಬಸ್ಸಿನಲ್ಲಿ 75 ಪ್ರಯಾಣಿಕರು ಇದ್ದರು. ಈ ವೇಳೆ ಬಂಡೆಯಿಂದ 100 ಮೀಟರ್ ಆಳಕ್ಕೆ ಉರುಳಿಬಿದ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದಲ್ಲಿ 21 ಜನರು ಸಾವಿಗೀಡಾಗಿದ್ದಾರೆ. ದುರಂತದಲ್ಲಿ 30ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಸಾರಿಗೆ ಮತ್ತು ಹೆದ್ದಾರಿಗಳ ಉಪ ಸಚಿವ ಪ್ರಸನ್ನ ಗುಣಸೇನ ತಿಳಿಸಿದ್ದಾರೆ. ಶ್ರೀಲಂಕಾದಲ್ಲಿ ಮಾರಣಾಂತಿಕ ಬಸ್ ಅಪಘಾತಗಳು ಸಾಮಾನ್ಯವಾಗಿವೆ. ಅಜಾಗರೂಕ ಚಾಲನೆ ಮತ್ತು ಕಳಪೆ ನಿರ್ವಹಣೆಯ ರಸ್ತೆಗಳಿಂದಾಗಿ ಹೆಚ್ಚಾಗಿ ಅಪಘಾತಗಳು ಸಂಭವಿಸುತ್ತವೆ.

ಅವಾಮಿ ಲೀಗ್ ಪಕ್ಷ ನಿಷೇಧಿಸಿದ ಬಾಂಗ್ಲಾದೇಶದ ಯೂನಸ್ ಸರ್ಕಾರ



ಢಾಕಾ: ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಶನಿವಾರ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ರಾಜಕೀಯ ಪಕ್ಷವಾದ ಅವಾಮಿ ಲೀಗ್ ಅನ್ನು ನಿಷೇಧಿಸಿದ್ದು, ಕಳೆದ ವರ್ಷ ಅವರನ್ನು ಪದಚ್ಯುತಗೊಳಿಸಲು ಕಾರಣವಾದ ಸಾಮೂಹಿಕ ಪ್ರತಿಭಟನೆಗಳ ಮೇಲೆ ನಡೆಸಿದ ಕ್ರಮಗಳ ಕುರಿತಾದ ವಿಚಾರಣೆಯ ಫಲಿತಾಂಶ ಬರುವವರೆಗೂ ಆ ಪಕ್ಷವನ್ನು ನಿಷೇಧಿಸಿದೆ ಎನ್ನಲಾಗಿದೆ.

ಈ ಸಂಬಂಧ ಅಧಿಕೃತ ಗೆಜೆಟ್ ಅಧಿಸೂಚನೆಯನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು. ಪಕ್ಷವನ್ನು ನಿಷೇಧಿಸುವ ನಿರ್ಧಾರ ತೆಗೆದುಕೊಳ್ಳುವ ಮೊದಲು ಸರ್ಕಾರವು ವಿವಿಧ ರಾಜಕೀಯ ಪಕ್ಷಗಳೊಂದಿಗೆ ಸಂಪರ್ಕ ಸಾಧಿಸಿದೆ ಎಂದು ಯೂನಸ್ ಕಚೇರಿ ತಿಳಿಸಿದೆ.

ಭಯೋತ್ಪಾದಕ ಚಟುವಟಿಕೆಗಳು ಮತ್ತು ಸರ್ವಾಧಿಕಾರಿ ಆಡಳಿತ ನಡೆಸಿದ ಆರೋಪದ ಮೇರೆಗೆ ಅವಾಮಿ ಲೀಗ್ ಪಕ್ಷವನ್ನು ನಿಷೇಧಿಸಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ಹೊಸದಾಗಿ ರಚನೆಯಾದ ನ್ಯಾಷನಲ್ ಸಿಟಿಜನ್ ಪಾರ್ಟಿ (ಎನ್‌ಸಿಪಿ) ಕಾರ್ಯಕರ್ತರು ಗುರುವಾರ ಢಾಕಾದಾದ್ಯಂತ ಪ್ರತಿಭಟನೆ ನಡೆಸಿದ್ದರು. ಇದಾದ ಬಳಿಕ ಪಕ್ಷವನ್ನು ನಿಷೇಧಿಸುವ ಘೋಷಣೆ ಹೊರಬಿದ್ದಿದೆ.

ಪಾಕಿಸ್ತಾನದ ಅಧಿಕಾರಿಯೊಂದಿಗೆ ಸಂಪರ್ಕ: ಪಂಜಾಬ್‌ನಲ್ಲಿ ಇಬ್ಬರ ಬಂಧನ

ಪಂಜಾಬ್: ಮಹತ್ವದ ಬೆಳವಣಿಗೆಯೊಂದರಲ್ಲಿ ನವದೆಹಲಿಯ ಹೈಕಮಿಷನ್‌ನಲ್ಲಿ ನಿಯೋಜಿಸಲಾದ ಪಾಕಿಸ್ತಾನಿ ಅಧಿಕಾರಿಯೊಂದಿಗೆ ಸಂಪರ್ಕ ಹೊಂದಿದ್ದ, ಬೇಹುಗಾರಿಕೆ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳನ್ನು ಮಲೇರ್ಕೋಟ್ಲಾ ಪೊಲೀಸರು ಬಂಧಿಸಿದ್ದಾರೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ) ತಿಳಿಸಿದ್ದಾರೆ.

ವಿಶ್ವಾಸಾರ್ಹ ಗುಪ್ತಚರ ಮಾಹಿತಿಯ ಮೇರೆಗೆ ಕಾರ್ಯನಿರ್ವಹಿಸುತ್ತಾ, ಭಾರತೀಯ ಸೇನೆಯ ಚಲನವಲನಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನದ ನಿರ್ವಾಹಕರಿಗೆ ಸೋರಿಕೆ ಮಾಡಿದ್ದಕ್ಕಾಗಿ ಶಂಕಿತರಲ್ಲಿ ಒಬ್ಬನನ್ನು ಬಂಧಿಸಲಾಯಿತು. ಈ ಬಂಧನದಿಂದ ಲಭ್ಯವಾದ ಮಾಹಿತಿಯ ಆಧಾರದಲ್ಲಿ ಎರಡನೇ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಆರೋಪಿಗಳು ರಹಸ್ಯ ಮಾಹಿತಿಯನ್ನು ರವಾನಿಸಿ ಆನ್‌ಲೈನ್ ವಹಿವಾಟಿನ ಮೂಲಕ ಪಾವತಿಗಳನ್ನು ಪಡೆಯುತ್ತಿದ್ದರು ಎಂದು ಡಿಜಿಪಿ ಹೇಳಿದ್ದಾರೆ. ಆರೋಪಿಗಳಿಬ್ಬರೂ ಹ್ಯಾಂಡ್ಲರ್ ಜೊತೆ ಆಗಾಗ್ಗೆ ಸಂಪರ್ಕದಲ್ಲಿದ್ದರು ಮತ್ತು ಅವರ ಸೂಚನೆಯಂತೆ ಇತರ ಸ್ಥಳೀಯ ಕಾರ್ಯಕರ್ತರಿಗೆ ಹಣವನ್ನು ರವಾನಿಸುವಲ್ಲಿ ಭಾಗಿಯಾಗಿದ್ದರು.

ಚಲಿಸುತ್ತಿದ್ದ ಕಾರಿನಲ್ಲಿ ಅಪ್ರಾಪ್ತೆ ಮೇಲೆ ಸಾಮೂಹಿಕ ಅತ್ಯಾಚಾರ; ರಸ್ತೆಗೆ ತಳ್ಳಿ ಮಹಿಳೆ ಸಾವು

ಬುಲಂದ್‌ಶಹರ್: ಚಲಿಸುತ್ತಿದ್ದ ಕಾರಿನೊಳಗೆ ಅಪ್ರಾಪ್ತೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದು, ಆಕೆಯ ಜೊತೆಗಿದ್ದ ಸ್ನೇಹಿತೆಯನ್ನು ವಾಹನದಿಂದ ಹೊರಗೆ ತಳ್ಳಿದ್ದರಿಂದ ಮೃತಪಟ್ಟಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ ಬುಲಂದ್‌ಶಹರ್‌ನಲ್ಲಿ ಅಪ್ರಾಪ್ತೆ ಕಾರಿನಿಂದ ತಪ್ಪಿಸಿಕೊಂಡು ಅಪರಾಧದ ಬಗ್ಗೆ ವರದಿ ಮಾಡಿದ್ದು, ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ

ಆರೋಪಿಯು ಕೆಲಸ ಕೊಡಿಸುವ ಭರವಸೆ ನೀಡಿ ಮಹಿಳೆ ಮತ್ತು ಅಪ್ರಾಪ್ತೆಯನ್ನು ಗ್ರೇಟರ್ ನೋಯ್ಡಾದಿಂದ ಲಕ್ನೋಗೆ ಕರೆದುಕೊಂಡು ಹೋಗಿದ್ದಾಗಿ ಸಂತ್ರಸ್ತೆ ಪೊಲೀಸರಿಗೆ ತಿಳಿಸಿದ್ದಾಳೆ. ಗ್ರೇಟರ್ ನೋಯ್ಡಾ ನಿವಾಸಿಗಳಾದ ಸಂದೀಪ್, ಅಮಿತ್ ಮತ್ತು ಗಾಜಿಯಾಬಾದ್ ನಿವಾಸಿ ಗೌರವ್ ಎಂದು ಗುರುತಿಸಲಾದ ಆರೋಪಿಗಳು ಮತ್ತು ಅಪ್ರಾಪ್ತೆ ಸೇರಿದಂತೆ ಮಹಿಳೆಯೊಂದಿಗೆ ಕಾರಿನೊಳಗೆ ಜಗಳ ನಡೆದಿದೆ. ಈ ವೇಳೆ ಮೀರತ್ ಜಿಲ್ಲೆಯಲ್ಲಿ ಮಹಿಳೆಯನ್ನು ಕಾರಿನಿಂದ ಹೊರಗೆ ತಳ್ಳಲಾಗಿದೆ. ನಂತರ ಆಕೆ ಸಾವಿಗೀಡಾಗಿದ್ದಾರೆ ಬಳಿಕ ಕಾರಿನಲ್ಲಿದ್ದ ಅಪ್ರಾಪ್ತೆ ಮೇಲೆ ಮೂವರು ಆರೋಪಿಗಳು ಅತ್ಯಾಚಾರ ಎಸಗಿದ್ದಾರೆ. ಆರೋಪಿಗಳ ಕಿಯಾ ಸೆಲ್ಟೋಸ್ ಕಾರನ್ನು ಅಲಿಘರ್–ಬುಲಂದ್‌ಶಹರ್ ಹೆದ್ದಾರಿ ಬಳಿ ತಡೆದು, ಗೌರವ್ ಮತ್ತು ಸಂದೀಪ್ ಕಾಲಿಗೆ ಗುಂಡು ಹಾರಿಸಲಾಗಿದೆ.

ದುಬೈ ಲಾಟರಿಯಲ್ಲಿ 8.5 ಕೋಟಿ ರೂ. ಗಳಿಸಿದ ಕೇರಳ ವ್ಯಕ್ತಿ

ದುಬೈ: ದುಬೈ ಡ್ಯೂಟಿ ಫ್ರೀ ಮಿಲೇನಿಯಮ್ ಮಿಲಿಯನೇರ್ ಡ್ರಾದಲ್ಲಿ ಕೇರಳದ 52 ವರ್ಷದ ವ್ಯಕ್ತಿಯೊಬ್ಬರು 1 ಮಿಲಿಯನ್ ಡಾಲರ್ ಸುಮಾರು 8.5 ಕೋಟಿ ರೂ. ಗೆದ್ದಿದ್ದಾರೆ. ಆರ್ಥಿಕ ಸಂಕಷ್ಟದಿಂದ ನಲುಗಿದ್ದ ಅವರು ಒಮ್ಮೆಲೆ ಕೋಟ್ಯಾಧಿಪತಿಯಾಗಿದ್ದು, ಲಾಟರಿ ಜೀವ ಬದುಕಿಸಿದೆ ಎಂದು ಹೇಳಿದ್ದಾರೆ.

ದುಬೈನಲ್ಲಿ ಕೆಲಸ ಮಾಡುತ್ತಿರುವ ವಿನುಗೋಪಾಲ್ ಮುಲ್ಲಚೇರಿ ಎಂಬುವವರು ಆರ್ಥಿಕ ಸಂಕಷ್ಟದಲ್ಲಿದ್ದರು. 15 ವರ್ಷಗಳಿಂದ ಲಾಟರಿ ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದರು. ಸದ್ಯ ಅವರ ಅದೃಷ್ಟ ಖುಲಾಯಿಸಿದ್ದು, ಭಾರೀ ಸಂಭ್ರಮದಲ್ಲಿ ಇದ್ದಾರೆ. ಮುಲ್ಲಚೇರಿ ಅವರು ಏಪ್ರಿಲ್ 23 ರಂದು ದುಬೈನಿಂದ ಭಾರತಕ್ಕೆ ಬಂದು ಕುಟುಂಬಸ್ಥರನ್ನು ಭೇಟಿ ಮಾಡಿ ಹಿಂತಿರುಗುವಾಗ ಟಿಕೆಟ್ ಖರೀದಿಸಿದ್ದರು. ಅವರ ನಿರಂತರ ಪ್ರಯತ್ನಕ್ಕೆ ತಕ್ಕ ಫಲ ನೀಡಿತು. ದುಬೈ ಡ್ಯೂಟಿ ಫ್ರೀ ಮಿಲೇನಿಯಮ್ ಮಿಲಿಯನೇರ್ ಡ್ರಾದ 500 ನೇ ವಿಜೇತರಾದರು.

ಅಜ್ಮಾನ್ ನಿವಾಸಿಯಾಗಿರುವ ಅವರು ಐಟಿ ಸಪೋರ್ಟ್ ತಜ್ಞರಾಗಿ ಕೆಲಸ ಮಾಡುತ್ತಿದ್ದಾರೆ. ಜಾಕ್ಪಾಟ್ ಗೆದ್ದಿದ್ದು ದೊಡ್ಡ ಭಾರವನ್ನು ಇಳಿಸಿದಂತೆ ಭಾಸವಾಗುತ್ತಿದೆ. ಈ ಗೆಲುವು ಕಷ್ಟಕರ ಅಧ್ಯಾಯದ ಅಂತ್ಯ ಮತ್ತು ಭರವಸೆ ಹಾಗೂ ಸಂತೋಷದಿಂದ ತುಂಬಿದ ಹೊಸ ಅಧ್ಯಾಯದ ಆರಂಭವಾಗಿದೆ ಎಂದು ಮುಲ್ಲಚೇರಿ ಹೇಳಿದ್ದಾರೆ.

ಕೂರ್ಗ್ ಚಾಲೆಂಜ್ ರ್‍ಯಾಲಿಯಲ್ಲಿ ದೇಶದ ವಿವಿಧ ಕಡೆಗಳ ಸ್ಪರ್ಧಿಗಳು ಭಾಗಿ

ಗೋಣಿಕೊಪ್ಪ: ಕುಂದ ಗ್ರಾಮದ ರತನ್ ಕಾಫಿ ಎಸ್ಟೇಟ್‌ನಲ್ಲಿ ನಡೆದ ಎರಡು ದಿನಗಳ ರಾಷ್ಟ್ರಮಟ್ಟದ ಕೂರ್ಗ್ ಚಾಲೆಂಜ್ 4x4 ರ್‍ಯಾಲಿಯಲ್ಲಿ ದೇಶದ ವಿವಿಧ ಕಡೆಗಳಿಂದ ಸ್ಪರ್ಧಿಗಳು ಭಾಗವಹಿಸಿದ್ದರು.



ರಾಷ್ಟ್ರಮಟ್ಟದ ಕೂರ್ಗ್ ಚಾಲೆಂಜ್‌ನಲ್ಲಿ ಜೀಪಿನ ಸಾಹಸಮಯ ನೋಟ.

ಫಲಿತಾಂಶ: ಥಾರ್ ಕ್ಲಾಸ್ ವಿಭಾಗದಲ್ಲಿ ಗಿಬ್ರನ್ ಹಾಗೂ ಆಂಟೋ ತಂಡ ಪ್ರಥಮ, ವಿನಯ್ ಚಂದ್ರ-ಜಾರ್ಜ್ ತಂಡ ದ್ವಿತೀಯ, ಕಾರ್ತಿಕ್ ಕಾರ್ಯಪ್ಪ-ದೇವಯ್ಯ ತೃತೀಯ ಸ್ಥಾನ ಪಡೆದರು. ಜಿಮ್ನಿ ವಿಭಾಗದಲ್ಲಿ ಸಾಬು ಜೇವಿಯರ್-ಚೇತನ್ ಚೆಂಗಪ್ಪ (ಪ್ರ), ಗೌಡ-ಮನೀಶ್ (ದ್ವಿ), ಧೀರಜ್-ಸಾವನ್ ಸತ್ಯನಾರಾಯಣ(ತೃ), ಎಸ್‌ಯುವಿ ವಿಭಾಗದಲ್ಲಿ ಫಾಯಿಸ್-ಹಡಿ (ಪ್ರ), ಶ್ರೀಜೇಶ್-ಜೋಗನ್(ದ್ವಿ), ಸಾಬು ಜೇವಿಯರ್-ಚಂದ್ರಮೌಳಿ (ತೃ), ಮಹಿಳಾ ವಿಭಾಗದಲ್ಲಿ ಮೀನಾ-ಆಯುಷ್ (ಪ್ರ), ವಿದ್ಯಾ-ದರ್ಪಣ್(ದ್ವಿ), ಸ್ವೀಕೃತಿ-ನಾರ್ತನ್ (ತೃ), ಎಕ್ಸ್ಟ್ರೀಮ್ ಡಿಸೇಲ್ ವಿಭಾಗದಲ್ಲಿ ಹಲ್ವಿನ್ ಅಪ್ಪಣ್ಣ-ಶಮಂತ್(ಪ್ರ),ಎಂ.ಪಿ. ಬೋಪಣ್ಣ-ಸೌರಭ್ (ದ್ವಿ), ನಿಜಮ್-ರಾಜಿವ್ ಲಾಲ್ (ತೃ), ಎಕ್ಸ್ಟ್ರೀಮ್ ಪೆಟ್ರೋಲ್ ವಿಭಾಗದಲ್ಲಿ ವಿನಯ್-ವಿಕ್ರಂ (ಪ್ರ), ಮೆಹರೂಫ್-ನಿಶಾಂತ್ (ದ್ವಿ), ಜಾಫರ್ ಸಾದಿಕ್-ಶೆಬಿ (ತೃ),ಎಕ್ಸ್ಟ್ರೀಮ್ ಓಪನ್ ವಿಭಾಗದಲ್ಲಿ ನಿಜಾಮ್-ರಾಜಿವ್ ಲಾಲ್ (ಪ್ರ), ವಿಶಾಕ್-ವಾರ್ತನ್ (ದ್ವಿ), ಸನೋಜ್-ಸಂಜಯ್ (ತೃ) ಸ್ಥಾನ ಪಡೆದರು.

2ನೇ ದಿನ ನಡೆದ ಎನ್‌ಡಿಎಂಎಸ್ ವಿಭಾಗದಲ್ಲಿ ಅಮಲ್ ಚಾಕೋ-ಮಹಮದ್ ನಿಜಾಮ್ (ಪ್ರ), ಜಸ್ಟಿನ್ ಜೋಶ್-ದೀಫೋ ಪೌಲ್(ದ್ವಿ), ಮಹಮದ್ ಅಮೀನ್-ಮಹೊಮದ್ ನಿಜಾಮ್(ತೃ), ಮಾಡಿಫೈಡ್ ಡಿಸೆಲ್ ವಿಭಾಗದಲ್ಲಿ ಡಾ.ಫಾಹದ್-ರಾಜಿವ್ ಲಾಲ್ (ಪ್ರ), ಹಶೀಂ-ಅರ್ಶದ್ (ದ್ವಿ), ವಿಷ್ಣು-ರಾಹುಲ್ (ತೃ), ಮಾಡಿಫೈಡ್ ಓಪನ್ ವಿಭಾಗದಲ್ಲಿ ಡಾ.ಫಾಹದ್-ರಾಜಿವ್ ಲಾಲ್ (ಪ್ರ), ಚೇತನ್ ಚೆಂಗಪ್ಪ ತಂಡ (ದ್ವಿ), ನಾರ್ಥನ್-ರಾಜಿವ್ ಲಾಲ್ (ತೃ), ಮಾಡಿಫೈಡ್ ಪೆಟ್ರೋಲ್ ವಿಭಾಗದಲ್ಲಿ ವಿಷ್ಣು-ರಾಹುಲ್(ಪ್ರ), ಗೋಕುಲ್ ಸಂತೋಷ್-ರಾಹುಲ್(ದ್ವಿ), ಅನೀಸ್ ಬೈರಮುಂಡಿ-ಅನೀಜ್ (ತೃ) ಸ್ಥಾನ ಪಡೆದರು.

ಹಾರಂಗಿ ಪ್ರವಾಸಿ ತಾಣ ಬಂದ್
ನಿರಾಶೆಯಲ್ಲಿ ಪ್ರವಾಸಿಗರು

ಮಡಿಕೇರಿ,ಮೇ 11– ಪಾಕಿಸ್ತಾನದ ವಿರುದ್ದ ಕೆಲ ದಿನಗಳಿಂದ ಯುದ್ದದ ಕಾರ್ಮೋಡ ಮುಂದುವರೆದಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಕುಶಾಲನಗರ ತಾಲೂಕಿನ ಹಾರಂಗಿ ಪ್ರವಾಸಿ ತಾಣವನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.



ಮುಚ್ಚಲಾಗಿರುವ ಗೇಟಿನ ಮುಂದೆ ಫೋಟೋ ತೆಗೆದುಕೊಳ್ಳುತ್ತಿರುವ ಪ್ರವಾಸಿಗರು.

ಪ್ರವಾಸಿ ಕೇಂದ್ರದ ಬಳಿ ತಾಂತ್ರಿಕ ದೋಷದ ಕಾರಣದಿಂದ ಅನಿರ್ದಿಷ್ಟ ಕಾಲದವರೆಗೆ ಸಾರ್ವಜನಿಕರಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂದು ಬೋರ್ಡ್ ಹಾಕಲಾಗಿದೆ. ಜಲಾಶಯದ ಭದ್ರತೆಯ ದೃಷ್ಟಿಯಿಂದ ಶಸ್ತ್ರಸಜ್ಜಿತ ಬಿಗಿ ಪೊಲೀಸ್ ಸಿಬ್ಬಂದಿಗಳನ್ನು ಈಗಾಗಲೇ ನಿಯೋಜಿಸಲಾಗಿದೆ.

ಬೇಸಿಗೆ ರಜೆ ಹಾಗೂ ವಾರಾಂತ್ಯದ ಹಿನ್ನೆಲೆಯಲ್ಲಿ ಜಿಲ್ಲೆಗೆ ಪ್ರವಾಸಿಗರ ದಂಡೇ ಹರಿದು ಬರುತ್ತಿದೆ. ಹಾರಂಗಿ ಜಲಾಶಯದ ಪ್ರವಾಸಿ ಕೇಂದ್ರಕ್ಕೆ ನೂರಾರು ಸಂಖ್ಯೆಯ ಪ್ರವಾಸಿಗರು ಮಾಹಿತಿ ಇಲ್ಲದೇ ಆಗಮಿಸಿದ್ದು, ಪ್ರವಾಸಿ ತಾಣವನ್ನು ದಿಢೀರನೆ ಮುಚ್ಚಿರುವ ಹಿನ್ನೆಲೆಯಲ್ಲಿ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ನಿರಾಶೆಯಿಂದ ಹಿಂದಿರುಗುತ್ತಿದ್ದಾರೆ. ಕೆಲವು ಪ್ರವಾಸಿಗರು ಮುಚ್ಚಲಾಗಿರುವ ಗೇಟಿನ ಮುಂದೆ ಮೊಬೈಲ್‌ನಲ್ಲಿ ತಮ್ಮ ಕುಟುಂಬದ ಫೋಟೋ ಹಾಗೂ ಸೆಲ್ಫಿ ತೆಗೆದುಕೊಳ್ಳುವ ಮೂಲಕ ಬೇಸರದ ನಡುವೆಯೂ ಸುಂದರ ಕ್ಷಣಗಳನ್ನು ಸೆರೆ ಹಿಡಿದುಕೊಂಡು ಮರಳಿದರು.

ರಾಜ್ಯ ಸರ್ಕಾರ ಪ್ರಮುಖ ಪ್ರವಾಸಿ ತಾಣಗಳನ್ನು ಭದ್ರತೆ ದೃಷ್ಟಿಯಿಂದ ಮುಚ್ಚಿ ಬಿಗಿ ಭದ್ರತೆ ಒದಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟುನಿಟ್ಟಿನ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಪ್ರವಾಸಿ ಕೇಂದ್ರಗಳನ್ನು ಮುಚ್ಚಲಾಗಿದೆ. ರಾಜ್ಯ ಸರ್ಕಾರದ ಸೂಚನೆಯಂತೆ ಹಾರಂಗಿ ಅಣೆಕಟ್ಟೆಯ ಸುತ್ತ ಮುತ್ತಲಿನ ಪ್ರದೇಶದಲ್ಲಿ ಹೆಚ್ಚಿನ ಭದ್ರತೆ ಒದಗಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರವಾಸಿಗರಿಗೆ ಹಾರಂಗಿ ಅಣೆಕಟ್ಟೆಯ ಮುಂಭಾಗದ ಬೃಂದಾವನ ಹಾಗೂ ಕಾರಂಜಿಯ ವೀಕ್ಷಣೆಗೆ ತಾತ್ಕಾಲಿಕವಾಗಿ ನಿರ್ಬಂಧ ವಿಧಿಸಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಿಎನ್‌ಸಿಯಿಂದ ಇಂದು ಮಾನವ ಸರಪಳಿ

ಮಡಿಕೇರಿ: ರಾಷ್ಟ್ರೀಯ ಜನಗಣತಿ ಮತ್ತು ಜಾತಿಗಣತಿಯ ಸಂದರ್ಭ ಕೊಡವ ಬುಡಕಟ್ಟು ಜನಾಂಗಕ್ಕೆ ಪ್ರತ್ಯೇಕ ಕೋಡ್ ಮತ್ತು ಕಾಲಂ ಅಳವಡಿಸಬೇಕು, ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಮೇ 12ರಂದು ಪಾಡಿನಾಡ್‌ನ ಕಕ್ಕಬೆಯಲ್ಲಿ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಬೆಳಿಗ್ಗೆ 10.30 ಗಂಟೆಗೆ ಕಕ್ಕಬೆಯಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತ್ಯೇಕ ಕಾಲಮ್ ಮತ್ತು ಕೋಡ್‌ನಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ವಿವರಿಸಲಾಗುವುದು ಕೊಡವ ಸಮುದಾಯದ ಹಕ್ಕೊತ್ತಾಯಗಳಿಗೆ ಮತ್ತು ಜಾಗೃತಿ ಮೂಡಿಸುವುಕ್ಕಾಗಿ ನಡೆಯುತ್ತಿದ್ದು, ಕಕ್ಕಬ್ಬೆ ಭಾಗದ ಕೊಡವ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಎನ್.ಯು. ನಾಚಪ್ಪ ಅವರು ಮನವಿ ಮಾಡಿದ್ದಾರೆ.

ಸೈನಿಕರ ರಕ್ಷಣೆಗಾಗಿ ವಿಶೇಷ ಪೂಜೆ



ಸಿದ್ದಾಪುರ,ಮೇ.11–ದೇಶ ರಕ್ಷಣೆಯಲ್ಲಿ ತೊಡಗಿರುವ ಭಾರತೀಯ ಸೈನಿಕರ ಪರವಾಗಿ ಆಟೋ ಚಾಲಕರ ಸಂಘದ ನೇತೃತ್ವದಲ್ಲಿ ಪಾಲಿಬೆಟ್ಟದ ಗಣಪತಿ ದೇವಸ್ಥಾನ ಹಾಗೂ ಲೂರ್ಡ್ಸ್ ಮಾತಾ ಚರ್ಚ್ ಮತ್ತು ಆರ್ಕಾಡ್ ಬಾಬಾ ದರ್ಗಾದಲ್ಲಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ನೆರವೇರಿಸಲಾಯಿತು.

ಜಿಲ್ಲಾ ಪಂಚಾಯಿತಿ ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಮುಖಂಡ ವಿಜು ಸುಬ್ರಮಣಿ ಮಾತನಾಡಿ, ಉಗ್ರರನ್ನು ಸಂಪೂರ್ಣ ಮಟ್ಟ ಹಾಕಲು ಭಾರತದ ಸೈನಿಕರಿಗೆ ಬೆಂಬಲವಾಗಿ ನಿಲ್ಲೋಣ ಎಂದರು.

ಸಂಘದ ಅಧ್ಯಕ್ಷ ದೂಜಾ ವೇಗಸ್, ಉಪಾಧ್ಯಕ್ಷ ರಾಜಪ್ಪ, ಚರ್ಚ್ ಫಾದರ್ ಮರಿಯ ಜಾರ್ಜ್, ತಮಿಳು ಸಂಘದ ಜಿಲ್ಲಾಧ್ಯಕ್ಷ ಮೈಕಲ್, ತಾಲೂಕು ಭಾಜಪ ಸಮಿತಿ ಸದಸ್ಯ ಪ್ರಶಾದ್ ಕುಮಾರ್, ಆಟೋ ಚಾಲಕ ಸಂಘದ ಕ್ರೀಡಾ ಸಮಿತಿಯ ಅಧ್ಯಕ್ಷ ಪವನ್ ಕುಮಾರ್ ಹಾಜರಿದ್ದರು.

ಅರೆ ಭಾಷೆ ಸಂಸ್ಕೃತಿಯಿಂದ ಮೇ 17 ಐನ್ ಮನೆ ಜಂಬರ

ನಾಪೋಕ್ಲು: ಕರ್ನಾಟಕ ಅರೆ ಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ವತಿಯಿಂದ ಮಕ್ಕಂದೂರು ಗ್ರಾಮದ ಕುಂಭ ಗೌಡನ ಐನ್ ಮನೆಯಲ್ಲಿ ಮೇ 17 ಐನ್ ಮನೆ ಜಂಬರ ಕಾರ್ಯಕ್ರಮ ಆಯೋಜಿಸಲಾಗಿದೆ.



ಮಾವಜಿ

ಸಂಸ್ಕೃತಿ ಸರಣಿ ಕಾರ್ಯಕ್ರಮದ ಭಾಗವಾಗಿ ನಡೆಯುತ್ತಿರುವ ಎರಡನೇ ಕಾರ್ಯಕ್ರಮ ಇದಾಗಿದ್ದು ಹಿಂದೆ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಕುಡೇಕಲ್ಲಿನ ಐನ್ಮನೆಯಲ್ಲಿ ಪ್ರಥಮ ಕಾರ್ಯಕ್ರಮ ಜರುಗಿತ್ತು. ಕಾರ್ಯಕ್ರಮದಲ್ಲಿ ಕುಂಭ ಗೌಡರಿಗೆ ಲಿಂಗರಾಜರು ಕೊಡ ಮಾಡಿದ್ದ ನಿರೂಪದ ಅನಾವರಣ ಅಕಾಡೆಮಿ ಪ್ರಕಟಿತ ಪುಸ್ತಕಗಳ ಬಿಡುಗಡೆ ಅರೆ ಭಾಷೆ ಸುಪ್ರಭಾತದ ಧ್ವನಿ ಸುರುಳಿ ಬಿಡುಗಡೆ ಕುಂಭ ಗೌಡನ ಕುಟುಂಬದ ಲಾಂಛನ ಬಿಡುಗಡೆ ಕುಂಭ ಗೌಡನ ಕುಟುಂಬದ ಸಾಧಕರಿಗೆ ಸನ್ಮಾನ ಹಾಗೂ ಕ್ರೀಡಾಕೂಟ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿವೆ.

ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ವಹಿಸಲಿದ್ದಾರೆ. ಕುಂಭ ಗೌಡನ ಕುಟುಂಬದ ಪಟ್ಟೆದಾರ ಕೆ.ಕೆ. ಓಂಕಾರಪ್ಪ ಉದ್ಘಾಟಿಸಲಿದ್ದಾರೆ, ಶಾಸಕ ಡಾ. ಮಂತರ್ ಗೌಡ ಸಾಧಕರನ್ನು ಸನ್ಮಾನಿಸಲಿದ್ದಾರೆ. ಮಾಜಿ ಶಾಸಕಿ ವೀಣಾ ಅಚ್ಚಯ್ಯ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಸಾಹಿತಿ ಎ.ಕೆ. ಹಿಮಕರ ಅರೆಭಾಷೆ ಕುಟುಂಬಗಳ ಐನ್ ಮನೆ ಹಾಗೂ ಕುಂಭಗೌಡನ ಅರವಿಂದ್ ಮಾಚಯ್ಯ ಕುಂಭ ಗೌಡನ ಐನ್ ಮನೆ ನಡೆದು ಬಂದ ದಾರಿ ಕುರಿತು ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಕ್ಕಂದೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ ಎನ್.ರಮೇಶ್, ಮಕ್ಕಂದೂರು, ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಶಾಂತೆಂಡ ರವಿ ಕುಶಾಲಪ್ಪ, ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ, ಕೊಡಗು ಏಲಕ್ಕಿ ಮಾರಾಟ ಅಬಕಾರಿ ಇಲಾಖೆ ಉಪ ಆಯುಕ್ತ ಸುಮಿತ ಕುಂಭ ಗೌಡನ, ಕುಶಾಲಪ್ಪ ನಂಗಾರು, ಪ್ರಗತಿಪರ ಕೃಷಿಕರಾದ ಇಂದಿರಾ ದೇವಿ ಪ್ರಸಾದ್ ಸಂಪಾಜೆ ಮತ್ತು ಸಂಚಾಲಕರು, ನಿರ್ದೇಶಕ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಡಗಿನ ಕಡೆ ಪ್ರವಾಸಿಗರ ದಂಡು: ವಾಹನಗಳಿಂದ ಟ್ರಾಫಿಕ್ ಜಾಮ್



ಬಿಸಿಲಿನ ತಾಪಕ್ಕೆ ಕಾವೇರಿ ನದಿ ನೀರಿನಲ್ಲಿ ಆನೆಯೊಂದು ಮಕ್ಕಳಿಗೆ ನೀರೆಚುತ್ತಿರುವುದು.

ಸಿದ್ದಾಪುರ: ಕರ್ನಾಟಕದ ಕಾಶ್ಮೀರ ಎಂದೇ ಹೆಸರಾದ ಕೊಡಗಿನ ಕಡೆ ಪ್ರವಾಸಿಗರು ಮುಖ ಮಾಡತೊಡಗಿದ್ದಾರೆ. ಇಲ್ಲಿನ ಪ್ರಮುಖ ಪ್ರವಾಸಿ ತಾಣಗಳಾದ ಕುಶಾಲನಗರದ ನಿಸರ್ಗಧಾಮ, ದುಬಾರೆ, ಮಡಿಕೇರಿ ರಾಜಸೀಟ್, ಅಬ್ಬಿಫಾಲ್ಸ್ ಸೇರಿದಂತೆ ಧಾರ್ಮಿಕ ಸ್ಥಳಗಳಾದ ತಲಕಾವೇರಿ, ಭಾಗಮಂಡಲ, ಓಂಕಾರೇಶ್ವರ ದೇವಸ್ಥಾನಗಳಲ್ಲಿ ಪ್ರವಾಸಿಗರು ಹಾಗೂ ಭಕ್ತಾದಿಗಳು ಆಗಮಿಸುತ್ತಿದ್ದಾರೆ.

ದುಬಾರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಪ್ರವಾಸಿಗರು ಬಿಸಿಲಿನ ತಾಪಕ್ಕೆ ಕಾವೇರಿ ನದಿ ನೀರಿನಲ್ಲಿ ಜಲ ಕ್ರೀಡೆ ಆಡಿ ಆನಂದಿಸುತ್ತಿದ್ದಾರೆ. ದುಬಾರೆ ಆನೆ ಶಿಬಿರಕ್ಕೂ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಭೇಟಿ ನೀಡಿ ಸಂತಸಪಡುತ್ತಿದ್ದಾರೆ. ಕಾಶ್ಮೀರಕ್ಕೆ ಪ್ರವಾಸಕ್ಕೆ ಹೋಗಲು ತಯಾರಿ ಮಾಡಿಕೊಂಡಿದ್ದವರು ಈಗ ನಿಧಾನವಾಗಿ ಕರ್ನಾಟಕದ ಕಾಶ್ಮೀರ ಕೊಡಗಿನತ್ತ ಮುಖ ಮಾಡ ತೊಡಗಿದ್ದಾರೆ. ಇದರಿಂದಾಗಿ ನಗರ, ಪಟ್ಟಣ ಹೆದ್ದಾರಿಗಳಲ್ಲಿ ಪ್ರವಾಸಿ ವಾಹನಗಳಿಂದ ಟ್ರಾಫಿಕ್ ಜಾಮ್ ಸಮಸ್ಯೆ ಕಂಡು ಬರುತ್ತಿದೆ.

ಕೊಡಗು ಪ್ರಮುಖ ಪ್ರವಾಸಿ ತಾಣವಾಗಿ ಮಾರ್ಪಟ್ಟು ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುತ್ತದೆ. ಕಾವೇರಿ ನದಿ ತೀರದ ತಾಣಗಳು, ಬೆಟ್ಟ-ಗುಡ್ಡಗಳ ಸಾಲು, ಅರಣ್ಯ ಪ್ರದೇಶ, ವನ್ಯಜೀವಿಗಳ ಸಫಾರಿ, ಕಾಫಿ ಸೇರಿದಂತೆ ಮಸಾಲೆ ಹಾಗೂ ಇತರೆ ಉತ್ಪನ್ನಗಳ ಮಾರಾಟದಿಂದ ಕೊಡಗು ಪ್ರವಾಸಿಗರ ಜನಪ್ರಿಯ ತಾಣವಾಗಿ ಮಾರ್ಪಟ್ಟಿದೆ. ಕೊಡಗಿನ ತಂಪು ಹವಾಮಾನ ವಿಶೇಷವಾಗಿ ಪ್ರವಾಸಿಗರನ್ನು ಸೆಳೆಯುತ್ತಿದೆ. ಗೂಗಲ್‌ನಲ್ಲಿ ಅತ್ಯಂತ ಹೆಚ್ಚು ಹುಡುಕಾಟ ನಡೆಸಿದ ಪ್ರವಾಸಿ ತಾಣಗಳ ಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ.

ಮೇ 17, ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆ

ಮಡಿಕೇರಿ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮ ಸೇರಿದಂತೆ) ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯು ಸಣ್ಣ ನೀರಾವರಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಅಧ್ಯಕ್ಷತೆಯಲ್ಲಿ ಮೇ 17ರ ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ತಿಳಿಸಿದ್ದಾರೆ.

ವಿಜೃಂಭಣೆಯ ಚಾಮುಂಡಿ ತೆರೆ ಮಹೋತ್ಸವ



ಅಚ್ಚಪಂಡ ಕುಟುಂಬಸ್ಥರ ಕೈಮಾಡದಲ್ಲಿ ಚಾಮುಂಡಿ ತೆರೆ ಮಹೋತ್ಸವ ನಡೆಯಿತು.

ವಿರಾಜಪೇಟೆ: ತಾಲೂಕಿನ ಹೆಗ್ಗಳ ಗ್ರಾಮದ ಅಚ್ಚಪಂಡ ಕುಟುಂಬಸ್ಥರ ಕೈಮಾಡದಲ್ಲಿ ಪ್ರತಿ ವರ್ಷ ನಡೆಸಿಕೊಂಡು ಬರುತ್ತಿರುವ ಗುರುಕಾರಣ ಮತ್ತು ಚಾಮುಂಡಿ (ಕೋಲ) ತೆರೆ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮೊದಲ ದಿನ ನಡೆದ ತೆರೆ ಮಹೋತ್ಸವದಲ್ಲಿ ಪಟ್ಟಣಿ ನಂತರ ಮೇಲೇರಿ ಇಡುವುದು ನಂತರ ಮಾದೇರಪ್ಪ ತೋತ ಹಾಗು ಅಜ್ಜಪ್ಪ ಮತ್ತು ಕುಟ್ಟಿಚಾತ ತೆರೆ ನಡೆದ ಬಳಿಕ ಮಧ್ಯಾಹ್ನ-ರಾತ್ರಿ ದಾನಿಗಳಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ನಿನ್ನೆ ಮಧ್ಯಾಹ್ನ ಗುಳಿಗನ ತೆರೆ, ಚೌಂಡಿ ತೆರೆ ನಂತರ ಸಂಜೆ ಕುನ್ನಮ್ಮ ಚೌಂಡಿ, ಅಜ್ಜಪ್ಪ ತೆರೆ ಬಳಿಕ ಪೊಟ್ಟತೆರೆ ಮೇಲೇರಿ ಬಿಳೋದು, ನಂತರ ಸಾಸ್ತಾವ್ರ (ಶ್ರೀ ಅಯ್ಯಪ್ಪ) ಭನಕ್ಕೆ ತೆರಳಿ ಪೂಜೆ ಸಲ್ಲಿಸಿದ ನಂತರ ಸಾಂಪ್ರದಾಯಕವಾಗಿ ಗ್ರಾಮಸ್ಥರು ಸೇರಿ ದೇವರ ಮನೆ, ಐನ್ ಮನೆಯಲ್ಲಿ ದೇವರಿಗೆ ಪೂಜೆ ಸಲ್ಲಿಸಿದರು. ತೆರೆ ಮಹೋತ್ಸವದಲ್ಲಿ ಉರು ತಕ್ಕರು, ದೇವತಕ್ಕರು, ಉರಿನ ತಕ್ಕ ಮುಖ್ಯಸ್ಥರು, ಗ್ರಾಮದ ಹಿರಿಯರು, ದೂರದ ಊರುಗಳಿಂದಲೂ ಭಕ್ತಾದಿಗಳು ಬಂದಿದ್ದರು.

ಸಮೀಕ್ಷೆಯಲ್ಲಿ ಸರಿಯಾದ ಮಾಹಿತಿ ನೀಡಿ: ಶಾಸಕ



ಚಂಗಚಹಳ್ಳಿ ಗ್ರಾಮದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕ್ರಮವನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಉದ್ಘಾಟಿಸಿದರು.

ಯಳಂದೂರು, ಮೇ 11–ಪರಿಶಿಷ್ಟ ಜಾತಿಯ ಬಲಗೈನವರು ಜಾತಿ ಗಣತಿಯಲ್ಲಿ ಹೊಲೆಯ ಎಂತಲೇ ತಮ್ಮ ಜಾತಿಯನ್ನು ನಮೂದಿಸಿ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಸಲಹೆ ನೀಡಿದರು.

ತಾಲೂಕಿನ ಚಂಗಚಹಳ್ಳಿ ಗ್ರಾಮದಲ್ಲಿ ರಾತ್ರಿ ಡಾ. ಬಿ.ಆರ್. ಅಂಬೇಡ್ಕರ್ ಯುವಕರ ಸಂಘ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ಆಂತರಿಕ ಸಮೀಕ್ಷೆ ನಡೆಯುತ್ತಿದೆ. ಈ ಸಮೀಕ್ಷೆಯಲ್ಲಿ ಅನೇಕ ಕಾಲಂಗಳಿರುತ್ತವೆ ಇವರಿಗೆ ನಿಖರ ಮಾಹಿತಿ ನೀಡಬೇಕು. ಜಾತಿ ಕಲಂನಲ್ಲಿ ನಮ್ಮವರು ಹೊಲೆಯ ಎಂತಲೇ ನಮೂದಿಸಬೇಕು. ಸಮೀಕ್ಷೆದಾರರಿಗೆ ಯಾವುದೇ ಗೊಂದಲಗಳಿಗೂ ಆಸ್ಪದ ನೀಡಬಾರದು. ಇದರಿಂದ ನಮ್ಮ ಜಾತಿಯ ಸಂಖ್ಯೆಯ ನಿಖರ ಮಾಹಿತಿ ಲಭಿಸುತ್ತದೆ. ಇದರಿಂದ ನಮ್ಮ ಮುಂದಿನ ಪೀಳಿಗೆಗೆ ಮೀಸಲಿನಲ್ಲಿ ಅನ್ಯಾಯವಾಗುವುದಿಲ್ಲ ಎಂದರು.

ಗ್ರಾಮದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಮುಂದಿನ ಶಾಸಕರ ನಿಧಿಯಲ್ಲಿ 25 ಲಕ್ಷ ರೂ. ಅನುದಾನ ನೀಡಲಾಗುವುದು. ಇಲ್ಲಿಗೆ ಸಮರ್ಪಕ ರಸ್ತೆ ನಿರ್ಮಾಣವಾದಾಗ ಕೆಎಸ್ಆರ್‌ಟಿಸಿ ಬಸ್ ಸಂಪರ್ಕ ಕೊಡಿಸಲಾಗುವುದು. ಬಸ್ ನಿಲ್ದಾಣ ಹಾಗೂ ಚರಂಡಿ ಕಾಮಗಾರಿಗೆ ಶೀಘ್ರದಲ್ಲೇ ಭೂಮಿ ಪೂಜೆ ನೆರವೇರಿಸಲಾಗುವುದು ಎಂದರು.

ಮೈಸೂರಿನ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ನಾವು ಶಿಕ್ಷಣ ಕೈಗಾರಿಕೆ, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಸಾಧನೆ ಸಾಧಿಸಬೇಕು. ಬ್ರಾಹ್ಮಣ ಸಂಸ್ಕೃತಿಯನ್ನು ಧಿಕ್ಕರಿಸುವ ಕಾರ್ಯಕ್ರಮಗಳು ನಡೆಯಬೇಕು. ಬುದ್ಧನೆಡೆಗೆ ನಾವು ಸಾಗಬೇಕು. ಪಂಚಶೀಲಗಳ ಪಾಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿ ಅರುಳ್ ಕುಮಾರ್ ಮಾತನಾಡಿ, ಅಂಬೇಡ್ಕರ್ ಸಂವಿಧಾನದ ಚರ್ಚೆಯಲ್ಲಿ ಭಾಗವಹಿಸಿ ತಾಂತ್ರಿಕ ವಿಷಯಗಳ ಕಲಿಕೆಗೆ ಹೆಚ್ಚಿನ ಒತ್ತು ನೀಡಬೇಕು. ಎಐ ತಂತ್ರಜ್ಞಾನದ ಕಲಿಕೆಯನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗ್ರಾಮದ ಸಾಧಕರನ್ನು ಸನ್ಮಾನಿಸಲಾಯಿತು. ನಿವೃತ್ತ ತಹಸೀಲ್ದಾರ್ ಸಿ.ಮಹಾದೇವಯ್ಯ, ಪ್ರಾಂಶುಪಾಲ ಎಸ್. ವಿಷಕಂಠಮೂರ್ತಿ ಮಾತನಾಡಿದರು. ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ವಿ. ಚಂದ್ರು, ಅಂಬಳೆ ಗ್ರಾಪಂ ಅಧ್ಯಕ್ಷ ಎಲ್. ನವೀನ್, ಗ್ರಾಪಂ ಸದಸ್ಯೆ ರಾಣಿಲಿಂಗರಾಜು, ಆರ್. ಮಹದೇವ್, ರಾಜಶೇಖರ್, ರವಿ, ಮಹದೇವಸ್ವಾಮಿ ಶಿವನಂಜೇಗೌಡ, ಸಿ.ಸ್ವಾಮಿ, ಜಿ.ಶಿವಣ್ಣ, ಸಿ.ರಮೇಶ್‌ಕುಮಾರ್, ಪಿ.ಮಧು, ಸಿ.ನಾಗರಾಜು, ಶಿವಕುಮಾರ್, ಯೋಗೇಂದ್ರ, ವಿ.ಶ್ರೀನಿವಾಸ್, ಮಹದೇವಯ್ಯ ಇದ್ದರು.

ಪ್ರಧಾನಿ ಮೋದಿಗೆ ಮಠಾಧೀಶರ ಬೆಂಬಲ

ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ

ಚಾಮರಾಜನಗರ, ಮೇ 11– ಸಕಲ ರೀತಿಯಲ್ಲೂ ಪ್ರಧಾನಿ ಮೋದಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಮರಿಯಾಲ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತಮಠದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮೂರು-ನಾಲ್ಕು ದಿನಗಳಿಂದ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಆರಂಭಗೊಂಡು ಅನೇಕ ಮುಗ್ಧ ಜನರ ಸಾವು ನೋವು ಉಂಟಾಗಿದೆ. ಭಾರತದವರಾಗಲಿ ಪಾಕಿಸ್ತಾನದ ವರಾಗಲಿ ಮುಗ್ಧ ಜನರ ಸಾವು-ನೋವು ನಮಗೆ ನೋವುಂಟು ಮಾಡುವಂತಹ ಘಟನೆಗಳಾಗಿವೆ ಎಂದರು.

ನಾವು ಯಾವಾಗಲೂ ಜನತೆ ಶಾಂತಿಯಿಂದ ಬಾಳಬೇಕು ಎಂದು ಹಾರೈಸುತ್ತೇವೆ ನರೇಂದ್ರ ಮೋದಿಯವರು ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿದ್ದು ಸದಾ ದೇಶದ ಅಭಿವೃದ್ಧಿ ಹಾಗೂ ಒಳಿತನ್ನು ಬಯಸುತ್ತಿರುವ ಮಹಾ ನಾಯಕರಾಗಿದ್ದಾರೆ. ಪಾಕಿಸ್ತಾನದಿಂದ ಬಂದ ಉಗ್ರವಾದಿಗಳು ಮುಗ್ಧ ಭಾರತೀಯರನ್ನು ಧರ್ಮದ ನೆಪದಲ್ಲಿ ಕೊಂದು ಹಾಕಿರುವುದನ್ನು ನಾವು ಖಂಡಿಸುತ್ತೇವೆ ಹಾಗೂ ಈ ಬಗ್ಗೆ ಸೇಡು ತೀರಿಸಿಕೊಳ್ಳಲು ಹೊರಟಿರುವ ಭಾರತ ದೇಶದ ಪ್ರಧಾನಿ ಮೋದಿ ಅವರಿಗೆ ನಾವು ಆಶೀರ್ವಾದ, ಬೆಂಬಲ ನೀಡುತ್ತೇವೆ ಎಂದರು.



ನಗರದ ಸಿದ್ದಮಲ್ಲೇಶ್ವರ ವಿರಕ್ತಮಠದಲ್ಲಿ ಮರಿಯಾಲ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀಚೆನ್ನಬಸವಸ್ವಾಮೀಜಿ, ಹಂಡ್ರಕಳ್ಳಿ ಮಠದ ಪಂಚಾಕ್ಷರಿ ಸ್ವಾಮೀಜಿ ಮಾತನಾಡಿ, ನರೇಂದ್ರ ಮೋದಿ ಅವರ ನಾಯಕತ್ವವನ್ನು ಒಪ್ಪಿದ್ದೇವೆ ಹಾಗೂ ಅವರ ಯುದ್ಧದ ನಿರ್ಣಯಗಳನ್ನು ಬೆಂಬಲಿಸುತ್ತೇವೆ ಎಂದು ತಿಳಿಸಿದರು. ಉಗನೇದಹುಂಡಿ ಮಠದ ಶ್ರೀ ಗುರುಸಿದ್ಧ ಸ್ವಾಮೀಜಿ, ಕೊತ್ತಲವಾಡಿ ಮಠದ ಶ್ರೀ ಗುರು ಸ್ವಾಮೀಜಿ, ರೈತ ಮುಖಂಡ ಮಲ್ಲೇಶ, ನಟರಾಜು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಆಲೂರು ಹೊಮ್ಮದಲ್ಲಿ ರಾಮೋತ್ಸವ ಸಂಭ್ರಮ



ಆಲೂರು ಹೊಮ್ಮಗ್ರಾಮದಲ್ಲಿ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀರಾಮದೇವರ ಮೆರವಣಿಗೆ ನಡೆಯಿತು.

ಚಾಮರಾಜನಗರ, ಮೇ 11– ತಾಲೂಕಿನ ಆಲೂರು ಹೊಮ್ಮಗ್ರಾಮದಲ್ಲಿ ನಾಯಕ ಸಮುದಾಯ ರಾಮೋತ್ಸವವನ್ನು ವಿಜೃಂಭಣೆಯಿಂದ ನಡೆಸಿತು.

ಗ್ರಾಮದ ಶ್ರೀಪಟ್ಟಾಭಿರಾಮ ಮಂದಿರದಲ್ಲಿ ರಾಮೋತ್ಸವ ಅಂಗವಾಗಿ ಶ್ರೀರಾಮ ದೇವರಿಗೆ ವಿಶೇಷಪೂಜೆ ಸಲ್ಲಿಸಲಾಯಿತು.

ರಾತ್ರಿ ರಾಮ ದೇವರಿಗೆ ಪೂಜೆ ಸಲ್ಲಿಸಿ ಹೂವಿನ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀರಾಮದೇವರ ಭಾವಚಿತ್ರವಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಯುವಕರು ಜೈ ಶ್ರೀರಾಮ್, ಜೈವಾಲ್ಮೀಕಿ ಘೋಷಣೆ ಕೂಗಿ ಸಂಭ್ರಮಿಸಿದರು. ಮೆರವಣಿಗೆ ಹಾದು ಹೋಗುವ ರಸ್ತೆ ಮೇಲೆ ಬಣ್ಣಬಣ್ಣದ ಚಿತ್ತಾರ ಬಿಟ್ಟು ಸ್ವಾಗತಿಸಲಾಯಿತು. ಮೆರವಣಿಗೆಯಲ್ಲಿ ನಾಯಕ ಸಮುದಾಯ, ಗ್ರಾಮಸ್ಥರು, ನಂಟರು ಭಾಗವಹಿಸಿದ್ದರು.

ಹೊನ್ನಪ್ಪ ನಿಧನ



ಚಾಮರಾಜನಗರ, ಮೇ 11–ತಾಲೂಕಿನ ಕಿಲಗೆರೆ ಗ್ರಾಮದ ಹೊನ್ನಪ್ಪ (42) ಇಂದು ನಿಧನರಾದರು.

ಮೃತರಿಗೆ ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ಇವರ ಅಂತ್ಯಕ್ರಿಯೆಯು ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನಿಂದ ಸಂಸ್ಕೃತ ಪಾಠಶಾಲೆ ಪರೀಕ್ಷೆ: ನಿಷೇಧಾಜ್ಞೆ

ಚಾಮರಾಜನಗರ: ವಿವಿಧ ಆಗಮ ಪ್ರವರ ಮತ್ತು ಪ್ರವೀಣ ಪ್ರಸಿದ್ದ ಪರೀಕ್ಷೆಗಳು ಮೇ 12 ರಿಂದ 17ರವರೆಗೆ ಹನೂರು ತಾಲೂಕಿನ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಮಠದ ಶ್ರೀ ಮಲೆ ಮಹದೇಶ್ವರ ವೇದ ಆಗಮ ಪಾಠ ಶಾಲೆಯಲ್ಲಿ ನಡೆಯಲಿದೆ.

ಪರೀಕ್ಷಾ ಕೇಂದ್ರದ ಸುತ್ತಲ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸಾರ್ವಜನಿಕ ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಆದೇಶ ಹೊರಡಿಸಿದ್ದಾರೆ.

ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಶಾಸಕ ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ

ಚಾಮರಾಜನಗರ: ತಾಲೂಕಿನ ವೀರನಪುರ ಕ್ರಾಸ್ ಬಳಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ 1092 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ 225 ಕಿಮೀಗಳ 2x125 ಎಂವಿಎ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಉಡಿಗಾಲ, ಉಗನೇದಹುಂಡಿ, ಚಿಕ್ಕಕೆಂಪಿಹುಂಡಿ, ದೇವಲಾಪುರ. ವೀರನಪುರ, ನಂಜೇದೇವನಪುರ, ಕಲ್ಪುರ, ಕಳಕನಹುಂಡಿ ಸೇರಿದಂತೆ ವಿವಿಧ ಗ್ರಾಮಗಳಿಗೆ ಅಡಚಣೆ ರಹಿತ ವಿದ್ಯುತ್ ಒದಗಿಸಲು ವಿದ್ಯುತ್ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದೆ ಎಂದರು. ಸೆಸ್ಕ್ ಇಇ ಪ್ರೀತಂ, ಎಇಇಗಳಾದ ವಿನೋದ್ ಕುಮಾರ್ ಸಿಂಗ್, ಚೇತನ್, ಆನಂದ್ ಕುಮಾರ್ ಇತರರು ಹಾಜರಿದ್ದರು.



ತಾಲೂಕಿನ ವೀರನಪುರ ಕ್ರಾಸ್ ಬಳಿ ನೂತನ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಹೌಸಿಂಗ್ ಬೋರ್ಡ್‌ನಲ್ಲಿ ಅಂಬೇಡ್ಕರ್ ಜಯಂತಿ



ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಉದ್ಘಾಟಿಸಿದರು

ಚಾಮರಾಜನಗರ: ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾರ್ಗವು ದೇಶಕ್ಕೆ ಮಾದರಿ. ಅವರ ಚಿಂತನೆಗಳನ್ನು ಮೈಗೂಡಿಸಿ ಕೊಂಡರೆ ಉತ್ತಮ ವಕ್ತಿತ್ವವನ್ನು ರೂಪಿಸಬಹುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಪಾರ್ಕಿನಲ್ಲಿ ಅಂಬೇಡ್ಕರ್ ಜಯಂತಿ ಹಾಗೂ ಡಾ.ಭೀಮ್ ರಾವ್ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕ್ರಮವನ್ನು ಉದ್ಘಾಟಿಸಿ ಪ್ರತಿಯೊಂದು ಜನಾಂಗವು ತಮ್ಮದೇ ಆದ ಜನಾಂಗವನ್ನು ಬಿಡುವುದಿಲ್ಲ. ನಮ್ಮ ಜನಾಂಗದವರು ಸಹ ಒಗ್ಗಟಿನಿಂದ ನಡೆದರೆ ಹೋರಾಟಗಳನ್ನು ಮಾಡಬಹುದು ಎಂದು ಹೇಳಿದರು.


ನಾನು ಸಹ ಹೌಸಿಂಗ್ ಬೋರ್ಡ್ ಕಾಲೋನಿ ಪಾರ್ಕಿನ ಅಭಿವೃದ್ಧಿಗೆ ಸರ್ಕಾರದ ಅನುದಾನದಿಂದ ಯೋಜನೆಗಳನ್ನು ರೂಪಿಸಲು ಹಣವನ್ನು ನೀಡಿದ್ದೇನೆ ಮುಂದಿನ ದಿನಗಳಲ್ಲಿ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಮುಖ್ಯ ಭಾಷಣಕಾರರಾದ ಬೋಗಾಪುರ ಸರ್ಕಾರಿ ವಸತಿಯುತ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಪಿ.ದೇವರಾಜು ಮಾತನಾಡಿ, ಅಂಬೇಡ್ಕರ್ ಪ್ರತಿಯೊಬ್ಬರ ಆಶಾಕಿರಣ ಅವರನ್ನು ಒಂದೇ ಪಂಗಡಗಳಿಗೆ ಸಿಮೀತ ಮಾಡಬಾರದು. ಅವರನ್ನು ವಿದೇಶಗಳಲ್ಲಿಯೂ ನೆನೆಯುತ್ತಾರೆ. ಅವರ ಜೀವನದಲ್ಲಿ ನಡೆದ ಘಟನೆಗಳು ದೀನ ದಲಿತರು ನೆನೆಯಲೇಬೇಕು. ನಮ್ಮ ದೇಶಕ್ಕೆ ಉತ್ತಮವಾದ ಸಂವಿಧಾನವನ್ನು ನೀಡಿ ಕಾನೂನು ಪ್ರತಿಯೊಬ್ಬರಿಗೂ ಒಂದೇ ಎಂದು ತಿಳಿಸಿದರು. ಅವರನ್ನು ವರ್ಷಕ್ಕೊಮ್ಮೆ ಪೂಜಿಸುವ ಬದಲು ಪ್ರತಿದಿನವು ಪೂಜಿಸಬೇಕು. ಅವರ ಮಾರ್ಗದರ್ಶನದಲ್ಲಿ ನಡೆದರೆ ಉತ್ತಮ ವ್ಯಕ್ತಿಯಾಗಬಹುದು ಎಂದು ಹೇಳಿದರು.

ಶಿಕ್ಷಕ ಚೌಡಯ್ಯ ಕಟ್ನವಾಡಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ನಗರಸಭಾ ಸದಸ್ಯೆ ಕುಮುದಾ ಮಾತನಾಡಿ ಬಿ.ಆರ್.ಅಂಬೇಡ್ಕರ್ ನಮ್ಮ ಪಾಲಿಗೆ ಆಶಾಕಿರಣ ದೀನ-ದಲಿತರ ಅಭಿವೃದ್ಧಿಗೆ ಸಂವಿಧಾನದ ಮೂಲಕ ನೀಡಿರುವ ಕೊಡುಗೆ ಅಪಾರ ಎಂದರು. ವೇದಿಕೆಯಲ್ಲಿ ಜಿಲ್ಲಾ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ|| ರೇಣುಕಾದೇವಿ, ಬುದ್ದನಗರ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಸ್.ಮಹದೇವಯ್ಯ ಇದ್ದರು.

ಸಾವಿತ್ರಿ ಬಾಪುಲೇ ಸಂಘದ ಭಾವನೀದೇವಿ, ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ. ಮಹದೇವಯ್ಯ, ಪದಾಧಿಕಾರಿಗಳಾದ ಕೃಷ್ಣರಾಜು, ಯಶೋಧರ.ಪಿ, ಶಿವಕುಮಾರ್, ಮೋಹನಾಂಭ, ಆರ್.ಶಿವಮೂರ್ತಿ, ಶಿವನಾಗಯ್ಯ.ಕೆ, ದೊರೆಸ್ವಾಮಿ, ಕೃಷ್ಣಮೂರ್ತಿ, ಪವನ್‌ಕುಮಾರ್.ಎನ್, ಕೃಷ್ಣ.ಬಿ, ಮಲ್ಲಿಕಾರ್ಜುನಸ್ವಾಮಿ, ರವಿ ಅರಸು, ಕಲ್ಯಾಣಮ್ಮ, ಯತೀಶ.ಹೆಚ್.ವಿ, ಪ್ರಕಾಶ್ ಪ್ರತಾಪ್, ಇತರರಿದ್ದರು.

ಪಾಕಿಸ್ತಾನಕ್ಕೆ ಇನ್ನೂ ಬುದ್ಧಿ ಕಲಿಸಬೇಕಾಗಿತ್ತು



ರಾಮನಗರ, ಮೇ 11– ಈ ಕದನ ವಿರಾಮದ ಬಗ್ಗೆ ನನಗೆ ಸಮಾಧಾನ ಇಲ್ಲ. ಪಾಕಿಸ್ತಾನಕ್ಕೆ ಇನ್ನೂ ಬುದ್ಧಿ ಕಲಿಸಬೇಕಾಗಿತ್ತು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ. ಭಾರತ ಹಾಗೂ ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆ ಆಗಿದ್ದರೂ, ಪಾಕಿಸ್ತಾನ ಕದನ ವಿರಾಮ ಉಲ್ಲಂಘನೆ ಮಾಡಿರುವ ವಿಚಾರದ ಕುರಿತು ರಾಮನಗರದಲ್ಲಿ ಅವರು ಮಾತನಾಡಿದರು. ಪಾಕಿಸ್ತಾನ ಪದೇ ಪದೇ ಚೇಷ್ಟೆ ಮಾಡುತ್ತಲೇ ಬಂದಿದೆ. ಸುಮಾರು 10 ಘಟನೆಗಳಲ್ಲಿ ನೇರವಾಗಿ ಅವರ ಪಾತ್ರ ಇದೆ. ತಾಜ್ ಹೋಟೆಲ್ ಅಟ್ಯಾಕ್, ಪುಲ್ವಾಮ ದಾಳಿ, ಉರಿ ಸೆಕ್ಟರ್ ದಾಳಿ ಹೀಗೆ ಹಲವು ದಾಳಿಗಳ ಮೇಲೆ ಪಾಕಿಸ್ತಾನದ ಕೈವಾಡ ಇದೆ. ಅಲ್ಲಿನ ರಾಜಕಾರಣಿಗಳು, ಹಾಗೂ ಸೇನೆ ಉಗ್ರರಿಗೆ ಸಹಕಾರ ಕೊಡುತ್ತಿವೆ. ಅವರಿಗೆ ಇನ್ನೂ ಬುದ್ಧಿ ಕಲಿಸಬೇಕಾಗಿತ್ತು ಎನ್ನುವುದು ನನ್ನ ಭಾವನೆ. ಸದ್ಯ ಇಷ್ಟಾದರೂ ಬುದ್ಧಿ ಕಲಿಸಿದ್ದಾರಲ್ಲ ಎಂದು ಸಂತೋಷ ಪಡಬೇಕು ಅಷ್ಟೇ ಎಂದರು.

ಒಂದನೇ ಪುಟದಿಂದ

ಕ್ಷಿಪಣಿ ಉತ್ಪಾದನಾ ಘಟಕ ಉದ್ಘಾಟನೆ

ಮಾತ್ರವಲ್ಲದೇ, ಇಡೀ ಭಾರತದ ರಕ್ಷಣಾ ವಲಯಕ್ಕೆ ಬಲ ತುಂಬ ಲಿದೆ. 2018ರ ಜಾಗತಿಕ ಹೂಡಿಕೆದಾರರ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ ರಕ್ಷಾ ಕೈಗಾರಿಕಾ ಕಾರಿಡಾರ್ ಉಪಕ್ರಮದ ಭಾಗವಾಗಿ ಉತ್ಪಾದನಾ ಘಟಕವನ್ನು ಘೋಷಿಸಲಾಯಿತು. ಇದಕ್ಕೆ 2021 ರಲ್ಲಿ ಅಡಿಪಾಯ ಹಾಕಲಾಗಿತ್ತು. ಇದು ಭಾರತ ಸರ್ಕಾರದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಮತ್ತು ರಷ್ಯಾದ ಸರ್ಕಾರಿ ಸಂಸ್ಥೆ NPO ಮಶಿನೋಸ್ಟ್ರೋನಿನ್ಯಾ ನಡುವಿನ ಜಂಟಿ ಉದ್ಯಮವಾಗಿದೆ. ಇದರಲ್ಲಿ ಭಾರತದ ಪಾಲು ಶೇ.50.5 ಮತ್ತು ರಷ್ಯಾದ ಪಾಲು ಶೇ.49.5 ರಷ್ಟಿದೆ ಎಂದು ವರದಿಗಳು ತಿಳಿಸಿವೆ.

ಈ ಘಟಕವನ್ನು ಸುಮಾರು 300 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದಕ್ಕಾಗಿ ಯುಪಿ ರಾಜ್ಯ ಸರ್ಕಾರವು ಲಕ್ನೋದಲ್ಲಿ 80 ಹೆಕ್ಟೇರ್ ಭೂಮಿಯನ್ನು ಉಚಿತವಾಗಿ ನೀಡಿದೆ. ಸುಮಾರು 3 ವರ್ಷಗಳ ದಾಖಲೆ ಸಮಯದ ಬಳಿಕ ಘಟಕ ನಿರ್ಮಾಣ ಪೂರ್ಣಗೊಂಡಿದ್ದು, ರಾಜ್ಯದ ಮೊದಲ ಹೈಟೆಕ್ ರಕ್ಷಣಾ ಉತ್ಪಾದನಾ ಕೇಂದ್ರ ಇದಾಗಲಿದೆ.

ಈ ಘಟಕದಲ್ಲಿ ಬ್ರಹ್ಮೋಸ್ ಕ್ಷಿಪಣಿ ಜೊತೆಗೆ ಇತರ ರಕ್ಷಣಾ ಉತ್ಪನ್ನಗಳು ಹಾಗೂ ಏರೋಸ್ಪೇಸ್ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉಪಕರಣಗಳನ್ನೂ ತಯಾರಿಸಲಾಗುತ್ತದೆ. ಸುಮಾರು 500 ಮುಖ್ಯ ಇಂಜಿನಿಯರ್‌ಗಳು ಮತ್ತು ತಾಂತ್ರಿಕ ಸಿಬ್ಬಂದಿ ಕೆಲಸ ನಿರ್ವಹಿಸಲಿದ್ದು, ಸಾವಿರಾರು ಮಂದಿ ಸಹ ಸಿಬ್ಬಂದಿಗಳೂ ಸಹ ಇರಲಿದ್ದಾರೆ.

1 ವರ್ಷದಲ್ಲಿ ಮುಂದಿನ ತಲೆಮಾರಿನ ಮಿಸೈಲ್ ಸಿದ್ಧ: ಸದ್ಯಕ್ಕೆ ವಾರ್ಷಿಕವಾಗಿ 80 ರಿಂದ 100 ಬ್ರಹ್ಮೋಸ್ ಮಿಸೈಲ್ ತಯಾರಿಸುವ ಗುರಿಯನ್ನು ಘಟಕ ಹಾಕಿಕೊಂಡಿದೆ. ಜೊತೆಗೆ ಇನ್ನೊಂದು ವರ್ಷದಲ್ಲಿ ಮುಂದಿನ ತಲೆಮಾರಿನ ಕ್ಷಿಪಣಿ ಸಿದ್ಧಪಡಿಸಲು ರೂಪುರೇಷೆ ಸಿದ್ಧಪಡಿಸಲಾಗಿದೆ. ಪ್ರಸ್ತುತ ಬ್ರಹ್ಮೋಸ್ ಕ್ಷಿಪಣಿ 2,900 ಕೆಜಿ ತೂಗುತ್ತದೆ. ಆದರೆ, ಮುಂದಿನ ಪೀಳಿಗೆಯ ಬ್ರಹ್ಮೋಸ್ ಕ್ಷಿಪಣಿ 1,290 ಕೆಜಿ ತೂಕ ಹೊಂದಿರಲಿದ್ದು, ದಾಳಿಯ ವ್ಯಾಪ್ತಿಯು 300 ಕಿಮೀ ಗಿಂತಲೂ ಹೆಚ್ಚಿರಲಿದೆ ಎಂದು ಅಧಿಕಾರಿಗಳು ತಿಳಿಸಿರುವುದಾಗಿ ವರದಿಯಾಗಿದೆ.

ಪಾಕ್‌ಗೆ ನಡುಕ ಶುರುವಾಗಿದ್ದೇಕೆ?: 2022ರ ಮಾರ್ಚ್ 9ರ ಸಂಜೆಯ ವೇಳೆ ಹರಿಯಾಣದ ಸಿರ್ಸಾದಿಂದ ಬ್ರಹ್ಮೋಸ್ ಕ್ಷಿಪಣಿ ಆಕಸ್ಮಿಕವಾಗಿ ಉಡಾವಣೆಯಾಗಿ ಕೇವಲ 3 ನಿಮಿಷ 44 ಸೆಕೆಂಡ್‌ನಲ್ಲಿ 124 ಕಿಮೀ ಕ್ರಮಿಸಿ ಪಾಕಿಸ್ತಾನದ ಭೂಪ್ರದೇಶದ ಒಳಗಡೆ ಬಿದ್ದಿತ್ತು. ಈ ಘಟನೆಯಿಂದ ಯಾವುದೇ ಸಾವು, ನೋವು ಸಂಭವಿಸದೇ ಇದ್ದರೂ ಈ ಕ್ಷಿಪಣಿಯನ್ನು ತಡೆಯಲು ಪಾಕಿಸ್ತಾನದಿಂದ ಸಾಧ್ಯವಾಗಿರಲಿಲ್ಲ. ಇದೀಗ ಯುದ್ಧದ ಛಾಯೆ ಕವಿದಿರುವ ಹೊತ್ತಿನಲ್ಲೇ ಭಾರತ ಬ್ರಹ್ಮೋಸ್ ಕ್ಷಿಪಣಿ ಘಟಕ ಉದ್ಘಾಟಿಸುತ್ತಿರುವುದು ಪಾಕ್‌ಗೆ ನಡುಕ ಉಂಟಾಗುವಂತೆ ಮಾಡಿದೆ.

ಪಾಕ್‌ನವರನ್ನು ಕೇಳಿ: ಯೋಗಿ ಆದಿತ್ಯನಾಥ್

ಅದರ ಪರಿಣಾಮದ ಬಗ್ಗೆ ಪಾಕಿಸ್ತಾನವನ್ನು ಕೇಳಬಹುದು ಎಂದು ಹೇಳಿದರು. ಭಯೋತ್ಪಾದನೆಯ ಕುರಿತು ಮಾತನಾಡಿದ ಅವರು, ಪಾಕಿಸ್ತಾನ ಎಂದಿಗೂ ನೇರವಾಗದ ನಾಯಿಯ ಬಾಲದಂತೆ ಮತ್ತು ಅದರದೇ ಭಾಷೆಯಲ್ಲಿ ವ್ಯವಹರಿಸಬೇಕು ಎಂದು ಹೇಳಿದರು. ಉತ್ತರ ಪ್ರದೇಶದಲ್ಲಿ ಶೀಘ್ರದಲ್ಲೇ ಉತ್ಪಾದನೆ ಆರಂಭವಾಗಲಿರುವ ಬ್ರಹ್ಮೋಸ್ ಯೋಜನೆಗಾಗಿ ರಾಜ್ಯ ಸರ್ಕಾರ 200 ಎಕರೆ ಭೂಮಿಯನ್ನು ಮಂಜೂರು ಮಾಡಿದೆ ಎಂದು ಯೋಗಿ ಆದಿತ್ಯನಾಥ್ ಹೇಳಿದರು. ಮುಂದೆ ನಡೆಯುವ ಯಾವುದೇ ಭಯೋತ್ಪಾದನಾ ಕೃತ್ಯವನ್ನು ಯುದ್ಧ ಕೃತ್ಯವೆಂದು ಪರಿಗಣಿಸಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಭಯೋತ್ಪಾದನೆಯನ್ನು ಸಂಪೂರ್ಣವಾಗಿ ಹತ್ತಿಕ್ಕುವವರೆಗೆ ಭಯೋತ್ಪಾದನೆಯ ಸಮಸ್ಯೆಯನ್ನು ಪರಿಹರಿಸಲಾಗುವುದಿಲ್ಲ. ಭಯೋತ್ಪಾದನೆಯನ್ನು ಹತ್ತಿಕ್ಕಲು, ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ನಾವೆಲ್ಲರೂ ಒಂದೇ ಧ್ವನಿಯಲ್ಲಿ ಒಟ್ಟಾಗಿ ಹೋರಾಡಬೇಕು ಎಂದು ಅವರು ಹೇಳಿದರು.

100ಕ್ಕೂ ಹೆಚ್ಚು ಉಗ್ರರ ಹತ್ಯೆ

ಕುಖ್ಯಾತ ಭಯೋತ್ಪಾದಕರು: ಹತ್ಯೆಯಾದ ಭಯೋತ್ಪಾದಕರಲ್ಲಿ ಯೂಸುಫ್ ಅಜರ್, ಅಬ್ದುಲ್ ಮಲಿಕ್ ರೌಫ್ ಮತ್ತು ಮುದಾಸೀರ್ ಅಹ್ಮದ್ ನಂತಹ ಕುಖ್ಯಾತ ಭಯೋತ್ಪಾದಕರು ಸೇರಿದ್ದಾರೆ ಎಂದು ಡಿಜಿಎಂಒ ತಿಳಿಸಿದ್ದಾರೆ. ಆ ಉಗ್ರರು IC-814 ವಿಮಾನ ಅಪಹರಣ ಮತ್ತು ಪುಲ್ವಾಮಾ ಭಯೋತ್ಪಾದಕ ದಾಳಿಯಂತಹ ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಭಾರತೀಯ ವಾಯುಪಡೆಯ ಕ್ರಮವು ಶಸ್ತ್ರಚಿಕಿತ್ಸಾ, ನಿಖರ ಮತ್ತು ಸಂಪೂರ್ಣವಾಗಿ ಯೋಜಿತವಾಗಿತ್ತು ಎಂದು ಅವರು ಹೇಳಿದರು.

ಭಯೋತ್ಪಾದನೆಯ ಮಾಸ್ಟರ್ ಮೈಂಡ್‌ಗಳು ಮತ್ತು ಅವರ ಮೂಲ ಸೌಕರ್ಯಗಳನ್ನು ನಾಶಪಡಿಸುವುದು 'ಆಪರೇಷನ್ ಸಿಂಧೂರ್'ನ ಉದ್ದೇಶವಾಗಿದೆ ಎಂದು ಅವರು ಹೇಳಿದರು. ಭಯೋತ್ಪಾದನೆಯ ವಿರುದ್ಧ ಕೇವಲ ಹೇಳಿಕೆಗಳಲ್ಲ, ಮಿಲಿಟರಿ ಕ್ರಮವೇ ಉತ್ತರ ಎಂಬ ಭಾರತದ ಸಂದೇಶ ಸ್ಪಷ್ಟವಾಗಿದೆ ಎಂದರು.

ಪಾಕ್‌ನಿಂದ ಎಲ್‌ಒಸಿ ಉಲ್ಲಂಘಿಸಲು ಯತ್ನ: ಡಿಜಿಎಂಒ ಪ್ರಕಾರ, ದಾಳಿಯ ಸಮಯದಲ್ಲಿ, ಪಾಕಿಸ್ತಾನವು ನಿಯಂತ್ರಣ ರೇಖೆಯನ್ನು ಉಲ್ಲಂಘಿಸಲು ಪ್ರಯತ್ನಿಸಿತು. ಪಾಕಿಸ್ತಾನದ ಪ್ರತಿಕ್ರಿಯೆಯು ಭೀತಿ ಮತ್ತು ಗೊಂದಲಗಳಿಂದ ಕೂಡಿತ್ತು ಎಂದು ಅವರು ಹೇಳಿದರು. ಹಳ್ಳಿಗಳು, ಧಾರ್ಮಿಕ ಸ್ಥಳಗಳು ಮತ್ತು ಗುರುದ್ವಾರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಮೂಲಕ ತನ್ನ ಪ್ರತಿಕ್ರಿಯೆ ತಪ್ಪು ದಿಕ್ಕಿನಲ್ಲಿದೆ ಎಂದು ಅದು ಸಾಬೀತುಪಡಿಸಿತು. ಇದರ ಪರಿಣಾಮವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಅನೇಕ ಮುಗ್ಧ ನಾಗರಿಕರು ಸಾವನ್ನಪ್ಪಿದರು.

ಈ ಕಾರ್ಯಾಚರಣೆಯಲ್ಲಿ ಭಾರತೀಯ ವಾಯುಪಡೆಯು ಭಯೋತ್ಪಾದಕ ಅಡಗುತಾಣಗಳ ಮೇಲೆ ದಾಳಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರೆ, ಭಾರತೀಯ ನೌಕಾಪಡೆಯು ಕಾರ್ಯಾಚರಣೆಗೆ ನಿಖರವಾದ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಒದಗಿಸಿತು. ವಾಯುಪಡೆಯ ಯುದ್ಧ ವಿಮಾನಗಳು ಆಕಾಶದಲ್ಲಿಯೇ ನಿಯೋಜಿಸಲ್ಪಟ್ಟವೆ ಮತ್ತು ಕಾರ್ಯಾಚರಣೆಯ ಸಮಯದಲ್ಲಿ ನೈಜ-ಸಮಯದ ಕಣ್ಗಾವಲು ಮತ್ತು ಗುರಿ ಇಡಲಾಗಿದೆ ಎಂದು ಡಿಜಿಎಂಒ ಹೇಳಿದರು.

ಗಡಿಯಾಚೆಗಿನ ಭಯೋತ್ಪಾದನಾ ಸನ್ನಿವೇಶದ ಮೇಲೆ ಸಾಕಷ್ಟು ಕಠಿಣ ಪರಿಶ್ರಮ ಮತ್ತು ಸೂಕ್ಷ್ಮ ಮೇಲ್ವಿಚಾರಣೆ ಪ್ರಾರಂಭವಾಯಿತು ಮತ್ತು ಭಯೋತ್ಪಾದಕ ಶಿಬಿರಗಳು ಮತ್ತು ತರಬೇತಿ ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಹೇಳಿದರು. ಹಲವಾರು ಸ್ಥಳಗಳ ಬಗ್ಗೆ ಚರ್ಚೆ ನಡೆಯಿತು, ಆದರೆ ನಾವು ಮತ್ತಷ್ಟು ಚರ್ಚಿಸಿದಾಗ, ಈ ಕೆಲವು ಭಯೋತ್ಪಾದಕ ಕೇಂದ್ರಗಳು ಇನ್ನು ಮುಂದೆ ಅಸ್ತಿತ್ವದಲ್ಲಿಲ್ಲ ಮತ್ತು ನಮ್ಮಿಂದ ಪ್ರತೀಕಾರದ ಭಯದಿಂದ ಅವುಗಳನ್ನು ಈಗಾಗಲೇ ತೆರವುಗೊಳಿಸಲಾಗಿದೆ ಎಂದು ನಮಗೆ ಅರಿವಾಯಿತು. ಈಗ ನಿಮಗೆಲ್ಲರಿಗೂ ಪರಿಚಿತವಾಗಿರುವ ಒಂಬತ್ತು ಶಿಬಿರಗಳು ಇದ್ದವು. ನಮ್ಮ ವಿವಿಧ ಗುಪ್ತಚರ ಸಂಸ್ಥೆಗಳು ಅವು ಜನವಸತಿ ಹೊಂದಿವೆ ಎಂದು ದೃಢಪಡಿಸಿದವು. ಇವುಗಳಲ್ಲಿ ಕೆಲವು ಪಿಒಜೆಕೆಯಲ್ಲಿದ್ದರೆ, ಇನ್ನು ಕೆಲವು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿವೆ. ಲಷ್ಕರ್–ಎ–ತೊಯ್ಬಾದ ಕೇಂದ್ರವಾದ ಮುರಿಡ್ಕೆಯಂತಹ ದುಷ್ಟ ಸ್ಥಳಗಳು ವರ್ಷಗಳಲ್ಲಿ ಅಜ್ಮಲ್ ಕಸಬ್ ಮತ್ತು ಡೇವಿಡ್ ಹೆಡ್ಲಿಯಂತಹ ಕುಖ್ಯಾತ ವ್ಯಕ್ತಿಗಳನ್ನು ಉತ್ಪಾದಿಸಿವೆ ಎಂದು ಹೇಳಿದರು.

ಪಾಕ್‌ನಿಂದ ನೂರಕ್ಕೂ ಹೆಚ್ಚು ಡ್ರೋನ್ ದಾಳಿ: ಪಾಕಿಸ್ತಾನ ಭಾರತದ ಮೇಲೆ ಭೀಕರ ದಾಳಿಗೆ ಯತ್ನಿಸಿತ್ತು. ನಮ್ಮ ನಗರಗಳ ಮೇಲೆ ಡ್ರೋನ್ ದಾಳಿ ನಡೆಸಿತು. ಶ್ರೀನಗರದಿಂದ ನಲಿಯಾವರೆಗೆ ದಾಳಿಗೆ ಪ್ರಯತ್ನಿಸಿತ್ತು. ಭಾರತದ ಮೇಲೆ ನೂರಕ್ಕೂ ಹೆಚ್ಚು ಡ್ರೋನ್‌ಗಳನ್ನು ಪಾಕಿಸ್ತಾನ ಹಾರಿಸಿದೆ. ಆದರೆ, ಪಾಕಿಸ್ತಾನದ ಕುತಂತ್ರ ಬುದ್ಧಿಯ ಬಗ್ಗೆ ಅರಿತಿದ್ದರಿಂದ ದಾಳಿಯನ್ನು ಎದುರಿಸಲು ಭಾರತ ಸಕಲ ಸಿದ್ಧತೆ ಮಾಡಿಕೊಂಡಿತ್ತು. ಹೀಗಾಗಿ ಎಷ್ಟೇ ದಾಳಿ ಮಾಡಿದರೂ ಪಾಕಿಸ್ತಾನದ ಪ್ರಯತ್ನ ಫಲಿಸಲಿಲ್ಲ. ಭಾರತವು ಲಾಹೋರ್ ಮೇಲೆ ದಾಳಿಗೆ ಯತ್ನಿಸಿದಾಗ ಪಾಕಿಸ್ತಾನ ನಾಗರಿಕ ವಿಮಾನಗಳನ್ನು ಹಾರಿಸಿತು. ಅದು ಯುದ್ಧ ಅಪರಾಧವಾಗಿದೆ ಎಂದು ಏರ್ ಮಾರ್ಷಲ್ ಎಕೆ ಭಾರ್ತಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಭಾರತೀಯ ಸೇನೆಯ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕ (DGMO) ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್, ಭಾರತೀಯ ವಾಯುಪಡೆಯ ವಾಯು ಕಾರ್ಯಾಚರಣೆಗಳ ಮಹಾನಿರ್ದೇಶಕ (ಡಿಜಿಏರ್‌ಆಪ್ಸ್) ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ, ಭಾರತೀಯ ನೌಕಾಪಡೆಯ ನೌಕಾ ಕಾರ್ಯಾಚರಣೆಗಳ ಮಹಾನಿರ್ದೇಶಕ (ಡಿಜಿಎನ್‌ಒ) ವೈಸ್ ಅಡ್ಮಿರಲ್ ಎಎನ್ ಪ್ರಮೋದ್ ಇದ್ದರು.

ಸಂವಿಧಾನದಿಂದಾಗಿ ದೇಶದಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿದೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ

ನಂಜನಗೂಡು, ಮೇ 11– ಭಾರತದೊಂದಿಗೆ ಸ್ವಾತಂತ್ರ್ಯ ಪಡೆದ 34 ದೇಶಗಳಲ್ಲಿ ಭಾರತ ಬಿಟ್ಟು ವಿಕ್ಕೆಲ್ಲಾ ದೇಶಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗಿದೆ. ಆದರೆ ಅಂಬೇಡ್ಕರ್ ರಚಿಸಿದ ಸಂವಿಧಾನದಿಂದಾಗಿ ದೇಶದಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿ ಉಳಿದಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಹಲವು ಧರ್ಮ, ಜಾತಿಗಳನ್ನು ಹೊಂದಿದ ಭಾರತವನ್ನು ಒಂದು ದೇಶವಾಗಿ ಒಗ್ಗೂಡಿಸುವುದು ಕಷ್ಟ, ಭಾರತ ಪ್ರಜಾಪ್ರಭುತ್ವ ದೇಶವಾಗಿ ಉಳಿಯಲು ಸಾಧ್ಯವಿಲ್ಲ ಎಂದು ಹಲವು ದೇಶಗಳು ಭವಿಷ್ಯ ನುಡಿದಿದ್ದವು. ಆದರೆ ಅಂಬೇಡ್ಕರ್ ನೀಡಿದ ಶ್ರೇಷ್ಠ ಸಂವಿಧಾನದಿಂದಾಗಿ ದೇಶ ಸದೃಢ ಭಾರತವಾಗಿ ಉಳಿದಿದೆ. ಅಲ್ಲದೇ ಸಂವಿಧಾನದಿಂದಾಗಿ ಶೋಷಿತರಿಗೆ ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ಯುವಕರು ಫೇಸ್‌ಬುಕ್, ವಾಟ್ಸ್‌ಪ್‌ನಿಂದ ಹೊರ ಬಂದು ದೇಶದ ಇತಿಹಾಸ ತಿಳಿಯಬೇಕು. ಆಗ ಮಾತ್ರ ಸಂವಿಧಾನ ಏಕೆ ಪ್ರಾಮುಖ್ಯತೆ ಇದೆ ಎಂಬುದು ತಿಳಿಯಲಿದೆ ಎಂದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ತಮ್ಮ ಮಕ್ಕಳನ್ನು ವಿದೇಶಕ್ಕೆ ವ್ಯಾಸಂಗಕ್ಕೆ ಕಳುಹಿಸಿ ಬಳಿಕ ಉದ್ಯಮಿಗಳನ್ನಾಗಿಸುತ್ತಿದ್ದಾರೆ. ಬಡವರ ಮಕ್ಕಳನ್ನು ಧರ್ಮ ಹಾಗೂ ಗೋ ರಕ್ಷಣೆ ಹೆಸರಿನಲ್ಲಿ ಬೀದಿಗೆ ತರುತ್ತಿದ್ದಾರೆ. ಬಡವರ ಮಕ್ಕಳಿಗಷ್ಟೇ ಕೇಸರಿ ಶಾಲು ಕೊಟ್ಟು ಹೋರಾಟಕ್ಕೆ ದೂಡುವ ಬಿಜೆಪಿಗರು ತಮ್ಮ ಮಕ್ಕಳನ್ನು ಯಾವ ಹೋರಾಟಕ್ಕೆ ಕರೆ ತಂದಿದ್ದಾರೆ ಎಂದು ಪ್ರಶ್ನಿಸಿದ ಅವರು ಕೇಂದ್ರ ಸಚಿವ ಅಮಿತ್ ಶಾ ಪುತ್ರ ಎಂದಾದರೂ ಕೇಸರಿ ಶಾಲು ಧರಿಸಿದ್ದಾನಾ? ಹೋಗಲಿ ಬ್ಯಾಟ್ ಹಿಡಿದಾದರೂ ಗೊತ್ತಿದೆಯಾ, ಆದರೂ ಆತ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ಅಧ್ಯಕ್ಷನಾಗಿದ್ದಾನೆ. ಹೀಗೆ ಅವರು ತಮ್ಮ ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸುತ್ತಿದ್ದಾರೆ. ಹೀಗಾಗಿ ಶೋಷಿತ ಹಿಂದುಳಿದ ವರ್ಗದ ಜನರು ಎಚ್ಚೆತ್ತುಕೊಳ್ಳಬೇಕು ಎಂದರು.

ಅಂಬೇಡ್ಕರ್ ಸಂವಿಧಾನ ಕರಡು ಸಮಿತಿ ಅಧ್ಯಕ್ಷರಾಗುವುದನ್ನು ಆರ್‌ಎಸ್‌ಎಸ್ ಬೆಂಬಲಿಸಲಿಲ್ಲ. ಆರ್‌ಎಸ್‌ಎಸ್‌ನ ಆರ್ಗನೈಜರ್ ಪತ್ರಿಕೆಯಲ್ಲಿ ನಾವು ಸಂವಿಧಾನವನ್ನು ಒಪ್ಪುವುದಿಲ್ಲ. ಮನುಸ್ಮೃತಿ ಸಂವಿಧಾನವಾಗಬೇಕು ಎಂದು ಹೇಳಿತ್ತು. ಅಂಬೇಡ್ಕರ್ ಚುನಾವಣೆಯಲ್ಲಿ ತಾನು ಸೋಲಲು ಸಾವರ್ಕರ್ ಕಾರಣ ಎಂದು ಹೇಳಿದ್ದಾರೆ. ಇದು ನಾನು ಹೇಳಿದ್ದಲ್ಲ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಬೇಡ್ಕರ್ ಬರೆದ ಪತ್ರಗಳಲ್ಲಿ ಈ ವಿಚಾರವಿದ್ದು, ಪರಿಶೀಲಿಸಬಹುದು. ನಿಜ ಹೇಳಿದರೆ ಬಿಜೆಪಿಯವರು ನಮ್ಮ ಚಾರಿತ್ರ್ಯ ವಧೆಗೆ ಇಳಿಯುತ್ತಾರೆ. ಸ್ವಾತಂತ್ರ್ಯ ಬಂದು 52 ವರ್ಷ ಕಳೆದರೂ ಆರ್‌ಎಸ್‌ಎಸ್ ಕಚೇರಿಯಲ್ಲಿ ರಾಷ್ಟ್ರಧ್ವಜ ಹಾರಿಸುತ್ತಿರಲಿಲ್ಲ. ಬಿಜೆಪಿಯವರು ಜಾತಿ ವಿಷ ಬೀಜ ಬಿತ್ತಿ ಸಮಾಜದ ಶಾಂತಿ ಕದಡುತ್ತಾರೆ. ಇವರ ಇತಿಹಾಸ ತಿಳಿಯದ ನಮ್ಮ ದಲಿತ, ಹಿಂದುಳಿದ, ಆದಿವಾಸಿ ಯುವಕರು ಕೇಸರಿ ಶಾಲಿಗೆ ಬಲಿಯಾಗುತ್ತಿದ್ದಾರೆ. ಬಿಜೆಪಿ ನಾಯಕರ ಮಕ್ಕಳು ಕೈಗಾರಿಕೋದ್ಯಮಿಗಳಾಗುತ್ತಾರೆ. ದೇಶದ ಟಾಪ್ 10 ಉದ್ಯಮಿಗಳು ಬಿಜೆಪಿ ನಾಯಕರ ಮಕ್ಕಳಾಗಿದ್ದಾರೆ. ಇದನ್ನು ತಿಳಿಯದ ನಮ್ಮ ಯುವಕರು ಧರ್ಮರಕ್ಷಣೆ, ಗೋರಕ್ಷಣೆಗೆ ಜಗಳವಾಡಿಕೊಂಡು ಹಾಳಾಗುತ್ತಿದ್ದಾರೆ. ದಿ.ಧ್ರುವನಾರಾಯಣ ಅವರ ಮಾರ್ಗದರ್ಶನದಲ್ಲಿ ನಾನು ರಾಜಕೀಯವಾಗಿ ಬೆಳೆದಿದ್ದೇನೆ. ನಮ್ಮ ತಂದೆ ಧ್ರುವನಾರಾಯಣ್ ಅವರ ಮಾತಿಗೆ ಬೆಲೆ ಕೊಡುತ್ತಿದ್ದರು. ಶಾಸಕರಾದ ದರ್ಶನ್, ಗಣೇಶ್ ಪ್ರಸಾದ್, ಅನಿಲ್, ಸಂಸದ ಸುನೀಲ್ ಬೋಸ್ ಅವರ ನಾಯಕತ್ವದಲ್ಲಿ ಜಿಲ್ಲೆ ಬಲಿಷ್ಠವಾಗಿದೆ. ಅಂಬೇಡ್ಕರ್ ಹಾಕಿಕೊಟ್ಟ ಹಾದಿಯಲ್ಲಿ ಯುವಕರು ಸಾಗಬೇಕು. ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.


ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

> ಸ್ವಾತಂತ್ರ್ಯ ಬಂದು 75 ವರ್ಷ ಬಳಿಕ ದೇಶದಲ್ಲಿ ಅಂಬೇಡ್ಕರ್ ಅವರ ಬಗ್ಗೆ ಅರಿವು ಮೂಡಿದೆ. ಸಂವಿಧಾನ ಬದಲಾವಣೆ ಮಾಡುತ್ತೇವೆ ಎನ್ನುತ್ತಿದ್ದವರು ಸಂವಿಧಾನದ ಪುಸ್ತಕ ಹಿಡಿದು ತಿರುಗುವಂತಾಗಿರುವುದು ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟಿರುವ ಸಂವಿಧಾನದ ಶಕ್ತಿಯಾಗಿದೆ. ಪ್ರಸ್ತುತ ಸಂವಿಧಾನಕ್ಕೆ ತೀವ್ರ ಧಕ್ಕೆ ಎದುರಾಗಿದ್ದು, ಜನರು ಜಾಗೃತಗೊಳ್ಳುವ ಮೂಲಕ ಸಂವಿಧಾನದ ರಕ್ಷಣೆ ಮಾಡಬೇಕಿದೆ. ಆ ನಿಟ್ಟಿನಲ್ಲಿ ರಾಜ್ಯಾದ್ಯಂತ 2 ತಿಂಗಳ ಕಾಲ ನಿರಂತರವಾಗಿ ನಡೆದ ಸಂವಿಧಾನ ಜಾಗೃತಿ ಜಾಥಾ ನೆರವಾಗಿದೆ. – ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ.

ಶಾಸಕ ದರ್ಶನ್ ಮಾತನಾಡಿ, ತಾಲೂಕಿನಲ್ಲಿ ರೈತರ ಜಮೀನುಗಳಿಗೆ ತೆರಳುವ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕಿದ್ದು, ಜೊತೆಗೆ ದೊಡ್ಡಕವಲಂದೆ ಕುಡಿಯುವ ನೀರಿನ ಕಾರ್ಯಾಗಾರ ದುರಸ್ಥಿ ಕಾಮಗಾರಿಗೆ ಚಾಲನೆ ನೀಡಬೇಕಿದೆ. ಹೀಗಾಗಿ ಈ ನಿಟ್ಟಿನಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರ ನೆರವು ಅವಶ್ಯಕವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಮಹದೇವಪ್ಪ ಆಸಕ್ತಿ ವಹಿಸಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನಕ್ಕೆ 1 ಕೋಟಿ ಅನುದಾನ ನೀಡಿದ್ದು ಶೀಘ್ರದಲ್ಲಿಯೇ ಕಾಮಗಾರಿಗೆ ಚಾಲನೆ ನೀಡುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ, ಮುಖ್ಯ ಭಾಷಣಕಾರ ಕೆ.ದೀಪಕ್ ಮಾತನಾಡಿದರು. ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರದ ಅದ್ಧೂರಿ ಮೆರವಣಿಗೆಗೆ ಸಂಸದ ಸುನಿಲ್ ಬೋಸ್ ಮತ್ತು ಶಾಸಕ ದರ್ಶನ್ ಚಾಲನೆ ನೀಡಿದರು. ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ಅದ್ಧೂರಿಯಾಗಿ ನಗರದ ಬೀದಿಗಳಲ್ಲಿ ಸಾಗಿ ದೇವಾಲಯದ ವೇದಿಕೆ ಕಾರ್ಯಕ್ರಮದಲ್ಲಿ ಅಂತ್ಯಗೊಂಡಿತು.

ಸಮಾರಂಭದಲ್ಲಿ ಶಾಸಕ ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಕೇಶವಮೂರ್ತಿ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ರಂಗಸ್ವಾಮಿ, ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಯಾನಬಾನು, ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಮೀನಾಕ್ಷಿ, ವಿಜಯಲಕ್ಷ್ಮಿ, ಕೆ.ಎಂ.ಬಸವರಾಜು, ಜಿಪಂ ಮಾಜಿ ಸದಸ್ಯೆ ಲತಾ, ಎಸ್.ಸಿ.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ರಾಜೇಶ್, ಅಬ್ದುಲ್ ಖಾದರ್, ನಾಗರಾಜು, ನಾಗರಾಜಯ್ಯ, ಪುಟ್ಟಸ್ವಾಮಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ನಗರಸಭಾ ಮಾಜಿ ಉಪಾಧ್ಯಕ್ಷ ದೊರೆಸ್ವಾಮಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗು ಸೇರಿದಂತೆ ಹಲವರಿದ್ದರು.

ಉನ್ನತ ಶ್ರೇಣಿಯಲ್ಲಿ ಉತ್ತೀರ್ಣ



ತಿ.ನರಸೀಪುರ, ಮೇ 11– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಸೋಸಲೆ ಗ್ರಾಮದ ಸರ್ಕಾರಿ ಆದರ್ಶ ಶಾಲೆ ವಿದ್ಯಾರ್ಥಿ ಎ.ಎಂ.ಪ್ರೀತಮ್ 558 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈತ ಚಾಮರಾಜನಗರ ತಾಲೂಕಿನ ಆಲ್ದೂರು ಗ್ರಾಮದ ಎಂ.ಎಸ್.ಮಹದೇವಸ್ವಾಮಿ ಅವರ ಪುತ್ರ.

ಪಲ್ಲವಿಗೆ ಶೇ.85ರಷ್ಟು ಅಂಕ



ತಿ.ನರಸೀಪುರ, ಮೇ 11– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ಶ್ರೀಆದಿಚುಂಚನಗಿರಿ ಬಾಲ ಜಗತ್ ಆಲಯ ವಿದ್ಯಾರ್ಥಿನಿ ಪಲ್ಲವಿ 530(ಶೇ.85) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಪತ್ರಿಕಾ ವಿತರಕ ಪುಟ್ಟಸ್ವಾಮಿ ಅವರ ಪುತ್ರಿ.

ರೋಟರಿ ಪ್ರೌಢಶಾಲೆಗೆ ಶೇ.85.29 ಫಲಿತಾಂಶ

ಬನ್ನೂರು, ಮೇ 11– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ರೋಟರಿ ಪ್ರೌಢಶಾಲೆಗೆ ಶೇ.85.29 ರಷ್ಟು ಫಲಿತಾಂಶ ಬಂದಿದೆ.

ಶಾಲೆಯ ವಿದ್ಯಾರ್ಥಿಗಳಾದ ಕುಸುಮ (588) ಶೇ.94.08, ಆಲಿಯ ಕುಲ್ಸಮ್ (587) ಶೇ.93.92, ಸಂಜನಾ (582) ಶೇ.93.12, ಬಿ.ಎಂ.ದಿಗಂತ್ (575) ಶೇ.92, ಟಿ.ಸಿ.ಪ್ರಣೀತ (568) ಶೇ.90.88 ಪಡೆದಿದ್ದು, ಅತ್ಯುನ್ನತ 11, ಪ್ರಥಮ 14, ದ್ವಿತೀಯ ಶ್ರೇಣಿಯಲ್ಲಿ ನಾಲ್ವರು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

ಇಂದು ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ

ಡಾ.ಬಿ.ಆರ್.ಅಂಬೇಡ್ಕರ್ 134ನೇ ಜಯಂತಿ, ಪುತ್ಥಳಿ ಅನಾವರಣ

ಹೆಚ್.ಡಿ.ಕೋಟೆ, ಮೇ 11– ಜಿಲ್ಲಾಡಳಿತ ಮತ್ತು ಜಿಪಂ ವತಿಯಿಂದ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮ ಮೇ 12ರಂದು ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಮೆರವಣಿಗೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದವರೆಗೆ ಹಮ್ಮಿಕೊಳ್ಳಲಾಗಿದೆ. ವೇದಿಕೆ ಕಾರ್ಯಕ್ರಮ ಬೆಳಗ್ಗೆ 10 ಗಂಟೆಗೆ ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಸಚಿವ ಕೆ.ವೆಂಕಟೇಶ್ ಘನ ಉಪಸ್ಥಿತಿಯಲ್ಲಿ, ಶಾಸಕ ಅನಿಲ್ ಅಧ್ಯಕ್ಷತೆ ವಹಿಸಲಿದ್ದಾರೆ.


ಕಾರ್ಯಕ್ರಮಕ್ಕಾಗಿ ಸಿದ್ಧಗೊಂಡಿರುವ ವೇದಿಕೆ

ಗೃಹ ಸಚಿವ ಜಿ.ಪರಮೇಶ್ವರ್, ಇಂಧನ ಸಚಿವ ಕೆ.ಜೆ.ಜಾರ್ಜ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ಸಚಿವ ಪ್ರಿಯಾಂಕ್ ಖರ್ಗೆ, ವಸತಿ ಹಾಗೂ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್, ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ, ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್, ನಗರಾಭಿವೃದ್ಧಿ ಹಾಗೂ ನಗರಯೋಜನಾ ಸಚಿವ ಸುರೇಶ್ ಬಿ.ಎಸ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಉಪಸ್ಥಿತರಿರಲಿದ್ದಾರೆ.

> ಮಹನೀಯರ ಜಯಂತಿ ಕಾರ್ಯಕ್ರಮ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇನ್ನಿತರ ಗಣ್ಯರ ಸಮ್ಮುಖದಲ್ಲಿ ಅರ್ಥಪೂರ್ಣವಾಗಿ ನಡೆಯುತ್ತಿರುವುದು ತಾಲೂಕಿನ ಸೌಭಾಗ್ಯವಾಗಿದೆ. ಜೊತೆಗೆ ಕ್ಷೇತ್ರದ ಅಭಿವೃದ್ಧಿಗೆ ಕೋಟ್ಯಾಂತರ ರೂ. ಅನುದಾನದ ಕಾಮಗಾರಿಗಳಿಗೂ ಚಾಲನೆ ದೊರಕಲಿದೆ. ಜೊತೆಗೆ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಲಾಗುವುದು. ಮುಖ್ಯಮಂತ್ರಿಗಳು ಹೆಚ್.ಡಿ.ಕೋಟೆಗೆ ಭೇಟಿ ನೀಡುತ್ತಿರುವುದು ಅಭಿವೃದ್ಧಿಗೆ ಪೂರಕವಾಗಿದೆ. –ಅನಿಲ್, ಶಾಸಕ.

ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿರಮೇಶ್ ಬಂಡಿಸಿದ್ದೇಗೌಡ, ಚಾಮರಾಜನಗರ ಕ್ಷೇತ್ರದ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ. ಅಧ್ಯಕ್ಷ ಸಿ.ಪುಟ್ಟರಂಗಶೆಟ್ಟಿ, ಕ.ನ.ನೀ.ಸ. ಮತ್ತು ಒ.ಚ ಮಂಡಳಿ ಅಧ್ಯಕ್ಷ ವಿನಯ್ ಕುಲಕರ್ಣಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಉಪಸ್ಥಿತರಿರಲಿದ್ದಾರೆ.

ಸಂಸದ ಯದುವೀರ್, ಸುನೀಲ್ ಬೋಸ್, ಶಾಸಕರಾದ ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ದರ್ಶನ್, ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಎಂಎಲ್‌ಸಿಗಳಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ.ಯತೀಂದ್ರ ಮತ್ತು ವಿವೇಕಾನಂದ ಎಸ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಇನ್ನಿತರರು ಪಾಲ್ಗೊಳ್ಳುವರು.

ಉದ್ದೂರು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಮಹೇಶ್ ಅಧ್ಯಕ್ಷ

ಹುಣಸೂರು, ಮೇ 11– ತಾಲೂಕಿನ ಉದ್ದೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಮಹೇಶ್ ಹಾಗೂ ಉಪಾಧ್ಯಕ್ಷರಾಗಿ ಪದ್ಮ ಜನಾರ್ಧನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿಗೆ 12 ನಿರ್ದೇಶಕರು ಆಯ್ಕೆಯಾಗಿದ್ದರು. ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಮಹೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಪದ್ಮ ಜನಾರ್ಧನ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹುಣಸೂರು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ರಾಜಣ್ಣ ಘೋಷಿಸಿದರು. ಕಾರ್ಯದರ್ಶಿ ಪ್ರಸನ್ನ ಹಾಜರಿದ್ದರು.

ನೂತನ ಅಧ್ಯಕ್ಷ ಮಹೇಶ್ ಮಾತನಾಡಿ, ರೈತರ ಅನುಕೂಲಕ್ಕಾಗಿ ದೂರು ಪೆಟ್ಟಿಗೆ ಅಳವಡಿಸುತ್ತೇವೆ. ಅಲ್ಲದೇ ರೈತರಿಗೆ ದೊರಯಬಹುದಾದ ಸೌಲಭ್ಯಗಳನ್ನು ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಸಂಘದ ಬೆಳೆವಣಿಗೆಗೆ ನಿರ್ದೇಶಕರು, ಸಂಘದ ಸದಸ್ಯರು ಸೇರಿದಂತೆ ಎಲ್ಲರೂ ಸಹಕರಿಸಬೇಕು ಎಂದರು.

ಇದೇ ವೇಳೆ ನೂತನ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷರಾದ ಪದ್ಮ ಜನಾರ್ಧನ್ ಅವರನ್ನು ಮುಖಂಡರು ಹಾಗೂ ಗ್ರಾಮಸ್ಥರು ಅಭಿನಂದಿಸಿದರು. ಈ ವೇಳೆ ನಿರ್ದೇಶಕರಾದ ಮಹದೇವ್, ಬೀರೇಗೌಡ, ಸಣ್ಣಸ್ವಾಮಿಗೌಡ, ತಿಮ್ಮೇಗೌಡ, ಕರಿಗೌಡ, ತಿಮ್ಮನಾಯಕ, ಎಲ್.ಮಾದೇವ್, ರಾಜೇಶ್ವರಿ, ಕೃಷ್ಣಶೆಟ್ಟಿ ಶಿವಣ್ಣಶೆಟ್ಟಿ ಇನ್ನಿತರರಿದ್ದರು.


ಉದ್ದೂರು ಡೇರಿ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮಹತ್ವವಾದುದು


ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಸರಗೂರು, ಮೇ 11– ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮಹತ್ವವಾದುದು. ಮಕ್ಕಳನ್ನು ಭಾರತದ ಭವಿಷ್ಯರನ್ನಾಗಿ ರೂಪಿಸುವುದೇ ಶಿಕ್ಷಕರ ಗುರಿ ಎಂದು ನಿವೃತ್ತ ಶಿಕ್ಷಕ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ 2004–2005ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಂದ ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹಿತರ ಸಮಾಗಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಶಿಷ್ಯಂದಿರು ಗುರುಗಳ ಆದರ್ಶ ಪಾಲಿಸಿಕೊಂಡು ಬರುತ್ತಿದ್ದಾರೆ. ನಾವು ಗಳಿಸಿದ ಆಸ್ತಿ, ಅಂತಸ್ತು ಸಂಪತ್ತು ಯಾವುದೂ ಕೊನೆಯವರೆಗೆ ಉಳಿಯುವುದಿಲ್ಲ. ಆದರೆ ಕಲಿತ ವಿದ್ಯೆ ಮಾತ್ರ ಕೊನೆವರೆಗೂ ಜೊತೆಯಲ್ಲಿರುತ್ತದೆ. ವಿದ್ಯಾರ್ಥಿಗಳ ಜೀವನದಲ್ಲಿ ಗುರಿ, ಛಲ, ಗುರುವಿನ ಆಶೀರ್ವಾದ ಇದ್ದರೆ ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಲು ಸಾಧ್ಯ. ಹೀಗಾಗಿ ಸಾಧಕರ ಹಿಂದೆ ಗುರುಗಳು ಇರುತ್ತಾರೆ ಎಂದರು.

ಈ ವೇಳೆ ಶಿಕ್ಷಕರಾದ ಸಿದ್ದೇಗೌಡ, ಸ್ವಾಮಿ, ಮಂಜುಳ, ಥಾಮಸ್, ನಾಗಚಂದ್ರ ರೇವಣ್ಣ ಸೌಭಾಗ್ಯ, ಶ್ರೀಕಂಠ ಶರ್ಮ, ರಾಮಕೃಷ್ಣ, ಸಿದ್ದರಾಜು, ಕಾಂತಮ್ಮ, ಶೈಲಜಾ, ರೇವತಿ, ಗೋವಿಂದನಾಯಕ ಅವರನ್ನು ಹಳೇ ವಿದ್ಯಾರ್ಥಿಗಳು ಅಭಿನಂದಿಸಿದರು.

ಅಭಿನಂದನೆ


ಕೆ.ಆರ್.ನಗರ ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕ, ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ ಅವರನ್ನು ಸಿದ್ದಾಪುರ ಪಿಎಸಿಎಸ್ ಅಧ್ಯಕ್ಷ ಎಂ.ಎಸ್.ಹರಿಚಿದಂಬರ ಮತ್ತು ಜಿಲ್ಲಾ ಯುವ ಜೆಡಿಎಸ್ ಮುಖಂಡ ಹೆಚ್.ಕೆ.ಮಧುಚಂದ್ರ ಅಭಿನಂದಿಸಿದರು.

ಗೊಂದಲ ನಿವಾರಣೆಗೆ ಗ್ರಾಮಸಭೆ ಪೂರಕ



ಕಂಪಲಾಪುರ, ಮೇ 11– ಗ್ರಾಮ ಸಭೆ [illegible] ಕಾರ್ಯಕ್ರಮಗಳಲ್ಲಿ ಆಡಳಿತ ಮಂಡಳಿ ಕೈಗೊಂಡ ನಿರ್ಣಯಗಳನ್ನು ಬಹಿರಂಗವಾಗಿ ಸಾರ್ವಜನಿಕರ ಸಮ್ಮುಖದಲ್ಲಿ ಚರ್ಚಿಸುವುದರಿಂದ ಗ್ರಾಮಗಳಲ್ಲಿ ಆರೋಗ್ಯಕರ ವಾತಾವರಣ ಜೊತೆಗೆ ಗೊಂದಲಗಳ ನಿವಾರಣೆಗೆ ಸಹಕಾರಿಯಾಗಲಿದೆ ಎಂದು ತಾಪಂ ಸಹಾಯಕ ನಿರ್ದೇಶಕ ಕರುಣಾಕರ್ ಅಭಿಪ್ರಾಯಪಟ್ಟರು.

ಗ್ರಾಮದಲ್ಲಿ ನಡೆದ ವಿಶೇಷ ಗ್ರಾಮ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಗೊಂದಲದಲ್ಲಿದ್ದ ಗ್ರಾಮ ಠಾಣಾ ವ್ಯಾಪ್ತಿ ಜಾಗದಲ್ಲಿ ಅರ್ಹ ನಿವೇಶನ ರಹಿತರಿಗೆ ನಿವೇಶನ ಹಂಚಲು ಮೇಲಾಧಿಕಾರಿಗಳ ಸೂಚನೆಯಂತೆ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದರು.

ಆದರೆ ಇದಕ್ಕೆ ಸಮ್ಮತಿ ನೀಡದ ದಲಿತ ಮುಖಂಡರು, ಈ ಖಾಲಿ ಜಾಗದಲ್ಲಿ ನಮ್ಮ ಪೂರ್ವಜರು ವಾಸವಾಗಿದ್ದು ಕಾರಣಾಂತರಗಳಿಂದ ಸ್ಥಳಾಂತರಗೊಂಡರು. 2022ರ ಸರ್ವೇ ಬಳಿಕ ಗ್ರಾಮ ಠಾಣಾ ಜಾಗ ಎಂದು ಗುರುತಿಸಿ ಇದು ದಲಿತರಿಗೆ ಸೇರಬೇಕು ಎಂದು ಧ್ವನಿಗೂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿ, ಈ ಹಿಂದೆ ಸಮುದಾಯಗಳ ಆಧಾರದ ಮೇಲೆ ಸ್ಥಳಗಳನ್ನು ಹಂಚಿ ನಿವೇಶನ ನೀಡಲಾಗುತ್ತಿತ್ತು. ಬದಲಾದ ಕಾಲಘಟ್ಟದಲ್ಲಿ ಕೋರ್ಟ್‌ನ ಆದೇಶದಂತೆ ಯಾವುದೇ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ನಿವೇಶನ ಹಂಚಲು ಕೇವಲ ಒಂದು ಸಮುದಾಯಕ್ಕೆ ನೀಡದೆ ಪ್ರತಿಯೊಂದು ಸಮುದಾಯದಲ್ಲೂ ನಿವೇಶನ ರಹಿತರನ್ನು ಗುರುತಿಸಿ ನೀಡುವಂತೆ ಆದೇಶ ನೀಡಲಾಗಿದ್ದು, ಸದರಿ ಅನ್ವಯ ಪಂಚಾಯಿತಿ ಅಧಿಕಾರಿಗಳು ಅರ್ಜಿ ನೀಡುವಂತೆ ಸೂಚಿಸಲಾಗಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ದಲಿತ ಮುಖಂಡರು ಕಂಪ್ಲಾಪುರದಲ್ಲಿ ಇನ್ನೂ ಅನೇಕ ಗ್ರಾಮ ಠಾಣಾ ಜಾಗಗಳಿದ್ದು ಅವುಗಳನ್ನು ತೆರವುಗೊಳಿಸಿ ಪಂಚಾಯಿತಿ ಸುಪರ್ದಿಗೆ ಪಡೆದುಕೊಂಡು ನಂತರ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುವಂತೆ ಒತ್ತಾಯಿಸಿದರು. ಇದಕ್ಕೆ ಉತ್ತರಿಸಿದ ಪಿಡಿಓ ಪರಮೇಶ್ ಶೀಘ್ರದಲ್ಲೇ ಗ್ರಾಮ ಠಾಣಾ ವ್ಯಾಪ್ತಿಯ ಜಾಗಗಳನ್ನು ತೆರವುಗೊಳಿಸಿ ಆಡಳಿತ ಮಂಡಳಿ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಸಣ್ಣತಮ್ಮಯ್ಯ, ಕಾರ್ಯದರ್ಶಿ ಸುಷ್ಮಾ, ಉಪಾಧ್ಯಕ್ಷೆ ಸುಮಾ, ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

ಬಡವರ ಸೇವೆ, ದೇವರ ಆರಾಧನೆಗೆ ಜೀವನ ಮುಡಿಪಾಗಿಟ್ಟ ಬಸವಣ್ಣ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ

ತಿ.ನರಸೀಪುರ, ಮೇ 11– ವಿಚಾರವಾದಿಗಳಾಗಿದ್ದ ಬಸವಣ್ಣನವರು 12ನೇ ಶತಮಾನದಲ್ಲೇ ಜನಸಾಮಾನ್ಯರ ನೋವುಗಳನ್ನು ಕಂಡು ತಮ್ಮ ಜೀವನವನ್ನು ಬಡಜನರ ಸೇವೆಗೆ ಹಾಗೂ ದೇವರ ಆರಾಧನೆಗೆ ಮುಡಿಪಾಗಿಟ್ಟಿದ್ದರು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ತಾಲೂಕಿನ ಡಣಾಯಕನಪುರದಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್, ಶ್ರೀಶಿವಕುಮಾರ ಸ್ವಾಮಿ ಸೇವಾ ಟ್ರಸ್ಟ್ ಮತ್ತು ಬಸವೇಶ್ವರ ಯುವಕರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಹಾಗೂ ಶರಣ ಸಾಹಿತೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಾತಿ, ಮತ ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣರಾದರು. ಹೀಗಾಗಿ ಬಸವಣ್ಣನವರ ಆದರ್ಶ ತತ್ವಗಳನ್ನು ಜನತೆ ಪಾಲಿಸಬೇಕು. ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಬಂಡಾರಿ ಬಸವಣ್ಣ ಇನ್ನು ಮುಂತಾದ ಹೆಸರುಗಳನ್ನೊಳಗೊಂಡ ಬಸವಣ್ಣನವರ ಜನ್ಮದಿನವನ್ನು ಆಚರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಜನತೆ ಬಸವಣ್ಣನವರ ವಚನದಲ್ಲಿರುವ ತತ್ವಗಳು, ಸಿದ್ಧಾಂತಗಳು, ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಇಷ್ಟಲಿಂಗದ ಮೂಲಕವೇ ಮಾನವ ಕಲ್ಯಾಣ ಬಯಸಿದವರಲ್ಲಿ ಬಸವಣ್ಣ ಪ್ರಮುಖರು. ಮೌಢ್ಯ ಧಿಕ್ಕರಿಸಿ ಜನಸಾಮಾನ್ಯರಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸಿದವರು. ಬಸವಾದಿ ಶರಣರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಬಸವ ಅಭಿಮಾನಿಗಳಾಗುವುದಕ್ಕಿಂತ, ಅವರ ಅನುಯಾಯಿಗಳಾಗಬೇಕು. ಆಗ ಮಾತ್ರ ಶರಣರು ಕಂಡ ಜಾತಿ ರಹಿತ, ವರ್ಗ ರಹಿತ ಸಮಾಜ ನಿರ್ಮಿಸಲು ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಚನ ಸಾಹಿತ್ಯ, ಶರಣ ಸಾಹಿತ್ಯಗಳು ಕೇವಲ ಸಾಹಿತ್ಯವಲ್ಲ. ಇವು ವಿಧಾನ, ಸಾಮಾಜಿಕ ಪರಿವರ್ತಕ ಶಕ್ತಿ. ಸಮಾಜ ಸುಧಾರಣೆ ಮೂಲ ಧ್ಯೇಯದೊಂದಿಗೆ ರಚಿತವಾದುದ್ದು ವಚನ ಸಾಹಿತ್ಯ ಮತ್ತು ಶರಣ ಸಾಹಿತ್ಯ ಎಂದರು.


ಬಸವ ಜಯಂತಿ ಹಾಗೂ ಶರಣ ಸಾಹಿತೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ಬಸವಣ್ಣನವರು ತಮ್ಮ ತತ್ವ ಮತ್ತು ಆದರ್ಶಗಳ ಮುಖೇನ ಕರ್ನಾಟಕ ಮಾತ್ರವಲ್ಲದೇ ಇಡೀ ವಿಶ್ವದಲ್ಲೇ ಹೆಸರುವಾಸಿಯಾಗಿದ್ದಾರೆ. ಅವರು ವಚನಗಳನ್ನು ರಚಿಸುವುದಲ್ಲದೆ ಸಾಮಾಜಿಕ ಪರಿವರ್ತನೆಯಲ್ಲೂ ಸಕ್ರಿಯರಾಗಿ ಅನುಭವ ಮಂಟಪ ಸ್ಥಾಪಿಸಿ ಸಮಾಜದ ಎಲ್ಲಾ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಿ ವರ್ಣಬೇಧ, ಜಾತಿಬೇಧ, ವರ್ಗಬೇಧ, ಮೂಢನಂಬಿಕೆ, ಅಸಮಾನತೆ ಮತ್ತು ಕಂದಾಚಾರಗಳನ್ನು ಅಳಿಸುವುದಕ್ಕಾಗಿ ಬಸವಣ್ಣ ಸಾಕಷ್ಟು ಶ್ರಮಿಸಿದರು ಎಂದರು.

> ಶರಣ ಸಾಹಿತ್ಯ ಪರಿಷತ್ ಸಂಸ್ಥಾಪಕರಾದ ಶ್ರೀರಾಜೇಂದ್ರ ಶ್ರೀಗಳು ಪ್ರಾತಃಸ್ಮರಣೀಯರು. ಬಸವಣ್ಣನವರ ತತ್ವಗಳು ಕೇವಲ ಪ್ರದರ್ಶನ, ಮಾತಾಡುವುದಕ್ಕೆ ಸೀಮಿತವಾಗಬಾರದು. ಬಸವಣ್ಣ ಅವರ ವಿಚಾರ, ಆದರ್ಶಗಳನ್ನು ಅನುಸರಿಸಿದಾಗ ಮಾತ್ರ ಸಾಮಾಜಿಕ ಪರಿವರ್ತನೆ ಸಾಧ್ಯವಾಗುತ್ತದೆ. –ಶ್ರೀಡಾ.ಸಿದ್ದಲಿಂಗ ಶಿವಚಾರ್ಯ ಸ್ವಾಮೀಜಿ, ವಾಟಾಳು ವಿರಕ್ತ ಮಠ.

ಈ ವೇಳೆ ವಿಶ್ರಾಂತ ಪ್ರಾಂಶುಪಾಲ ಪ್ರೊ.ಚಂದ್ರಶೇಖರಯ್ಯ ಮತ್ತು ಸಾಮಾಜ ಸೇವಕ ಕೆ.ಎಸ್.ಮಾದಪ್ಪ ಅವರನ್ನು ಸನ್ಮಾನಿಸಲಾಯಿತು. ಮಾಡ್ರಹಳ್ಳಿ ಪಟ್ಟದ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮಿ, ಇಮ್ಮಡಿ ಶಿವಕುಮಾರಸ್ವಾಮಿ, ರೇಣುಕಾ ಶಿವಾಚಾರ್ಯ ಸ್ವಾಮೀಜಿ, ಗುರುಪಾದ ಶಿವಾಚಾರ್ಯ ಸ್ವಾಮೀಜಿ, ಮಲ್ಲಿನಾಥ ಶಿವಾಚಾರ್ಯ ಸ್ವಾಮೀಜಿ, ಇಮ್ಮಡಿ ಬಸವಲಿಂಗಸ್ವಾಮಿ, ಸಹಜಾನಂದ ಸ್ವಾಮೀಜಿ, ರಾಜಶೇಖರ ಸ್ವಾಮೀಜಿ, ಮಲ್ಲಪ್ಪ ಸ್ವಾಮೀಜಿ, ನಾಗಪ್ಪ ಸ್ವಾಮೀಜಿ, ಮಹದೇವಸ್ವಾಮೀಜಿ, ನಂದಿಕೇಶ್ವರ ಸ್ವಾಮೀಜಿ, ಪುರಸಭಾ ಸದಸ್ಯ ಕೆ.ಕಿರಣ್, ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ತಾಲೂಕು ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ರವಿ, ಕಾರ್ಯದರ್ಶಿ ತುಂಬಲ ನಾಗರಾಜು, ಶ್ರೀಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆಬ್ಬೆಹುಂಡಿ ಸೋಮಶೇಖರಪ್ಪ, ಕಾರ್ ಮಲ್ಲಪ್ಪ, ಓಂಕಾರಮೂರ್ತಿ, ಗ್ರಾಮದ ಮುಖಂಡರಾದ ಕುಮಾರ್, ಮಹದೇವಪ್ಪ ಪ್ರಸನ್ನ, ಚಂದ್ರು ಸೋಮು, ಎಸ್.ಬಿ.ಸುಗಂಧ ರಾಜು, ಚಿನ್ನಬುದ್ದಿ, ರಾಜಬುದ್ದಿ, ಕುರುಬೂರು ಶಿವು, ಆಡಿಟರ್ ಮಂಜುನಾಥ್, ಮಹದೇವಸ್ವಾಮಿ ಇತರರಿದ್ದರು.

ಮುತ್ತಣ್ಣ ನಿಧನ



ಬೆಟ್ಟದಪುರ, ಮೇ 11– ಇಲ್ಲಿಗೆ ಸಮೀಪದ ಗೊರಹಳ್ಳಿ ಗ್ರಾಮದ ನಿವಾಸಿ ಮುತ್ತಣ್ಣ (70) ಭಾನುವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀರಮ್ಮ



ಹುಣಸೂರು, ಮೇ 11– ನಗರದ 12ನೇ ವಾರ್ಡ್ ನಿವಾಸಿ ಲೇ.ಸುಬ್ರಮಣಿ ಅವರ ಪತ್ನಿ ಟಿ.ವಿ.ವೀರಮ್ಮ(96) ಭಾನುವಾರ ನಿಧನರಾದರು. ಮೃತರು ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ 2 ಗಂಟೆಗೆ ತಾಲೂಕು ಕಚೇರಿ ಪಕ್ಕದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಜಾತಿ ಬಗ್ಗೆ ಪ್ರೀತಿ ಇರಲಿ, ಜಾತಿವಾದಿಯಾಗುವುದು ಬೇಡ, ಧರ್ಮದ ಬಗ್ಗೆ ಅಭಿಮಾನವಿರಲಿ, ಧರ್ಮಾಂಧರಾಗುವುದು ಬೇಡ

ಬಂಟರ ಸಂಘದ ಸ್ವರ್ಣ ಮಹೋತ್ಸವದಲ್ಲಿ ಮಾಜಿ ಸಚಿವ ರಮಾನಾಥ ರೈ ಮನವಿ



ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನದಲ್ಲಿ ಆಯೋಜಿಸಿದ್ದ ಬಂಟರ ಸಂಘದ ಸ್ವರ್ಣ ಮಹೋತ್ಸವದ ಸಮಾರಂಭದಲ್ಲಿ ಬಯಲು ರಂಗಮಂದಿರದ ಶಿಲಾನ್ಯಾಸ ಅನಾವರಣಗೊಳಿಸಲಾಯಿತು.

ಮೈಸೂರು, ಮೇ11(ಜಿಎ)–ಜಾತಿಯ ಬಗ್ಗೆ ಪ್ರೀತಿ ಇರಲಿ. ಆದರೆ ಜಾತಿವಾದಿಯಾಗುವುದು ಬೇಡ. ಧರ್ಮದ ಬಗ್ಗೆ ಅಭಿಮಾನವಿರಲಿ, ಆದರೆ ಧರ್ಮಾಂಧರಾಗುವುದು ಬೇಡ ಎಂದು ಮಾಜಿ ಸಚಿವ ಬಿ.ರಮಾನಾಥ ರೈ ಮನವಿ ಮಾಡಿದರು.

ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನದಲ್ಲಿ ಆಯೋಜಿಸಿದ್ದ ಬಂಟರ ಸಂಘದ ಸ್ವರ್ಣ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದ ಹಲವಾರು ಕಡೆ ಬಂಟ ಸಮುದಾಯದವರಿದ್ದು, ಅಲ್ಲಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದರೂ ಮೈಸೂರಿನಲ್ಲಿರುವ ಕೇವಲ 800 ಮಂದಿ ಸಂಘ ನಿರ್ಮಿಸಿಕೊಂಡಿರುವ ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನದ ವ್ಯವಸ್ಥಿತತೆ ಇತರರಿಗೆ ಮಾದರಿಯಾಗಿದೆ. ತಮಗೆ ಇನ್ನಿತರ ಬಂಟರ ಸಂಘಗಳೊಡನೆ ಸಂಪರ್ಕವಿದೆಯಾದರೂ ಮೈಸೂರಿನ ಸಂಘದ ಜೊತೆಗೆ ವಿಶೇಷ ನಂಟಿದೆ ಎಂದರು.

ಸಾಮಾಜಿಕ ಬದುಕಿನಲ್ಲಿ ಧರ್ಮ, ಜಾತಿಯ ಜನರಿರುವುದು ಸತ್ಯ. ಆದರೆ ಸಾಮಾಜಿಕವಾಗಿ ಬದುಕುವಾಗ ಪ್ರಾಮಾಣಿಕತೆಯಿಂದಿರಬೇಕು. ತಮ್ಮ ಸಮಾಜಕ್ಕೆ ಅಗೌರವ ತರುವ ಕೆಲಸ ಮಾಡುವುದು ಸರಿಯಲ್ಲ. ಜಾತಿಯ ಬಗ್ಗೆ ಪ್ರೀತಿ ಇರಲಿ, ಆದರೆ ಜಾತಿವಾದಿಯಾಗುವುದು ಬೇಡ, ಧರ್ಮದ ಬಗ್ಗೆ ಅಭಿಮಾನವಿರಲಿ, ಆದರೆ ಧರ್ಮಾಂಧರಾಗುವುದು ಬೇಡ ಬಂಟ ಸಮುದಾಯದವರು ಎಲ್ಲರನ್ನೂ ಜೊತೆಗೆ ಕೊಂಡೊಯ್ಯುವವರಾಗಿದ್ದಾರ ಎಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿವಿಯ ವಿಶ್ರಾಂತ ಕುಲಪತಿ ಡಾ.ಎಸ್. ಚಂದ್ರಶೇಖರ ಶೆಟ್ಟಿ ಮಾತನಾಡಿ, ಸಾಧನೆ ಮಾಡುವಾಗ ಸಮಾಜ ನಮಗೆ ಏನನ್ನು ನೀಡಿದೆ ಎಂಬುದರ ಅರಿವಿನಿಂದ ನಾವೂ ಸಮಾಜಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು. ಸಮುದಾಯದಲ್ಲಿ ಅನೇಕರು ದೊಡ್ಡ ದೊಡ್ಡ ಸಾಧನೆ ಮಾಡಿದ್ದಾರೆ. ಇದು ಇವರಿಗೆ ನೆನಪಿರಬೇಕು. ಯಾರಿಗೆ ಏನೇ ಆದರೂ ನನಗೇನು ಎಂಬ ಮನೋಭಾವ ಸರಿಯಲ್ಲ. ಬಂಟ ಸಮುದಾಯ ಈ ನಿಟ್ಟಿನಲ್ಲಿ ನಿಸ್ವಾರ್ಥತೆಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಯಾವುದೇ ಒಂದು ಸಂಸ್ಥೆಯ ಇತಿಹಾಸದಲ್ಲಿ 50 ವರ್ಷ ಸುಲಭವಾಗಿ ಬರುವಂತದ್ದಲ್ಲ, ಏಳು ಬೀಳು, ಕಷ್ಟ ಸುಖ, ನೋವು ನಲಿವು ಕಾಣಬೇಕಾಗುತ್ತದೆ. ಬಂಟರು ಮೂಲತಃ ಕೃಷಿಕರಾಗಿರುವ ಕಾರಣದಿಂದಾಗಿ ತಾಯಿ ಹೃದಯ ಹೊಂದಿದವರಾಗಿದ್ದಾರೆ ಎಂದು ನುಡಿದರು.

ಜಗತ್ತಿನಾದ್ಯಂತ ಎಲ್ಲಿಗೇ ಹೋದರೂ ಬಂಟ ಸಮುದಾಯದವರು ಕಾಣುತ್ತಾರೆ. ಅವರ ಹೋಟೆಲ್ ಇದ್ದೇ ಇರುತ್ತದೆ. ದೊಡ್ಡ ದೊಡ್ಡ ಸಮುದಾಯಗಳಿಗೂ ಸಾಧ್ಯವಾಗದ ಸಾಧನೆ ಇವರು ಮಾಡಿದ್ದಾರೆ. ಯಾವುದೇ ಸಂಘರ್ಷಕ್ಕೂ ಅವಕಾಶ ಕೊಡದೇ ಸಹೋದರತೆ, ಪ್ರೀತಿ, ನಿಷ್ಠೆ, ಪ್ರಾಮಾಣಿಕತೆಯಿಂದ ತೊಡಗಿಸಿಕೊಳ್ಳುವುದೇ ಈ ಸಮುದಾಯದ ಯಶಸ್ಸಿಗೆ ಕಾರಣವಾಗಿದೆ ಎಂದರು.

ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಎಲ್ಲ ಕ್ಷೇತ್ರಗಳಲ್ಲಿಯೂ ಬಂಟ ಸಮುದಾಯದವರ ಸಾಧನೆ ಇತರರಿಗೆ ಪ್ರೇರಕ, ಈ ಸಮುದಾಯದವರು ದೇಶದ ಆರ್ಥಿಕ ಶಕ್ತಿಗೆ ಬಹುದೊಡ್ಡ ಕೊಡುಗೆ ನೀಡುತ್ತಿದ್ದಾರೆ. ಎಲ್ಲರನ್ನೂ ಸಮಾನತೆಯಿಂದ, ಪ್ರೀತಿಯಿಂದ ಕಾಣುವವರಾಗಿದ್ದಾರೆಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಬಯಲು ರಂಗಮಂದಿರದ ಶಿಲಾನ್ಯಾಸ ಅನಾವರಣಗೊಳಿಸಿ, ಸಮುದಾಯದ ಸಾಧಕರನ್ನು ಅಭಿನಂದಿಸಲಾಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು. ಸಂಘದ ಅಧ್ಯಕ್ಷ ಟಿ. ಪ್ರಭಾಕರ್ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಡಾ.ಕೆ. ಪ್ರಕಾಶ್ ಶೆಟ್ಟಿ ಬಂಟ ಸ್ವರ್ಣ ಸಿರಿ ಸಂಚಿಕೆ ಬಿಡುಗಡೆಗೊಳಿಸಿದರು. ಡಾ.ಎಂ.ಮೋಹನ್ ಆಳ್ವ, ಸತೀಶ್ ಶೆಟ್ಟಿ, ಸರ್ವೋತ್ತಮ ಶೆಟ್ಟಿ, ಸುರೇಶ್ ಆಳ್ವ, ಎಂ. ನಂದ್ಯಪ್ಪ ಶೆಟ್ಟಿ, ಅಲಕಾರಾಣಿ ಎಸ್. ಶೆಟ್ಟಿ ತುಕಾರಾಂ ರೈ ಉಪಸ್ಥಿತರಿದ್ದರು.

ಜಾತಿ ಗಣತಿಯಲ್ಲಿ ನೇಕಾರ ಸಮುದಾಯಕ್ಕೆ ಭಾರೀ ಅನ್ಯಾಯ

ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ ಕಿಡಿ



ಮೈಸೂರು, ಮೇ 11– ರಾಜ್ಯ ಸರ್ಕಾರದ ವತಿಯಿಂದ ನಡೆದ ಜಾತಿ ಗಣತಿಯಲ್ಲಿ ನೇಕಾರ ಸಮುದಾಯಕ್ಕೆ ಭಾರೀ ಅನ್ಯಾಯವಾಗಿದೆ ಎಂದು ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ ಕಿಡಿಕಾರಿದರು.

ಮೈಸೂರಿನ ಉತ್ತನಹಳ್ಳಿಯಲ್ಲಿರುವ ಶ್ರೀ ಮಾತಾ ಕಲ್ಯಾಣ ಮಂಟಪದಲ್ಲಿ ಆಂಧ್ರ ದೇವಾಂಗ ಸಂಘ ಏರ್ಪಡಿಸಿದ್ದ ಯುಗಾದಿ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೇಕಾರ ಸಮುದಾಯದಲ್ಲಿ 29 ಉಪ ಪಂಗಡಗಳಿದ್ದು, ಜನಸಂಖ್ಯೆ ರಾಜ್ಯದಲ್ಲಿ ಅಂದಾಜು 60 ಲಕ್ಷದಷ್ಟಿದೆ ಎಂದು ನಾವು ಹೇಳುತ್ತಿದ್ದೇವೆ. ಆದರೆ, ಜನಗಣತಿಯಲ್ಲಿ ಕೇವಲ 9 ಲಕ್ಷ ಎಂದು ದಾಖಲಿಸಿರುವುದು ಭಾರೀ ಅನ್ಯಾಯವಾಗಿದ್ದು, ಇದರ ವಿರುದ್ಧ ಹೋರಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದರು.

ಜಾತಿ ಗಣತಿ ಮಾಡುವವರು ಎಲ್ಲರ ಮನೆಗಳಿಗೂ ಭೇಟಿ ನೀಡಿ ಗಣತಿ ಮಾಡದೇ ಇರುವುದು ಒಂದು ಕಡೆಯಾದರೆ, ಮತ್ತೊಂದೆಡೆ ಗಣತಿ ಮಾಡಿದವರು ಎಲ್ಲಾ ವಿವರಗಳನ್ನು ಭರ್ತಿ ಮಾಡಿ ಜಾತಿ ಕಾಲಂ ಅನ್ನು ಭರ್ತಿ ಮಾಡದೆ ಆ ನಂತರ ತಮಗೆ ಬೇಕಾದ ಜಾತಿಯನ್ನು ಬರೆದುಕೊಂಡಿದ್ದಾರೆ ಎಂದು ಆರೋಪಿಸಿದ ಅವರು, ಈ ವಿಚಾರವು ಸಮುದಾಯದ ಬಾಂಧವರಿಂದ ತಮಗೆ ತಿಳಿದಿದೆ ಎಂದರು.

ಕೇಂದ್ರ ಸರ್ಕಾರ ನಡೆಸಲಿರುವ ಜಾತಿ ಗಣತಿ ನ್ಯಾಯಯುತವಾಗಿರುತ್ತದೆ ಎಂಬ ವಿಶ್ವಾಸ ತಮಗಿದ್ದು, ಆ ಸಂದರ್ಭದಲ್ಲಿ ಸಮುದಾಯದ ಬಾಂಧವರು ಜಾಗ್ರತೆ ವಹಿಸಬೇಕು. ಜಾತಿ ಗಣತಿಗೆ ಬರುವ ಅಧಿಕಾರಿಗಳು ಜಾತಿ ಕಾಲಂನಲ್ಲಿ ನಿಮ್ಮೆದುರೇ ಜಾತಿಯನ್ನು ಭರ್ತಿ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು. ಜಾತಿ ಕಾಲಂನಲ್ಲಿ ದೇವಾಂಗ ಎಂದು ಬರೆಯಿಸಿ, ನಂತರ ಉಪಜಾತಿಯನ್ನು ನಮೂದಿಸುವಂತೆ ನೋಡಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ಆಂಧ್ರ ದೇವಾಂಗ ಸಂಘದ ಅಧ್ಯಕ್ಷ ಎನ್. ಗಿರೀಶ್ ಬಾಬು ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಕಾರ್ಯದರ್ಶಿ ಹಾಗೂ ಅಖಿಲ ಭಾರತ ದೇವಾಂಗ ಸಮ್ಮೇಳನದ ಪ್ರಧಾನ ಕಾರ್ಯದರ್ಶಿ ಹೆಚ್.ಕೆ. ಗೋವಿಂದಪ್ಪ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಎಸ್.ಸೋಮಶೇಖರ್, ಡಿ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಎನ್.ಜಿ. ಕೀರ್ತಿ ಗಣೇಶ್, ಸಂಘದ ಗೌರವಾಧ್ಯಕ್ಷರಾದ ಡಾ. ನಟರಾಜ್, ನಟೇಶ್, ಉಪಾಧ್ಯಕ್ಷೆ ಶಿಲ್ಪಶ್ರೀ, ಪ್ರಧಾನ ಕಾರ್ಯದರ್ಶಿ ನಾಗಮಲ್ಲು, ಸಹ ಕಾರ್ಯದರ್ಶಿ ಬಿ. ಗಂಗಾಧರಯ್ಯ, ಖಜಾಂಚಿ ಜಯಶೇಖರಯ್ಯ ಇನ್ನಿತರರು ಉಪಸ್ಥಿತರಿದ್ದರು.

ಬೆಲೆ ಏರಿಕೆ ನಿಯಂತ್ರಣ, ಕಾರ್ಮಿಕರ ಸಮಸ್ಯೆ ನಿವಾರಣೆಗೆ ಆಗ್ರಹಿಸಿ ಮೇ 14ಕ್ಕೆ ಬೆಂಗಳೂರಲ್ಲಿ ಬೃಹತ್ ಪ್ರತಿಭಟನಾ ಸಭೆ

ಮೈಸೂರು, ಮೇ.11(ಎಂಟಿವೈ)– ಬೆಲೆ ಏರಿಕೆ ನಿಯಂತ್ರಣ ಮಾಡುವುದು ರೈತರು ಮತ್ತು ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಮೇ.14ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ) ಜಿಲ್ಲಾ ಕಾರ್ಯದರ್ಶಿ ಬಿ.ರವಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಈ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಕಾರ್ಮಿಕರು, ರೈತರು ಹಾಗೂ ಅಸಂಘಟಿತ ವರ್ಗದ ನೌಕರರು, ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ. 10 ಸಾವಿರ ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಪ್ರತಿಭಟನಾ ಸಭೆಯಲ್ಲಿ ಎಸ್‌ಯುಸಿಐ ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೋ ಸದಸ್ಯ ಕಾಮ್ರೆಡ್ ಕೆ.ರಾಧಾಕೃಷ್ಣ, ರಾಜ್ಯ ಸೆಕ್ರೆಟೇರಿಯಟ್ ಸದಸ್ಯ ಕಾಮ್ರೇಡ್ ರಾಮಾಂಜನಪ್ಪ ಆಲ್ದಳ್ಳಿ ಮುಖ್ಯ ಭಾಷಣ ಮಾಡಲಿದ್ದು, ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ.ಉಮಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಅಡುಗೆ ಅನಿಲ, ಪೆಟ್ರೋಲ್–ಡೀಸೆಲ್ ಸೇರಿದಂತೆ ದಿನ ಬಳಕೆ ವಸ್ತುಗಳ ಬೆಲೆಯನ್ನು ನಿರಂತರವಾಗಿ ಏರಿಕೆ ಮಾಡುತ್ತಿದೆ. ಇದರಿಂದ ದೇಶದ ಜನತೆ ಅನೇಕ ತೊಂದರೆಗಳಿಗೆ ಸಿಲುಕಿದ್ದಾರೆ. ಮಕ್ಕಳ ಶಿಕ್ಷಣ, ಕುಟುಂಬ ಸದಸ್ಯರ ಆರೋಗ್ಯದ ವೆಚ್ಚವನ್ನು ಜನರೇ ಭರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಜನರ ತೆರಿಗೆ ಹಣವನ್ನು ಅಭಿವೃದ್ಧಿಯ ಹೆಸರಿನಲ್ಲಿ ಕಾರ್ಪೊರೇಟ್ ಕಂಪನಿಗಳು, ದೊಡ್ಡ ಗುತ್ತಿಗೆದಾರರು, ರಾಜಕಾರಣಿಗಳು ಮತ್ತು ಹಿರಿಯ ಅಧಿಕಾರಿಗಳ ಜೇಬು ಸೇರುತ್ತಿದೆ ಇದರಿಂದ ನಿರುದ್ಯೋಗದ ಪ್ರಮಾಣ ಹೆಚ್ಚಾಗಿದೆ ಎಂದು ಕಿಡಿಕಾರಿದರು.

ಬೆಲೆ ಏರಿಕೆಯಲ್ಲಿ ರಾಜ್ಯ ಸರ್ಕಾರವೂ ಹಿಂದೆ ಬಿದ್ದಿಲ್ಲ. ನಿರುದ್ಯೋಗ ಸಮಸ್ಯೆಯಿಂದಾಗಿ ಯುವಜನತೆ ತೊಂದರೆಗೀಡಾಗಿದ್ದಾರೆ. ಮದ್ಯ, ಡ್ರಗ್ಸ್, ಮೊಬೈಲ್ ವ್ಯಸನಗಳ ಮೂಲಕ ಭ್ರಮಾ ಲೋಕಕ್ಕೆ ಅವರನ್ನು ತಳ್ಳಲಾಗಿದೆ. ಇದರ ಪರಿಣಾಮದಿಂದ ಮಹಿಳೆಯರು ನಲುಗಿ ಹೋಗುತ್ತಿದ್ದಾರೆ ಎಂದು ವಿಷಾದಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಚ್ಚಿಸಿರುವ ಎಲ್ಲಾ ಸರಕು ಸೇವೆಗಳ ಬೆಲೆಯನ್ನು ಹಿಂತೆಗೆದುಕೊಳ್ಳಬೇಕು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಅವಶ್ಯಕ ವೈದ್ಯಕೀಯ ಸಿಬ್ಬಂದಿ ನೇಮಿಸಬೇಕು. ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡುವ ಗ್ರಾಮೀಣ ಕೃಷಿ ಕಾರ್ಮಿಕರಿಗೆ ಕೆಲಸದ ದಿನಗಳನ್ನು 200ಕ್ಕೆ ಹೆಚ್ಚಿಸಿ, ಅವರ ಕನಿಷ್ಠ ಕೂಲಿಯನ್ನು ರೂ.600ಕ್ಕೆ ನಿಗದಿ ಮಾಡಬೇಕು. ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ನೀಡಬೇಕು. ವಿದ್ಯುತ್ ಮಸೂದೆ–2022ರ ತಿದ್ದುಪಡಿಯನ್ನು ಹಿಂತೆಗೆದುಕೊಂಡು ಸ್ಮಾರ್ಟ್ ಮೀಟರ್ ಅಳವಡಿಕೆ ನಿಲ್ಲಿಸಬೇಕು. 6000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚುವ ಸರ್ಕಾರದ ನಿರ್ಧಾರವನ್ನು ಕೈಬಿಡಬೇಕು. ನಿರುದ್ಯೋಗದಿಂದ ತತ್ತರಿಸಿರುವ ಯುವಜನರಿಗೆ ಉದ್ಯೋಗ ನೀಡಲು ತಕ್ಷಣವೇ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಘೋಷಿಸಬೇಕು. ಬೆಂಗಳೂರು ಮೆಟ್ರೋ ದರ ಕಡಿಮೆ ಮಾಡಬೇಕು. ಮಕ್ಕಳ ಮಾನಸಿಕ ಆರೋಗ್ಯ ಮತ್ತು ವ್ಯಕ್ತಿತ್ವದ ಬೆಳವಣಿಗೆ ಕಾಪಾಡಲು ಎಲ್ಲಾ ಆನ್‌ಲೈನ್ ಅಶ್ಲೀಲ ಕಾರ್ಯಕ್ರಮಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಚಂದ್ರಶೇಖರ ಮೇಟಿ, ವಿ.ಯಶೋಧರ್, ಪಿ.ಎಸ್.ಸಂಧ್ಯಾ, ಜಿ.ಎಸ್. ಸೀಮಾ, ಟಿ.ಆರ್.ಸುನೀಲ್ ಇದ್ದರು.

ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಹುಣಸೂರಿನ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳ ಸಾಧನೆ

ಮೈಸೂರು,ಮೇ.11(ಎಂಟಿವೈ)– ಎಂಟನೇ ತರಗತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಆರಂಭಿಸಿರುವ ನ್ಯಾಷನಲ್ ಮೀನ್ಸ್–ಕಮ್–ಮೆರಿಟ್ ಸ್ಕಾಲರ್‌ಶಿಪ್ (ಎನ್‌ಎಂಎಂಎಸ್) ಯೋಜನೆಯ ಪರೀಕ್ಷೆಯಲ್ಲಿ ಹುಣಸೂರಿನ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ವಿದ್ಯಾರ್ಥಿಗಳ ಅತ್ಯುತ್ತಮ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ ನೀಡುವ ಮೂಲಕ ಬೆಂಬಲ ನೀಡಿ ಪ್ರತಿಭಾವಂತ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಮಹತ್ತರ ಪಾತ್ರವಹಿಸುವ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಹುಣಸೂರಿನ ಸರ್ಕಾರಿ ಆದರ್ಶ ಶಾಲೆಯ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರೆ.

2024–25ನೇ ಸಾಲಿನ ಪರೀಕ್ಷೆಯಲ್ಲಿ ತಾಲೂಕಿನ 24 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಅವರಲ್ಲಿ 20 ಮಂದಿ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳೇ ಆಗಿದ್ದಾರೆ. ಶಾಲೆಯ ವಿದ್ಯಾರ್ಥಿಗಳಾದ ಎಂ.ದೀಕ್ಷಿತಾ, ಹೆಚ್.ಜಿ.ಹಂಶಿತ್, ಎಸ್.ಇಂಚರ, ಜೀವಿತಾ, ಲೇಖನ, ಮೊಹಮ್ಮದ್ ಜಾವದ್, ರಿಶಿತಾ, ಹೆಚ್.ಪಿ.ಚೇತನ್‌ಗೌಡ, ಹೆಚ್.ಎಸ್.ಚಿನ್ಮಯಿ, ಹೆಚ್.ನಮ್ರತಾ, ಎನ್.ಜಿ.ಪ್ರಜ್ಞಾ, ಎಂ.ಪ್ರಾರ್ಥನಾ, ಆರ್.ಎನ್.ಪುನೀತ್, ಡಿ.ಹೆಚ್.ರಮ್ಯಶ್ರೀ, ಸಂಕೇತ್ ಸಂತೋಷ್ ಜಂಗಮಶೆಟ್ಟಿ ಎಸ್. ಎಸ್. ಸೌಜನ್ಯ, ಉಮ್ಮೆರ್ಯ್ನ, ವಿಂದ್ಯಾ, ವಿನುಶ್ರೀ, ಸಿ.ಎಂ.ಯಕ್ಷಿತ್ ಆಯ್ಕೆಯಾಗಿದ್ದಾರೆ.

ಶೈಕ್ಷಣಿಕ ವರ್ಷಾರಂಭದಿಂದಲೇ ನಮ್ಮ ಶಾಲೆಯ ಶಿಕ್ಷಕರುಗಳು ನಿತ್ಯ ಎರಡು ವಿಶೇಷ ತರಗತಿಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳನ್ನು ಎನ್‌ಎಂಎಂಎಸ್ ಪರೀಕ್ಷೆಗೆ ಸಿದ್ಧಗೊಳಿಸಿದ್ದರ ಜತೆಗೆ ಶಿಕ್ಷಕ ವಿಕ್ರಂ ಅವರು ಭಾನುವಾರವೂ ವಿಶೇಷ ತರಗತಿಗಳನ್ನು ನಡೆಸಿ ಮಕ್ಕಳನ್ನು ಸಜ್ಜುಗೊಳಿಸಿದ್ದರು. ವಿದ್ಯಾರ್ಥಿಗಳೂ ಉತ್ತಮವಾಗಿ ಪರೀಕ್ಷೆ ಬರೆಯುವ ಮೂಲಕ ಎನ್‌ಎಂಎಂಎಸ್ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ಚಂದ್ರಕುಮಾರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಮೈಸೂರು ಪ್ರವಾಸ



ಮೈಸೂರು, ಮೇ 11– ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಮೈಸೂರು ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಮೇ 16 ರಂದು ಬೆಳಗ್ಗೆ 10.30 ಗಂಟೆಗೆ ಭಾರತೀಯ ಭಾಷಾ ಸಂಸ್ಥಾನದಲ್ಲಿ ನಡೆಯುವ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಸಭೆಯಲ್ಲಿ ಇವರು ಭಾಗವಹಿಸಲಿದ್ದಾರೆ.

ರಂಗಾಯಣ ಚಿಣ್ಣರ ಮೇಳದ ಮಕ್ಕಳ ನಾಟಕೋತ್ಸವಕ್ಕೆ ತೆರೆ

ಮಕ್ಕಳ ಕ್ರಿಯಾಶೀಲತೆಗೆ ರಂಗಭೂಮಿ ಉತ್ತಮ ವೇದಿಕೆ: ಪ್ರೊ.ಕಾಳಚನ್ನೇಗೌಡ



ರಂಗಾಯಣ ವನರಂಗದಲ್ಲಿ ನಡೆದ 'ಬಾಲ್ಯ–ಅಮೂಲ್ಯ ಚಿಣ್ಣರ ಮೇಳ'ದ ಮಕ್ಕಳ ನಾಟಕೋತ್ಸವ ಶನಿವಾರ ತೆರೆಕಂಡಿತು

ಮೈಸೂರು, ಮೇ 11(ಎಸ್‌ಪಿಎನ್)– ಮಕ್ಕಳ ಮನಸ್ಸಿನ ಕ್ರಿಯಾಶೀಲತೆಗೆ ಮಕ್ಕಳ ರಂಗಭೂಮಿ ಉತ್ತಮ ವೇದಿಕೆಯಾಗಲಿದೆ ಎಂದು ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳಚನ್ನೇಗೌಡ ಅಭಿಪ್ರಾಯಪಟ್ಟರು. ಮೈಸೂರು ವನರಂಗದಲ್ಲಿ ರಂಗಾಯಣದ ವತಿಯಿಂದ ಏರ್ಪಡಿಸಿದ್ದ ನಾಲ್ಕು ದಿನಗಳ ಮಕ್ಕಳ ನಾಟಕೋತ್ಸವದ 'ಬಾಲ್ಯ–ಅಮೂಲ್ಯ ಚಿಣ್ಣರ ಮೇಳ'ದ ಸಮಾರೋಪದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳು ವರ್ಷ ಪೂರ್ತಿ ತರಗತಿಗಳಿಗೆ ಸೀಮಿತರಾಗುತ್ತಾರೆ. ಈ ನಡುವೆ ಪಠ್ಯೇತರ ಚಟುವಟಿಕೆಗಳಿಗೆ ಗಮನಹರಿಸುತ್ತಿಲ್ಲ ಎಂಬ ಕೊರಗು ಇದೆ. ಈ ಕೊರಗು ನೀಗಿಸಲು ರಂಗಾಯಣದ ಚಿಣ್ಣರಮೇಳದ ವೇದಿಕೆಯಾಗುತ್ತಿರುವುದು ಸಂತೋಷದ ವಿಷಯ. ಹಾಗಾಗಿ ಚಿಣ್ಣರ ಮೇಳದ ಮೂಲಕ ಮಕ್ಕಳಿಗೆ ಕ್ರಿಯಾಶೀಲತೆಯಲ್ಲಿ ತೊಡಗಿಸಲು ಪೋಷಕರ ಪ್ರಯತ್ನ ಉತ್ತಮ ಯೋಚನೆ ಎಂದರು.

ಪ್ರತಿವರ್ಷ ರಂಗಾಯಣ ಆಯೋಜಿಸುವ ಚಿಣ್ಣರ ಮೇಳ, ಹಲವು ಮಕ್ಕಳ ಆಲೋಚನಾ ಲಹರಿಯನ್ನೆ ಬದಲಿಸಿದೆ. 25 ವರ್ಷಗಳ ಹಿಂದೆ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಈ ಚಿಣ್ಣರ ಮೇಳವನ್ನು ಆರಂಭಿಸಲಾಗಿತ್ತು. ಅಂದಿನಿಂದ ಇಂದಿನವರೆಗೆ ಈ ಚಿಣ್ಣರಮೇಳ ಸಾಂಸ್ಕೃತಿಕ ಚಟುವಟಿಕೆ ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾಗಿದೆ ಎಂದರು.

ಬಿ.ವಿ.ಕಾರಂತರು ಸ್ಥಾಪಿಸಿದ ರಂಗಾಯಣ, ಇಂದು ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿದೆ. ಹಾಗಾಗಿ ಇಲ್ಲಿನ ಚಟುವಟಿಕೆಗಳು ಅದೇ ಗುಣಮಟ್ಟವನ್ನು ಕಾಪಾಡಿಕೊಂಡಿದೆ. ಈ ಸಾಧನೆಯ ಹಿಂದೆ ಹಲವು ನಿರ್ದೇಶಕರು, ಕಲಾವಿದರ ಕೊಡುಗೆಯಿದೆ ಎಂದರು.

ರಂಗಸಮಾಜದ ಸದಸ್ಯ ಡಾ.ರಾಜಪ್ಪ ದಳವಾಯಿ ಮಾತನಾಡಿ, ಮಕ್ಕಳ ಆಲೋಚನೆಗಳನ್ನು ರಂಗರೂಪಕ್ಕೆ ತರುವಲ್ಲಿ ಚಿಣ್ಣರ ಮೇಳ ಸಹಕಾರಿ.

> ರಂಗಾಯಣದ ಪ್ರತಿಯೊಂದು ಸಾಂಸ್ಕೃತಿಕ ಚಟುವಟಿಕೆಗಳು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುತ್ತಿವೆ. ಹಾಗಾಗಿ ಮಕ್ಕಳ ನಾಟಕೋತ್ಸವ ಎಲ್ಲರ ಗಮನ ಸೆಳೆದಿದೆ.
> –ಕೆ.ಎಂ.ಗಾಯತ್ರಿ, ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಇದಕ್ಕೆ ರಂಗಾಯಣ ವೇದಿಕೆಯಾಗಿರುವುದು ಸಂತೋಷದಾಯಕ ಎಂದರು.

ವೇದಿಕೆಯಲ್ಲಿ ಹಿರಿಯ ಲೇಖಕಿ ಪದ್ಮಶ್ರೀ ರಾಮ್, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಚಿಣ್ಣರ ಮೇಳದ ಶಿಬಿರ ನಿರ್ದೇಶಕ ಅನಿಲರೇವೂರ್, ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಉಪಸ್ಥಿತರಿದ್ದರು. ನಂತರ ಕೋಟಿಗಾನಹಳ್ಳಿ ಕಥನ ಕೆ.ರಾಮಯ್ಯನವರ 12 ಮಕ್ಕಳ ನಾಟಕೋತ್ಸವ ಕೊನೆಯ ದಿನದ ಹಿರಿಯ ಕಲಾವಿದ ಎಸ್.ರಾಮು ನಿರ್ದೇಶನದ ಏಕಲವ್ಯ ನಗರ ನಾಟಕ 'ಥರ್‌ಭರ್ ಬುಡ್ಡಣ್ಣ', ಹಿರಿಯ ರಂಗಕರ್ಮಿ ಕೆ.ಸಿ.ರಘು ನಿರ್ದೇಶನದ ದೊಡ್ಡವ್ವನ ಮನೆನಾಟಕ 'ಕಾಗೆ ಕಣ್ಣು ಮತ್ತು ಇರುವೆ ಬಲ' ನಾಟಕವನ್ನು ಚಿಣ್ಣರು ಪ್ರದರ್ಶಿಸಿ, ಪ್ರೇಕ್ಷಕರ ಗಮನ ಸೆಳೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದಿ ಭೂತ್‌ನಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಈಡುಗಾಯಿ ಒಡೆದು ವಾಟಾಳ್ ನಾಗರಾಜ್‌ರಿಂದ ಭಾರತೀಯ ಸೈನಿಕರಿಗೆ ಗೌರವ ಸಮರ್ಪಣೆ



ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಸೈನಿಕರ ಕಟೌಟ್ ಎದುರು ಈಡುಗಾಯಿ ಒಡೆದು ಸೈನ್ಯದ ಪರ ಜೈಕಾರ ಕೂಗಿದರು.

ಮೈಸೂರು, ಮೇ11(ಜಿಎ)–ಭಾರತದ ಸೇನೆಯು ಪಾಕ್‌ಗೆ ತಕ್ಕ ಪ್ರತ್ಯುತ್ತರ ನೀಡಿರುವ ಹಿನ್ನೆಲೆಯಲ್ಲಿ ಭಾರತೀಯ ಸೈನಿಕರಿಗೆ ಗೌರವಾರ್ಥವಾಗಿ ಮೈಸೂರಿನ ಹಾರ್ಡಿಂಜ್ ವೃತ್ತ ಬಳಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಸೈನಿಕರ ಕಟೌಟ್ ಎದುರು ಈಡುಗಾಯಿ ಒಡೆದು ಸೈನ್ಯದ ಪರ ಜೈಕಾರ ಕೂಗಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪದೆ ಪದೇ ಕಾಲು ಕೆರೆದು ಬರುವ ಪಾಪಿ ಪಾಕಿಸ್ತಾನಕ್ಕೆ ತಕ್ಕ ಉತ್ತರವನ್ನು ನಮ್ಮ ಸೈನಿಕರು ಕೊಡುತ್ತಿದ್ದಾರೆ. ಕದನ ವಿರಾಮಕ್ಕೆ ಅಮೇರಿಕಾ ಮಧ್ಯಸ್ಥಿಕೆ ವಹಿಸಿ ಶಾಂತಿ ನೆಲೆಸಲು ಪ್ರಯತ್ನ ಮಾಡಿದೆ. ಆದರೂ ಪಾಕಿಸ್ತಾನ ಕದನ ವಿರಾಮ ಉಲ್ಲಂಘನೆ ಮಾಡುತ್ತಿದೆ. ಭಾರತ ಪಾಕಿಸ್ತಾನಕ್ಕೆ ದಿಟ್ಟ ಪ್ರತ್ಯುತ್ತರ ಕೊಡುತ್ತಿದೆ. ನಮ್ಮ ಭಾರತೀಯ ಸೈನಿಕರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಅಭಿನಂಧಿಸುತ್ತೇನೆ ಎಂದರು.

ಯೋಧರ ಹೋರಾಟ ಅಗಾಧವಾದದ್ದು, ಕೇಂದ್ರ ಸರ್ಕಾರ, ವಿರೋಧ ಪಕ್ಷ ಒಂದೇ ಧ್ವನಿಯಲ್ಲಿ ಇದ್ದಾರೆ. ಪ್ರತಿಯೊಬ್ಬರೂ ದೇವರ ಜೊತೆಗೆ ಯೋಧರನ್ನು ನೆನೆಸಿಕೊಳ್ಳಬೇಕು. ಟ್ರಂಪ್ ಒಳ್ಳೆಯ ವಾತಾವರಣ ನಿರ್ಮಾಣ ಮಾಡಲು ಕದನ ವಿರಾಮ ಮನವಿಯನ್ನು ಮಾಡಿದರು. ಈ ಮಾತನ್ನು ಗೌರವಿಸಿ ಭಾರತ ಯುದ್ಧ ನಿಲ್ಲಿಸಿದರು. ಪಾಕಿಸ್ತಾನದಲ್ಲಿ ಮಿಲಿಟರಿ ಜನರಲ್ ತನ್ನ ಇಚ್ಛೆಯಂತೆ ಹೊರಟಿದ್ದಾರೆ. ಪಾಕಿಸ್ತಾನದ ಜನರು ಸಹ ಯುದ್ಧ ಬೇಡ ಎಂದಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಸಹ ವಿರೋಧ ಮಾಡಿದ್ದಾರೆ. ಕದನ ವಿರಾಮ ಉಲ್ಲಂಘನೆ ಮಾಡಿದರೆ ಯುದ್ಧಕ್ಕೆ ತಯಾರು ಮಾಡಬೇಕು ಎಂದರು.

ಪಿಎಚ್.ಡಿ ಪದವಿ



ಮೈಸೂರು, ಮೇ 11– ಡಾ. ಶೀಲಾ ಹೆಚ್.ಕೆ. ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ಬಿ. ಮಂಗಳ ಶೇಖರ್ ಅವರು ನೃತ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಯಾರದ್ದೋ ಮಾತು ಕೇಳಿ ಪಾಕ್ ವಿರುದ್ಧ ಸಂಘರ್ಷ ನಿಲ್ಲಿಸಬಾರದಿತ್ತು: ಹೊರಟ್ಟಿ ಅಸಮಾಧಾನ



ಚಿಕ್ಕೋಡಿ, ಮೇ 11– ಯಾರದ್ದೋ ಮಾತು ಕೇಳಿ ಪಾಕ್ ವಿರುದ್ಧ ಭಾರತ ಸಂಘರ್ಷ ನಿಲ್ಲಿಸಬಾರದಿತ್ತು ಎಂದು ಪ್ರಧಾನಿ ಮೋದಿ ವಿರುದ್ಧ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅಸಮಾಧಾನ ಹೊರಹಾಕಿದ್ದಾರೆ. ಈ ಕುರಿತು ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈ ಸಂಘರ್ಷದಲ್ಲಿ ಪಾಕಿಸ್ತಾನವನ್ನು ನಾಶ ಮಾಡಬೇಕಿತ್ತು. ಕದನ ವಿರಾಮದ ನಂತರ ಮತ್ತೆ ದಾಳಿ ಮಾಡಿದ್ದಾರೆ. ಬೇರೆಯವರ ಮಾತು ಕೇಳಿ ಪಾಕಿಸ್ತಾನದ ಜೊತೆ ನಡೆಸುತ್ತಿದ್ದ ಸಂಘರ್ಷ ಕೈ ಬಿಟ್ಟಿದ್ದು ತಪ್ಪು. ಪಾಕಿಸ್ತಾನದವರು ಸಾಯುವವರೆಗೂ ವೈರಿಗಳೇ. ಅವರು ಎಂದಿಗೂ ನಮಗೆ ಒಳ್ಳೆಯದು ಮಾಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಾಕ್ ಹಾಗೂ ಭಾರತದ ನಡುವೆ ಸಂಧಾನದಲ್ಲಿ ಟ್ರಂಪ್ ಮಧ್ಯಸ್ಥಿಕೆ ವಹಿಸಲು ಅವರು ಯಾರು? ಅಮೆರಿಕದ ವಿಚಾರದಲ್ಲಿ ನಾವು ಏನಾದರೂ ಹೇಳಿದರೆ ಅವರು ಕೇಳುತ್ತಾರಾ? ಮೋದಿಯವರು ಕಠಿಣ ಹಾಗೂ ಗಟ್ಟಿ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಈ ವಿಚಾರದಲ್ಲಿ ಟ್ರಂಪ್ ಮಾತು ಕೇಳಿದ್ದು ತಪ್ಪು. ಭಯೋತ್ಪಾದಕರ ವಿಚಾರದಲ್ಲಿ ಎಲ್ಲಾ ದೇಶಗಳು ಶೃಂಗಸಭೆಯನ್ನೂ ನಡೆಸಿ ಭಯೋತ್ಪಾದಕರನ್ನು ನಾಶ ಮಾಡಬೇಕು ಎಂದು ಒತ್ತಾಯಿಸಿದರು.

13ನೇ ವರ್ಷದ ಸವಿನೆನಪು



ಶ್ರೀ ನಾಗರಾಜು

ಇವರ ನೆನಪಿನಲ್ಲಿ ಶ್ರೀಮತಿ ನಾಗರತ್ನ, ಮಕ್ಕಳು ಹಾಗೂ ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಂ. ರಾಮಯ್ಯ

ಇವರು ದಿ: ದಿನಾಂಕ 02–05–2025 ನೇ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು **ದಿನಾಂಕ 14–05–2025ನೇ ಬುಧವಾರ ಮಧ್ಯಾಹ್ನ 12–00 ಗಂಟೆಗೆ ನಮ್ಮ ಸ್ವಗೃಹ ನಂಜನಗೂಡು ತಾಲ್ಲೂಕು, ಕೌಲಂದೆ ಹೋಬಳಿ, ಹಾಡ್ಯ ಗ್ರಾಮದಲ್ಲಿ** ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ,

ಇಂತಿ ದುಃಖತಪ್ತರು :ಮೃತರ ಪತ್ನಿ ಶ್ರೀಮತಿ ದೇವಾಜಮಣ್ಣಿ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬದವರು

ಭೋಜನ : ಮಧ್ಯಾಹ್ನ 1–00 ಗಂಟೆಗೆ

PUBLIC NOTICE

My Client is intended to purchase below mentioned Schedule Property from **Smt. SUJATHA** W/o. Sri. Kale Gowda they have acquired the title of the Schedule Property through Partition Deed / Sale deed / Gift Deed & with other transactions. Any person having any right, title, interest, claim in or to the Schedule Property or any part thereof by way of any agreement, contract, lease, trust, inheritance, gift, possession, mortgage, exchange or any such deed/instrument of transfer, easement or otherwise, may submit their objection(s), claim(s) by direct or in writing with us at the under mentioned address through Registered Post along with the supporting documentary proof, within Seven **(7) days** from the date of this publication. Any objections received thereafter will not be binding on my Client and my Client shall proceed with the Sale.

SCHEDULE

All that piece and parcel of Residential Vacant Site No. **2139/2**, Janjar No. 674, as per plan approved by Hinkal Mandal Panchayath on dated: 12.11.1992 vide Document No. 24667742, Site No. 3 & as per Form No. 3, Property No. 7175359462, situated at Hinkal Village, Kasaba Hobli, Mysuru Taluk & District, as per issued by Hinkal Mandal Panchayath, measuring East to West 35.00 Feet (10.67 Meter), North to South 35.00 Feet (10.67 Meter), totally measuring 1225 Square Feet (113.8067 Square Meter) and bounded by : East by- Remaining property of Site No. 3, West by -Road, North by - Temple, South by- Road.

Sd/- **B.S. Leena Devi Papanna**
Advocate, Roll No. KAR 1558/05
9/1, 12th Cross, V V Mohalla, Mysore
Ph No. **9449135412**

Date : 11.05.2025, Place : Mysuru.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹೂಟಗಳ್ಳಿ ಗ್ರಾಮ, ಮನೆ ನಂ.62, ಎಂ.ಐ.ಜಿ–1, ಗ್ರೂಪ್–2 ಕೆ.ಹೆಚ್.ಬಿ ಕಾಲೋನಿಯಲ್ಲಿ ವಾಸವಾಗಿರುವ ಶ್ರೀ ನಂಜೇಗೌಡ ರವರ ಮಗನಾದ **ಶ್ರೀ ರಂಗಸ್ವಾಮಿ ಬಿ. ಎನ್ (ಆಧಾರ್ ನಂ. 4391** 9134 5144 **ಪ್ಯಾನ್ ನಂ. ANEPR2461B**) ಹಾಗೂ ಇವರ ಧರ್ಮಪತ್ನಿಯಾದ **ಶ್ರೀಮತಿ ಶೈಲಜ ಬಿ (ಆಧಾರ್ ನಂ.** 7864 8102 1847 **ಪ್ಯಾನ್ ನಂ. CQBPS1646B**) ರವರುಗಳು ಅನುಸೂಚಿ ಸ್ವತ್ತಿನ ಮಾಲೀಕರಾದಂತಹ ಅಂದರೆ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹುಣಸೂರು ಟೌನ್, ಗೌತಮ್ ಪೆಟ್ರೋಲ್ ಬಂಕ್ ಎದುರು, ಬಿ. ಎಂ. ರಸ್ತೆ, ಮನೆ ನಂ. 3762/6 ರಲ್ಲಿ ವಾಸವಾಗಿರುವ ಶ್ರೀ ಈಶ್ವರ ರವರ ಮಗನಾದ **ಶ್ರೀ ಸಂತೋಷ್ (ಆಧಾರ್** ನಂ. 2461 4660 5175 **ಮತ್ತು ಪ್ಯಾನ್ ನಂ. FPPPS5761R**) ರವರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು ಸರಿಯಷ್ಟೇ, ನಂತರ ದಿನಾಂಕ:25–04–2025 ರಂದು ನೊಂದಾಯಿತ ಕ್ರಯದ ಕರಾರು ಪತ್ರ ಮಾಡಿ–ಕೊಂಡಿದ್ದು, ಸದರಿ ಕ್ರಯದ ಕರಾರು ಪತ್ರವು ಉಪ ನೊಂದಾಣಿಧಿಕಾರಿಗಳ ಕಛೇರಿ ಮೈಸೂರು ಉತ್ತರದಲ್ಲಿ ಒಂದನೇ ಪುಸ್ತಕದ ದಸ್ತಾವೇಜು ಸಂಖ್ಯೆ **ಎಂ.ವೈ.ಎನ್** –1–00801–2025–26 ನೇ ನಂಬರ್ ಆಗಿ ನೋಂದಾವಣಿಗೊಂಡಿರುತ್ತದೆ.

ಅನುಸೂಚಿ ಸ್ವತ್ತುಗಳಿಗೆ ಸಂಬಂಧ ಯಾರಾದರೂ ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರೂ ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲ, ಬಾಕಿ, ಇತರೆ ತಂಟೆ–ತಕಾರರು ಹಾಗೂ ಯಾವುದೇ ರೀತಿಯ ಕೋರ್ಟಿನ ವ್ಯಾಜ್ಯಗಳು ಮುಂತಾದವುಗಳು ಇದ್ದಲ್ಲಿ ಅವರು ಖುದ್ದಾಗಿ ಸೂಕ್ತವಾದ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (**ಹದಿನೈದು**) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತುಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೇಮ್ ಆಧಾರ, ಸಾಲ, ಬಾಕಿ ಇರುವುದಿಲ್ಲ ಎಂದು ಪರಿಗಣಿಸಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಗಳಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಅನುಸೂಚಿ ಷೆಡ್ಯೂಲ್‌ಸ್ವತ್ತುಗಳ ವಿವರಗಳು:–

ಐಟಂ ನಂ–1

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಹಗರನಹಳ್ಳಿ ಗ್ರಾಮ, ಸದರಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 49/4 (ಹಳೇ ಸರ್ವೆ ನಂ. 49) ರಲ್ಲಿರುವ ಒಂದನೇ ಪಾರ್ಟಿಯಾದ ಶ್ರೀ ಸಂತೋಷ್ ರವರ ಬಾಬ್ತು 1–20 (ಒಂದು ಎಕರೆ ಇಪ್ಪತ್ತು ಗುಂಟೆ) ಆಕಾರ 0.88 ಪೈಸೆ ಜಮೀನಿಗೆ ಚೆಕ್ಕುಬಂದಿ:–

ಪೂರ್ವಕ್ಕೆ: ಶ್ರೀ ಬೋರಿಚಲುವಯ್ಯ ರವರ ಜಮೀನು, ಪಶ್ಚಿಮಕ್ಕೆ: ಶ್ರೀ ಹೆಚ್. ಟಿ ಲಕ್ಷ್ಮಣೇಗೌಡ ರವರ ಜಮೀನು, ಉತ್ತರಕ್ಕೆ: ನಮ್ಮ ಬಾಬ್ತು ಸರ್ವೆ ನಂ. 46ರ ಜಮೀನು, ದಕ್ಷಿಣಕ್ಕೆ: ಶ್ರೀ ಚಿಕ್ಕಚಲುವಯ್ಯ ರವರ ಜಮೀನು

ಐಟಂ ನಂ–2

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಹಗರನಹಳ್ಳಿ ಗ್ರಾಮ, ಸದರಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 46/5 ರಲ್ಲಿರುವ ಒಂದನೇ ಪಾರ್ಟಿಯಾದ ಶ್ರೀ ಸಂತೋಷ್ ರವರ ಬಾಬ್ತು 0–27 (ಇಪ್ಪತ್ತೇಳು ಗುಂಟೆ) ಆಕಾರ 3.23 ಪೈಸೆ ಉಳ್ಳ ಖುಷ್ಕಿ ಜಮೀನಿಗೆ ಚೆಕ್ಕುಬಂಧಿ:–

ಪೂರ್ವಕ್ಕೆ: ಶ್ರೀಮತಿ ಸರೋಜಮ್ಮ ಮತ್ತು ತಮ್ಮಣ್ಣ ರವರ ಜಮೀನು, ಪಶ್ಚಿಮಕ್ಕೆ: ಶ್ರೀ ಹೆಚ್. ಟಿ ಲಕ್ಷ್ಮಣೇಗೌಡ ರವರ ಜಮೀನು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ. 49/4, ಒಂದನೇ ಪಾರ್ಟಿ ರವರ ಜಮೀನು.

ಈ ಮಧ್ಯೆಯಿರುವ ಎರಡು ಖುಷ್ಕಿ ಜಮೀನಿನುಗಳ ಒಟ್ಟು ವಿಸ್ತೀರ್ಣ 2–07 (ಎರಡು ಎಕರೆ ಏಳು ಗುಂಟೆ) ಆಗಿರುತ್ತದೆ.

ಎಸ್.ಸುರೇಶ್ B.B.M LL.,B, ವಕೀಲರು
ವಿಳಾಸ:– ಮನೆ ಮತ್ತು ಕಛೇರಿ ನಂ. 974, "ಸಪ್ತಶ್ರೀ ನಿಲಯ" 7ನೇ ಮೇನ್,ಡಾಕ್ಟರ್ಸ್ ಕಾರ್ನರ್ ಹತ್ತಿರ, ಗೋಕಲಂ 3ನೇ ಹಂತ, ದೇವರಾಜ ಮೊಹಲ್ಲಾ, ಮೈಸೂರು–570002
ಮೊಬೈಲ್ ನಂ. –9886229668/9482898186

ಮೈಸೂರು ಮಿತ್ರ 46 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು